ಕನ್ನಡ

# ಬಾಲಭಾರತಿ

ಎಂಟನೆಯ ತರಗತಿ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ-2116 /(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿತವಾದ ಸಮನ್ವಯ ಸಮಿತಿಯ ದಿನಾಂಕ 29.12.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕ ಸನ 2018-19 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ನೀಡಲಾಗಿದೆ.

## ಕನ್ನಡ

# ಬಾಲಭಾರತಿ

## ಎಂಟನೆಯ ತರಗತಿ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

MS4YSR

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R.Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R.Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

**ಪ್ರಥಮಾವೃತ್ತಿ : 2018**
**ಪುನರ್ಮುದ್ರಣ : 2022**

**© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ:**
ಡಾ. ಕೆ.ಕೆ. ಪತ್ತಾರ, ಅಧ್ಯಕ್ಷ
ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ
ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ
ಶ್ರಿ ಜಿ. ಸಿ. ಮಠ (ನಿಯಂತ್ರಿತ ಸದಸ್ಯ)
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ- ಸಚಿವ.

**ಕನ್ನಡ ಅಭ್ಯಾಸಗಟ ಸದಸ್ಯರು:**
ಶ್ರೀ. ಶ್ರೀಶೈಲ ಜಿ. ಅವಟಿ
ಶ್ರಿ. ಜಿ.ಡಿ. ಮೋರೆ

**ಸಂಯೋಜನ ಪ್ರಮುಖರು:**
**ಡಾ. ಸದಾನಂದ ಎಂ ಬಿಳ್ಳೂರ,**
ವಿಶೇಷಾಧಿಕಾರಿ ಕನ್ನಡ,
ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ-4
**ಶ್ರೀ. ಆರ್. ಎಮ್. ಗಣಾಚಾರಿ,**
ವಿಷಯ ಸಹಾಯಕ ಕನ್ನಡ

**ಚಿತ್ರಕಾರ:** ಶ್ರಿ. ರಾಜೇಂದ್ರ ಗಿರಧಾರಿ.
**ಮುಖಪುಟ:** ಶ್ರಿ. ವಿವೇಕಾನಂದ ಪಾಟಿಲ್

**ನಿರ್ಮಿತಿ:**
**ಶ್ರೀ. ಸಚ್ಚಿತಾನಂದ ಆಫಳೆ.**
ಮುಖ್ಯ ನಿರ್ಮಿತಿ ಅಧಿಕಾರಿ
**ಶ್ರೀ. ಸಚಿನ ಮೆಹತಾ,** ನಿರ್ಮಿತಿ ಅಧಿಕಾರಿ
**ಶ್ರೀ. ನಿತಿನ ವಾಣಿ,** ಸಹಾಯಕ ನಿರ್ಮಿತಿ ಅಧಿಕಾರಿ

**ಅಕ್ಷರ ಜೋಡಣೆ:**
P C GRAPHIC (ಪಿ. ಸಿ. ಗ್ರಾಫಿಕ್)
**ಕಾಗದ:**
70 ಜಿ.ಎಸ್.ಎಮ್. ಕ್ರೀಮ್‌ವೋವ್
**ಮುದ್ರಣಾದೇಶ:**
N/PB/2022-23/2,000
**ಮುದ್ರಕ:**
M/S. SHARP INDUSTRIES, RAIGAD

**ಪ್ರಕಾಶಕ:**
**ಶ್ರೀ. ವಿವೇಕ ಗೋಸಾವಿ,**
ನಿಯಂತ್ರಕ ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ - 25

## ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿ ಗೆಳೆಯರೆ,

ಎಂಟನೆಯ ಇಯತ್ತೆಯಲ್ಲಿ ನಿಮ್ಮೆಲ್ಲರಿಗೂ ಸ್ವಾಗತ. ನೀವೆಲ್ಲರೂ ಏಳನೆಯ ಕನ್ನಡ ಬಾಲಭಾರತಿ ಪಠ್ಯಪುಸ್ತಕವನ್ನು ಅಭ್ಯಸಿಸಿದ್ದೀರಿ. ಈಗ ಹೊಸ ಪಠ್ಯಪುಸ್ತಕ ನೋಡಲು ಬಹಳಷ್ಟು ಆತುರರಾಗಿದ್ದೀರಿ. ಎಂಟನೆಯ ಇಯತ್ತೆಯ ಈ ಹೊಸ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ನಮಗೆ ಅತ್ಯಂತ ಆನಂದವೆನಿಸುತ್ತದೆ.

ಪಠ್ಯಪುಸ್ತಕಗಳು ನಿಮ್ಮ ಗೆಳೆಯರು. ಈ ಪಠ್ಯಪುಸ್ತಕದಲ್ಲಿ ಹೊಸ ಹೊಸ ಕಥೆ, ಕವಿತೆಗಳಿವೆ. ಎಂಟನೆಯ ಇಯತ್ತೆಯ ಪಠ್ಯಪುಸ್ತಕದಲ್ಲಿ ಗದ್ಯ, ಪದ್ಯ ಹಾಗೂ ವ್ಯಾಕರಣ ಇವುಗಳನ್ನು ಸ್ವತಂತ್ರವಾಗಿ ಕೊಡಲಾಗಿದೆ. ಆನಂದದಾಯಕ ಶಿಕ್ಷಣಕ್ಕಾಗಿ ನೀತಿಬೋಧಕಥೆ, ಹಾಡು, ವೈಜ್ಞಾನಿಕ ಮತ್ತು ದೇಶಭಕ್ತಿ ಗೀತೆಗಳನ್ನು ಅಳವಡಿಸಲಾಗಿದೆ. ಭಾಷಾ ಕೌಶಲ್ಯಗಳ ವಿಕಾಸಕ್ಕಾಗಿ ನಾವೀನ್ಯಪೂರ್ಣ ಅಭ್ಯಾಸ, ಉಪಕ್ರಮ ಇವುಗಳನ್ನು ಅಂತರ್ಭಾವಗೊಳಿಸಲಾಗಿದೆ. ಚಿತ್ರಗಳ ನಿರೀಕ್ಷಣೆ, ಚರ್ಚೆ, ವಿಚಾರ ಹಾಗೂ ಆ ವಿಷಯಗಳ ಕುರಿತು ಸ್ವಂತದ ಅನುಭವ-ಕಥನ ಮಾಡಿದುದರಿಂದ ನಿಮಗೆ ಸ್ವತಃ ಕಲ್ಪನೆ ಮಾಡಿ ಬರೆಯಲು ಬರುವುದು; ಅದರಂತೆ ವಿಚಾರಗಳನ್ನು ವ್ಯಕ್ತಪಡಿಸಲು ಬರುವುದು. ಕವಿತೆ ಹಾಡಲು, ಸಂಭಾಷಣೆ ಓದಿ ತಿಳಿದುಕೊಂಡು ವರ್ಗದಲ್ಲಿ ಸಾದರಪಡಿಸುವುದು. ಕಥೆಗಳನ್ನು ಓದಿ ಕಲ್ಪನೆಯ ಲೋಕದಲ್ಲಿ ವಿಹರಿಸುವುದು; ಹಾಸ್ಯ ಕಥೆಗಳನ್ನು ಹೇಳಿ ನಗಿಸುವುದು ನಿಮಗೆ ಹಿಡಿಸುತ್ತದೆ. ಈ ಎಲ್ಲ ಸಂಗತಿಗಳು ಈ ಪುಸ್ತಕದಲ್ಲಿ ಸಮಾವೇಶಗೊಂಡಿವೆ.

ಕನ್ನಡವು ನಮ್ಮ ಮಾತೃಭಾಷೆಯಾಗಿದೆ. ಮಾತೃಭಾಷೆಯಲ್ಲಿ ನಮ್ಮ ವಿಚಾರ, ಭಾವನೆಗಳನ್ನು ವ್ಯಕ್ತಪಡಿಸಲು, ಭಾಷೆ ಸಮೃದ್ಧಗೊಳ್ಳಲು ನಿಮಗೆ ಕನ್ನಡ ಭಾಷೆಯಲ್ಲಿ ಉತ್ತಮ ರೀತಿಯಾಗಿ ಸಂವಾದ ಸಾಧಿಸಲು ಬರುವಂತೆ ಆತ್ಮ ವಿಶ್ವಾಸದಿಂದ ಸ್ಪಷ್ಟವಾಗಿ ಉಚ್ಚರಿಸಲು ಯೋಗ್ಯ ಏರಿಳಿತದಿಂದ ಮಾತನಾಡಲು, ಪತ್ರ ವ್ಯವಹಾರ ಮಾಡಲು ಇತ್ಯಾದಿ ದೈನಂದಿನ ಜೀವನದಲ್ಲಿ ಅವಶ್ಯವಾದ ವಿಷಯಗಳನ್ನು ಬರೆಯಲು, ಓದಲು ಬರಬೇಕೆಂಬ ಅಪೇಕ್ಷೆ ಇದೆ. ವ್ಯಾಕರಣಹಾಗೂ ಉಪಯೋಜಿತ ಲೇಖನಗಳನ್ನು ಕೊಡಲಾಗಿದೆ. ಅದರಿಂದಾಗಿ ನೀವು ನಿಶ್ಚಿತವಾಗಿ ವ್ಯಾಕರಣವನ್ನು ಕಲಿಯುವಿರಿ.

ಎಂಟನೆಯ ಕನ್ನಡ ಬಾಲಭಾರತಿ ಈ ಪಠ್ಯಪುಸ್ತಕವು ನಿಮ್ಮೆಲರಿಗೂ ಇಷ್ಟವಾಗಬಹುದೂಎಂಬ ವಿಶ್ವಾಸವಿದೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ
ಮಂಡಳ, ಪುಣೆ

ಪುಣೆ
ದಿನಾಂಕ: 18 ಎಪ್ರಿಲ 2018,
ಅಕ್ಷಯ ತೃತಿಯಾ
ಭಾರತೀಯ ಸೌರ ದಿನಾಂಕ:
28 ಚೈತ್ರ 1940

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಕನ್ನಡ ಎಂಟನೆಯ ಇಯತ್ತೆ : ಅಧ್ಯಯನ ನಿಷ್ಪತ್ತಿಗಳು

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
|---|---|
| ಎಲ್ಲ ವಿದ್ಯಾರ್ಥಿಗಳಿಗೆ (ಬೇರೆ ರೂಪದಲ್ಲಿ ಸಕ್ಷಮ ಹುಡುಗರೊಂದಿಗೆ) ವ್ಯಕ್ತಿಗತ ಅಥವಾ ಸಾಮೂಹಿಕ ಸ್ವರೂಪದಲ್ಲಿ ಪ್ರೋತ್ಸಾಹ ಕೊಡಬೇಕಾಗಿ ಕಾರಣ ಅವರಿಗೆ-<br>• ಕನ್ನಡ ಭಾಷೆಯಲ್ಲಿ ಮಾತನಾಡುವ ಅದರಂತೆ ಚರ್ಚೆ ಮಾಡುವ ಅವಕಾಶ ಕೊಡಬೇಕು<br>• ಉಪಯೋಗ ಬರುವ ಭಾಷೆಯ ಸೂಕ್ಷ್ಮತೆಯ ಮೇಲೆ ಚರ್ಚೆ ಮಾಡುವ ಅವಕಾಶ ಕೊಡಬೇಕು<br>• ಗುಂಪಿನಲ್ಲಿ ಕಾರ್ಯ ಮಾಡುವಾಗ ಮತ್ತು ಒಬ್ಬರಿಗೊಬ್ಬರ ಕೆಲಸದ ವಿಷಯದ ಚರ್ಚೆ ಮಾಡುವುದು, ಮತ ಕೊಡ-ಕೊಳ್ಳುವಿಕೆ, ಪ್ರಶ್ನೆ ವಿಚಾರಣೆಗೆ ಸ್ವಾತಂತ್ರ್ಯ ಕೊಡಬೇಕು.<br>• ಕನ್ನಡದ ಜೊತೆಗೆ ಇತರ ಭಾಷೆಯಲ್ಲಿಯ ಸಾಹಿತ್ಯ ಓದುವ, ಅದರಂತೆ ಬರೆಯುವ ಅವಕಾಶ ಮತ್ತು ಅದರ ಮೇಲೆ ಚರ್ಚೆ ಮಾಡುವ ಸ್ವಾತಂತ್ರ್ಯ ಕೊಡಬೇಕು.<br>• ನಮ್ಮ ಕುಟುಂಬದೊಂದಿಗೆ ಮತ್ತು ಸಮಾಜದೊಂದಿಗೆ ಸಂಬಂಧಿತ ವಿವಿಧ ಸಾಹಿತ್ಯದ ವಾಚನ ಮತ್ತು ಅದರ ಮೇಲೆ ಚರ್ಚೆ ಮಾಡುವ ಅವಕಾಶ ಕೊಡಬೇಕು<br>• ನಮ್ಮ ಭಾಷೆ ಓದುವಾಗ, ಬರೆಯುವಾಗ ಸಂದರ್ಭದಲ್ಲಿಯ ಕ್ರಿಯೆ ಆಯೋಜಿಸಬೇಕು ಉದಾ- ಶಬ್ದ ಆಟ ಅನೌಪಚಾರಿಕ ಪತ್ರ, ಸಂಸ್ಮರಣ ಇತ್ಯಾದಿ.<br>• ಸಕ್ರಿಯ ಮತ್ತು ಜಾಗರೂಕರಿರುವ ಸಲುವಾಗಿ ತಯಾರಿಸುವ ಸಾಹಿತ್ಯ (ಉದಾ, ವರ್ತಮಾನ ಪತ್ರ, ಪತ್ರಿಕೆ, ಚಿತ್ರಪಟ ಮತ್ತು ದೃಕ್ ಶ್ರಾವ್ಯ ಸಾಹಿತ್ಯ ಇತ್ಯಾದಿ) ನೋಡುವ, ಕೇಳುವ, ಓದುವ, ಬರೆಯುವ ಅವಕಾಶ ಕೊಡಬೇಕು.<br>• ಕಲ್ಪನೆ ಶಕ್ತಿ ಮತ್ತು ಸೃಜನಶೀಲತೆಯ ವಿಕಾಸ, ಮಾಡುವ ಕ್ರಿಯೆ ಉದಾ, ಅಭಿನಯ, ಮೂಕಾಭಿನಯ, ಕವಿತೆ, ಪಾಠ, ಸೃಜನಾತ್ಮಕ ಲೇಖ, ವಿವಿಧ ಸ್ಥಿತಿಯಲ್ಲಿಯ ಸಂವಾದ ಇತ್ಯಾದಿಗಳನ್ನು ಆಯೋಜಿಸಲು ಮತ್ತು ಅವುಗಳ ತಯಾರಿಕೆಗೆ ಸಂಬಂಧಿತ ಬರೆದ ಸಾಹಿತ್ಯ ಮತ್ತು ವರದಿ ಬರೆಯುವ ಅವಕಾಶ ಕೊಡಬೇಕು.<br>• ಶಾಲೆ/ ವಿಭಾಗ/ ಇಯತ್ತೆಗಳ ಪತ್ರಿಕೆ/ ಭಿತ್ತಿ ಪತ್ರಿಕೆ ತಯಾರಿಸುವ ಸಲುವಾಗಿ ಪ್ರೋತ್ಸಾಹ ಕೊಡಬೇಕು. | ಅಧ್ಯಯನಾರ್ಥಿ<br>08.06.01 ವಿವಿಧ ವಿಷಯಗಳ ಮೇಲೆ ಆಧಾರಿತ ವಿವಿಧ ಪ್ರಕಾರದ ಸಾಹಿತ್ಯ ಓದಿ ಅದರ ಮೇಲೆ ಚರ್ಚೆ ಮಾಡುವುದು. ಉದಾ, ಪಠ್ಯಪುಸ್ತಕದಲ್ಲಿಯ ಯಾವದೊಂದು ಪಕ್ಷಿ ವಿಷಯದ ಮಾಹಿತಿ ಓದಿ ಪಕ್ಷಿ ವಿಷಯ ಬರೆದಿರುವ ಪುಸ್ತಕ ಓದುತ್ತಾನೆ ಮತ್ತು ಚರ್ಚೆ ಮಾಡುವವನು.<br>08.06.02 ಕನ್ನಡ ಭಾಷೆಯಲ್ಲಿಯ ವಿವಿಧ ಪ್ರಕಾರದ ಸಾಹಿತ್ಯ (ವರ್ತಮಾನಪತ್ರಗಳು, ಮಾಸಿಕ, ಕಥೆ ಇಂಟರನೆಟ್ ಪ್ರಸಿದ್ಧಿಯಾಗುವ ಇತರ ಸಾಹಿತ್ಯ) ತಿಳಿದುಕೊಂಡು ಓದಿ ಆ ವಿಷಯದ ಮೌಖಿಕ ಮತ್ತು ಲೇಖನ ಸ್ವರೂಪದಲ್ಲಿ ಪ್ರತಿಕ್ರಿಯೆ ವ್ಯಕ್ತ ಮಾಡುವವನು.<br>08.06.03 ಸ್ವತದ ಪರಿಸರದಲ್ಲಿಯ ಜನಪದ, ಜನಪದ ಗೀತ ಮತ್ತು ಆಡುಭಾಷೆ ಈ ವಿಷಯದ ಮಾಹಿತಿ ಪಡೆಯವನು. ಆದರಲ್ಲಿಯ ಶಬ್ದಗಳ ಸ್ವರೂಪ ಮತ್ತು ಮಾತಾಡುವ ಶೈಲಿ ತಿಳಿದುಕೊಳ್ಳುವನು.<br>08.06.04 ವಿವಿಧ ಸಂವೇದನಶೀಲ ವಿಷಯಗಳ ನಮ್ಮ ಮಿತ್ರ, ಶಿಕ್ಷಕ ಮತ್ತು ಕುಟುಂಬದಲ್ಲಿಯ ಸದಸ್ಯ ಇವರಿಗೆ ಪ್ರಶ್ನೆ ವಿಚಾರಿಸುವನು. ಚರ್ಚೆ ಮಾಡುವನು ಉದಾ. ಹಬ್ಬ ಆಚರಿಸುವ ವಿವಿಧ ಪದ್ಧತಿ<br>08.06.05 ಯಾವುದೇ ಸಾಹಿತ್ಯ ಓದಿ ಅದರಲ್ಲಿಯ ಸಾಮಾಜಿಕ ಮೌಲ್ಯ ವಿಷಯಗಳ ಚರ್ಚೆ ಮಾಡುವನು. ಅವುಗಳ ಕಾರಣಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವನು. ಅದರ ಕುರಿತು ತಮ್ಮ ಮತ ಮಂಡಿಸುವನು. ಚಿಂತನ ಮಾಡುವನು, ಪ್ರಶ್ನೆ ವಿಚಾರಿಸುವನು.<br>08.06.06 ವಿವಿಧ ಪ್ರಕಾರದ ಸಾಹಿತ್ಯ ಉದಾ, ಕಥೆ, ಕವಿತೆ, ಲೇಖನ, ವರದಿ, ವೃತ್ತಾಂತ, ಸ್ಮರಣಪತ್ರ, ವ್ಯಂಗ್ಯಚಿತ್ರ, ನಿಬಂಧ ಇತ್ಯಾದಿಗಳ ಸೂಕ್ಷ್ಮ ವಾಚನಮಾಡಿ ಆ ವಿಷಯದ ಅನುಮಾನ ತೆಗೆಯುವನು. ಅವುಗಳ ವಿಶ್ಲೇಷಣೆ ಮಾಡುವನು. ಅದರಲ್ಲಿಯ ಪ್ರಮುಖ ಸಂಗತಿಗಳನ್ನು ಹುಡುಕುವನು.<br>08.06.07 ಓದಿದ ಸಾಹಿತ್ಯದಲ್ಲಿಯ ಹೊಸ ಶಬ್ದ, ವಾಕ್ಯ ಪ್ರಚಾರ, ನಾಣ್ನುಡಿ, ಸುಭಾಷಿತ ಇವುಗಳ ಅರ್ಥ ತಿಳಿದುಕೊಂಡು ಅವುಗಳ ಆಸ್ವಾದ ಪಡೆಯುವನು. ಲೇಖದಲ್ಲಿ ಮತ್ತು ಮಾತಾಡುವಾಗ ಅವುಗಳ ಉಪಯೋಗ ಮಾಡುವನು. ಸಂಗ್ರಹ ಮಾಡುವನು.<br>08.06.08 ಕಥೆ, ಕವಿತೆ, ಓದಿ ಲೇಖನದ ವಿವಿಧ ಪ್ರಕಾರ ಮತ್ತು ಶೈಲಿ ಗುರುತಿಸುವನು. ಅವುಗಳ ಆಸ್ವಾದ ತೆಗೆದು ಕೊಳ್ಳುವನು ಉದಾ, ವರ್ಣನಾತ್ಮಕ, ವಿವೇಚನಾತ್ಮಕ, ನಿಸರ್ಗಾತ್ಮಕ ಇತ್ಯಾದಿ.<br>08.06.09 ಪಠ್ಯ ವಿಷಯದ ಅಭ್ಯಾಸ ಮಾಡುವಾಗ ಆಕಲನ ಸಲುವಾಗಿ ಅವಶ್ಯಕತೆನುಸಾರ ವರ್ಗಮಿತ್ರ/ಶಿಕ್ಷಕ ಇವರ ಸಹಾಯ ತೆಗೆದು ಕೊಂಡು ಉಪಯುಕ್ತ ಸಂದರ್ಭ ಸಾಹಿತ್ಯದ (ಶಬ್ದಕೋಶ, ವಿಶ್ವಕೋಶ, ಇಂಟರನೆಟ್ ಇತ್ಯಾದಿ) ಮತ್ತು ಬೇರೆ ಪುಸ್ತಕಗಳ ಸಹಾಯ ತೆಗೆದುಕೊಂಡು ಅವಶ್ಯಕ ಮಾಹಿತಿ ದೊರಕಿಸಿ |

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
|---|---|
| • ಭಾಷಾ ಸಮೃದ್ಧಿ ಸಲುವಾಗಿ ಬಾಲ ಸಾಹಿತ್ಯ ಜೊತೆಗೆ ಉಳಿದ ಸಾಹಿತ್ಯ ಸಂಗ್ರಹ ಮಾಡುವುದು ಮತ್ತು ಅವುಗಳ ಸಾದರೀಕರಣ ಮಾಡುವ ಅವಕಾಶ ಉಪಲಬ್ಧ ಮಾಡಿ ಕೊಡುವುದು.<br>• ಪರಿಪಾಠ ಮತ್ತು ಇತರ ಕಾರ್ಯಕ್ರಮಗಳಿಂದ ಸುವಿಚಾರ, ಕಥೆ ವಿವಿಧ ವಿಷಯ ಮಂಡಿಸುವ ಅವಕಾಶ ಉಪಲಬ್ಧ ಮಾಡಿಕೊಡಬೇಕು.<br>• ಪರಿಸರದಲ್ಲಿಯ ಆಡುಭಾಷೆಯ ಮಾಹಿತಿ ದೊರಕಿಸಿ ಅದರ ಮೇಲೆ ಚರ್ಚೆ ಮಾಡುವ ಅವಕಾಶ ಕೊಡಬೇಕು.<br>• ಪರಿಸರ ಮತ್ತು ಉಳಿದ ಕಾರ್ಯಕ್ರಮಗಳಿಂದ ಸುವಿಚಾರ, ಕಥೆ, ವಿವಿಧ ವಿಷಯ ಮಂಡಿಸುವ ಅವಕಾಶ ಉಪಲಬ್ಧ ಮಾಡಿಕೊಡಬೇಕು. | ಅವುಗಳ ಸಂಗ್ರಹ ಮಾಡುವನು. ಪ್ರಾಪ್ತ ಮಾಹಿತಿಯ ಉಪಯೋಗ ಮಾಡಿ ಅವುಗಳ ಸಾದರೀಕರಣವನ್ನು ಮಾಡುವನು.<br>08.06.10 ವಿವಿಧ ಪ್ರಸಂಗ/ ಘಟನೆ ಈ ವಿಷಯದ ಸ್ವತದ ಭಾಷೆಯಲ್ಲಿ ಬರೆಯುವನು. ಉದಾ, ಶಾಲೆಯ ಯಾವದೊಂದು ಕಾರ್ಯಕ್ರಮ ವಿಷಯದ ವೃತ್ತಾಂತ, ವರದಿ ಇತ್ಯಾದಿ.<br>08.06.11 ಸ್ವತದ ಅನುಭವ ಸ್ವತದ ಭಾಷಾ ಶೈಲಿಯಲ್ಲಿ ಬರೆಯವನು. ಲೇಖನದ ವಿವಿಧ ಪ್ರಕಾರ ಮತ್ತು ಶೈಲಿ ಇವುಗಳ ಉಪಯೋಗ ಮಾಡಿ ತಮ್ಮ ಅನುಭವ ಬರೆಯುವನು. ಉದಾ, ಕಥೆ, ಕವಿತೆ ನಿಬಂಧ ಇತ್ಯಾದಿ.<br>08.06.12 ದಿನ ನಿತ್ಯ ಜೀವನಕ್ಕಿಂತ ಬೇರೆ ಘಟನೆಗಳ ಮೇಲೆ,ಅನುಭವಗಳ ಮೇಲೆ ವಿವಿಧ ಪದ್ಧತಿಯಿಂದ ಸೃಜನಾತ್ಮಕ ಲೇಖನ ಮಾಡುವನು. ಉದಾ, ಸೋಶಲ ಮಿಡಿಯಾದ ಮೇಲೆ ಬರೆಯುವುದು, ಸಂಪಾದಕನಿಗೆ ಪತ್ರ ಬರೆಯುವದು ಇತ್ಯಾದಿ.<br>08.06.13 ವಿವಿಧ ಕಲೆ (ಉದಾ. ಹಸ್ತಕಲೆ, ವಾಸ್ತುಕಲೆ, ಕೃಷಿಕಲೆ, ನೃತ್ಯಕಲೆ ಚಿತ್ರಕಲೆ), ಈ ಸಂಬಂಧ ಸೃಜನಾತ್ಮಕದಿಂದ ವಿಚಾರ ಮಾಡುತ್ತಾನೆ ಉದಾ, ಕಲೆಯ ನವರಸಗಳ ಅನುಭೂತಿ ಇತ್ಯಾದಿ.<br>08.06.14 ವಿವಿಧ ಪ್ರಸಾರ ಮಾಧ್ಯಮಗಳ ಮೂಲಕ ಪ್ರಸಾರಿತವಾಗುವ ಚರ್ಚೆ, ಸಂವಾದ, ಸಂದರ್ಶನ ಮತ್ತು ಸಾರ್ವಜನಿಕ ಸ್ಥಳಗಳ ಮೇಲಿನ ಸೂಚನೆ ತಿಳಿದುಕೊಂಡು ಕೇಳಿ ಅವುಗಳಲ್ಲಿಯ ಮುಖ್ಯ ವಿಚಾರ ತಿಳಿದುಕೊಳ್ಳುವನು. ಅದರ ಆಸ್ವಾದ ತೆಗೆದುಕೊಳ್ಳುವನು. ಅವುಗಳ ಧ್ವನಿಸುರುಳಿ ಕೇಳುವನು. ಅವುಗಳಲ್ಲಿಯ ಮುಖ್ಯ ವಿಚಾರ ತಿಳಿದುಕೊಳ್ಳುವನು.<br>08.06.15 ಹಾಡು ಕವಿತೆ, ಸಮೂಹಗೀತೆ ಅರ್ಥ ಲಕ್ಷ್ಯದಲ್ಲಿ ತೆಗೆದುಕೊಂಡು ಆರೋಹ-ಅವರೋಹ ಮತ್ತು ವಿರಾಮ ಚಿಹ್ನೆಗಳು ಇವುಗಳನ್ನು ತೆಗೆದುಕೊಂಡು ಅರ್ಥಪೂರ್ಣ ಪ್ರಕಟವಾಚನ ಮಾಡುವನು. ಮತ್ತು ಕೊಟ್ಟ ಸಮಯದಲ್ಲಿ ವೇಗ ಗತಿಯಿಂದ ತಿಳಿದುಕೊಂಡು ಮೂಕವಾಚನ ಮಾಡುವನು.<br>08.06.16 ಶಾಲೆಯ ಹಸ್ತಲಿಖಿತ, ಬಾಲಸಾಹಿತ್ಯ, ಭಿತ್ತಿಪತ್ರ ಇವುಗಳ ಸಲುವಾಗಿ ಸಾಹಿತ್ಯಲೇಖನ ಮಾಡುವನು.<br>08.06.17 ಶಬ್ದಕೋಶ ಸಂದರ್ಭಸಲುವಾಗಿ ನೋಡುವನು, ಸ್ವತದ ಶಬ್ದಕೋಶ ತಯಾರಿಸಲು ಪ್ರಯತ್ನ ಮಾಡುವನು.<br>08.06.18 ವಿವಿಧ ಸಾಮಾಜಿಕ ಸಮಸ್ಯೆ ಬಿಡಿಸುವ ವಿಷಯ ಸ್ವತಃ ಉಪಾಯ ಸೂಚಿಸುವನು.<br>08.06.19 ವ್ಯಾಕರಣ ಘಟಕಗಳ ಮಾಹಿತಿ ತೆಗೆದುಕೊಳ್ಳುವನು ಮತ್ತು ಅದರ ಯೋಗ್ಯ ಉಪಯೋಗ ಮಾಡುವನು. ವಿಭಕ್ತಿ ಸಾಮಾನ್ಯರೂಪ, ನಿಯಮ, ಸಂಧಿ, ಸಮಾಸ ಪ್ರಯೋಗ ಅಲಂಕಾರ, ವೃತ್ತ, ಶುದ್ಧ ಲೇಖನದ ನಿಯಮ ಇತ್ಯಾದಿ. |

# ಪರಿವಿಡಿ

## ಗದ್ಯ ವಿಭಾಗ


| ಅ. ನಂ | ಪಾಠಗಳು | ಲೇಖಕರು | ಪುಟ |
|---|---|---|---|
| 1. | ವಿದ್ಯಾರತ್ನ | – | 1 |
| 2. | ನದಿ ಜೋಡು | – | 6 |
| 3. | ಆದರ್ಶ ಮಹಿಳೆಯರು | – | 8 |
| 4. | ದುರಗ ಮುರಗಿಯರು | ಗೀತಾ ನಾಭೂಷಣ | 13 |
| 5. | ಅಜ್ಜಿ ಹೇಳಿದ ಕಥೆ | ಸಂಧ್ಯಾ ಪೈ | 19 |
| 6. | ಪರನಾರಿ – ಸಹೋದರ | ಕವಿತಾ ಕೃಷ್ಣ | 23 |
| 7. | ಅರಣ್ಯ ಸಂಪತ್ತು | – | 30 |
| 8. | ಗೆಲಿಲಿಯೊ | – | 35 |
| 9. | ಪ್ರಜ್ಞಾವಂತ ಪ್ರಜೆ | – | 39 |
| 10. | ರೆಡ್ ಕ್ರಾಸ್ ಸಂಸ್ಥೆ | – | 43 |
| 11. | ಗಂಭೀರೆ | ಶಿವಕೋಟ್ಯಾಚಾರ್ಯ | 48 |


## ಪದ್ಯ ವಿಭಾಗ


| ಅ. ನಂ | ಪದ್ಯಗಳು | ಕವಿ | ಪುಟ |
|---|---|---|---|
| 1. | ಒಲುಮೆ | ಆರ್. ಎನ್. ಜಯಗೋಪಾಲ | 52 |
| 2. | ಆಷಾಢಮಾಸ ಬಂದೀತವ್ವ | ಜನಪದರು | 54 |
| 3. | ರಾಷ್ಟ್ರಧ್ವಜ | ಗಂಗಪ್ಪ ವಾಲಿ | 57 |
| 4. | ಯುದ್ಧ ಬಂತು ಮನೆಯವರೆಗೆ | ದ. ರಾ. ಬೇಂದ್ರೆ | 60 |
| 5. | ಮನೆಯೇ ಗುಡಿಯಮ್ಮ | ಚಿ. ಉದಯ ಶಂಕರ | 62 |
| 6. | ಸಲ್ಲದು | ಸರೋಜಿನಿ ಭದ್ರಾಪೂರ | 65 |
| 7. | ಆಧ್ಯಾತ್ಮ ಶಿಖರ | ಶಿವಾನಂದ ಕಲಗೊಂಡ | 67 |
| 8. | ಉದರ ವೈರಾಗ್ಯ | ಪುರಂದರ ದಾಸರು | 70 |
| 9. | ಚಲಿತಮಾದುದು ಚಿತ್ತಂ | ನಾಗಚಂದ್ರ | 73 |

# ಪರಿವಿಡಿ

## ವ್ಯಾಕರಣ ವಿಭಾಗ



| ಅ. ನಂ | ಪಾಠಗಳು | ಪುಟ |
|---|---|---|
| 1. | ಲೇಖನ ಚಿಹ್ನೆಗಳು | 77 |
| 2. | ನಾಮಪದ | 78 |
| 3. | ವಾಕ್ಯ ಸಂಯೋಜನೆ | 82 |
| 4. | ಕೃದಂತ-ತದ್ಧಿತಾಂತಗಳು | 83 |
| 5. | ತತ್ಸಮ – ತದ್ಭವ | 86 |
| 6. | ಪಡೆನುಡಿಗಳು | 87 |
| 7. | ಸಂಧಿಗಳು | 88 |
| 8. | ಸಮಾಸಗಳು | 90 |
| 9. | ಛಂದಸ್ಸು | 92 |
| 10. | ಅಲಂಕಾರ | 97 |


## ಲೇಖನ ಕೌಶಲ್ಯ ವಿಭಾಗ


| ಅ. ನಂ | ಪಾಠಗಳು | ಪುಟ |
|---|---|---|
| 1. | ಪತ್ರ ಲೇಖನ | 99 |
| 2. | ಕಥಾ ಲೇಖನ | 103 |
| 3. | ಭಾಷಣ ಕಲೆ | 104 |

# 1. ವಿದ್ಯಾರತ್ನ

## ಗದ್ಯ ವಿಭಾಗ



ದಿಲ್ಲಿಯ ಮೊಗಲ್‌ಚಕ್ರವರ್ತಿ ಅಕಬರನ ಆಸ್ಥಾನದಲ್ಲಿ ಬೀರಬಲನೆಂದರೆ ನಿಜವಾಗಿಯೂ ಒಂದು ವಿದ್ಯಾರತ್ನದಂತೆ ಇದ್ದ. ಶಾಸ್ತ್ರಗ್ರಂಥಗಳ ಜ್ಞಾನವಲ್ಲದೆ, ವ್ಯವಹಾರಜ್ಞಾನದಲ್ಲಿಯೂ ಅವನು ಬಹು ಕುಶಲನಾಗಿದ್ದ. ಆದುದರಿಂದಲೆ ಅಕಬರ ಬಾದಶಹನು, ಬೀರಬಲನನ್ನು ಹೆಚ್ಚಿನ ಗೌರವ-ಆದರಗಳಿಂದ ಕಾಣುತ್ತಿದ್ದನು.

ಬಾದಶಹನ ಆಸ್ಥಾನದಲ್ಲಿ ಇನ್ನೂ ಎಷ್ಟೋ ಜನ ಮೌಲವಿಗಳಿದ್ದರು; ಪಂಡಿತರಿದ್ದರು, ಅವರಿಗೆಲ್ಲ ಬೀರಬಲನ ಮೇಲ್ಮೆಯು ಸಹನವಾಗುತ್ತಿರಲಿಲ್ಲ. ಆದುದರಿಂದಲೇ. ಅವರು ಬೀರಬಲನು ಇಲ್ಲದಾಗ ಅವನನ್ನು ಆಡಿಕೊಳ್ಳುತ್ತಿದ್ದರು. ಈ ಸುದ್ದಿಯು ಬಾದಶಹನಿಗೆ ಗೊತ್ತಾಗದೆ ಇರುವುದೆ? ಅವನೂ ಬುದ್ಧಿಶಾಲಿ! ಒಂದುದಿನ ಅವನು ಓಲಗದಲ್ಲಿ ಕುಳಿತುಕೊಂಡಿದ್ದನು. ಮೌಲವಿಗಳೂ ಪಂಡಿತರೂ ಬೇರೆವಿದ್ವಾಂಸರೂ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತಿದ್ದರು. ರಾಜಕಾರ್ಯದ ವ್ಯವಹಾರಗಳೆಲ್ಲ ಮುಗಿದು ಹೋಗಿದ್ದವು. ಆಗ ಬಾದಶಹನು ಅಲ್ಲಿ ಇದ್ದ ಪಂಡಿತಮಂಡಲಿಯನ್ನು ಉದ್ದೇಶಿಸಿ ಮಾತನಾಡಿದನು

ನನ್ನ ಆಸ್ಥಾನದ ವಿದ್ವಾಂಸರೆ, ಮೊನ್ನೆಯ ದಿನ ದಕ್ಷಿಣದೇಶದಿಂದ ಒಬ್ಬ ಸಂನ್ಯಾಸಿ ನನ್ನ ಭೆಟ್ಟಿಗೆ ಬಂದಾಗ, ಅನೇಕ ವಿಷಯಗಳನ್ನು ಕುರಿತು ಮಾತನಾಡಿದರು ಕೊನೆಗೆ ಅವರು, ನನ್ನನ್ನು ಪರೀಕ್ಷಿಸಬೇಕೆಂದೋ ಏನೋ ನನ್ನೆದುರು ನಾಲ್ಕು ಪ್ರಶ್ನೆಗಳನ್ನು ಇರಿಸಿ, ಅವುಗಳಿಗೆ ನನ್ನಿಂದ ಉತ್ತರವನ್ನು ಅಪೇಕ್ಷಿಸಿದರು ಆದರೆ ನನಗೇನೋ ಒಂದಕ್ಕೂ ಸರಿಯಾದ ಉತ್ತರ ಹೊಳೆಯಲಿಲ್ಲ

ಮುಖ್ಯಮೌಲವಿಯು ಎದ್ದುನಿಂತುಕೊಂಡು, ವಿನಯದಿಂದ ಹೇಳಿದನು ಹುಜೂರ್, ಆ ಪ್ರಶ್ನೆಗಳಾವುವೆಂಬುದನ್ನು ತಿಳುಹಬೇಕು. ದಿಲ್ಲಿಯ ಬಾದಶಹರ ಆಸ್ಥಾನದಲ್ಲಿರುವ ಪಂಡಿತವರ್ಗಕ್ಕೆ ಯಾವ ಪ್ರಶ್ನೆಗಳೂ ಜಡವೆನಿಸಲಾರವು

ಬಾದಶಹನು ಮುಗುಳುನಗೆ ನಗುತ್ತ ಹೇಳತೊಡಗಿದನು

ಅಹುದು ನಾನುಬಲ್ಲೆ ನಮ್ಮ ಪಂಡಿತ ಮಂಡಲಿಗೆ ತಿಳಿಯದ ವಿಷಯ ಯಾವುದೂ ಇಲ್ಲ. ಹಾಗಾದರೆ ಆಲಿಸಿರಿ ಆ ಪ್ರಶ್ನೆಗಳನ್ನು

1. ಎಲ್ಲ ರಸಗಳಲ್ಲಿಯೂ ಪ್ರಧಾನವಾದ ರಸವು ಯಾವುದು?

2. ಜೀವನಕ್ಕೆ ಆಧಾರವಾದ ವಸ್ತುವು ಯಾವುದು?

3. ನಿಜವಾದ ಕೃತಜ್ಞನುಯಾರು?

4. ನಿಜವಾದ ಕೃತಘ್ನನು ಯಾರು?

ಇವೇನಾಲ್ಕು ಪ್ರಶ್ನೆಗಳು. ನೀವೇನು? ಕೂಡಲೆ ಇವುಗಳ ಉತ್ತರವನ್ನು ಹೇಳಬಲ್ಲಿರಿ!

ಬಾದಶಹನು ಈ ಪ್ರಶ್ನೆಗಳನ್ನು ಹೇಳುತ್ತಿರುವಾಗಲೆ, ಪಂಡಿತರೆಲ್ಲರ ಮುಖವು ಗಾಬರಿಗೊಳ್ಳತೊಡಗಿತ್ತು. ಎಲ್ಲ ಪ್ರಶ್ನೆಗಳನ್ನೂ ಹೇಳಿಯಾದಮೇಲೆ ಅವರೆಲ್ಲರೂ ವಿಚಾರದ ಗೊಂದಲದಲ್ಲಿ ಬಿದ್ದರು. ಆಗ ಬೀರಬಲನು ಬಾದಶಹನ ಪಕ್ಕದ ಆಸನದಲ್ಲಿಯೆ ಮಂಡಿಸಿದ್ದನು. ಪಂಡಿತರು, ಮೌಲವಿಗಳುಎಲ್ಲರೂ ತಮ್ಮತಮ್ಮೊಳಗೆ ಚರ್ಚೆಯನ್ನು ನಡೆಸಿದರು. ಒಬ್ಬರಿಗೂ ಸಮಂಜಸವಾದ ಉತ್ತರಗಳು ಹೊಳೆಯಲಿಲ್ಲ. ಆಗ ಅವರಲ್ಲಿಯ ಮುಖ್ಯಪಂಡಿತನು ಎದ್ದು ಬಾದಶಹನಿಗೆ ಬಿನ್ನವಿಸಿದನು

''ಜೀ ಹುಜೂರ್, ನಾವು ಓದಿದ ಯಾವಗ್ರಂಥಗಳಲ್ಲಿಯೂ ತಾವು ಕೇಳಿದ ಪ್ರಶ್ನೆಗಳೂ ಇಲ್ಲ ಅವುಗಳ ಉತ್ತರಗಳೂ ಇಲ್ಲ! ಖಾವಂದರವರು ದಯೆಯಿಟ್ಟು ಕ್ಷಮಿಸಬೇಕು!''

ಮುಖ್ಯ ಪಂಡಿತನ ಈ ಮಾತುಗಳನ್ನು ಕೇಳಿ ಬಾದಶಹನು ಗಟ್ಟಿಯಾಗಿ ನಕ್ಕು ಬಿಟ್ಟನು. ಬಳಿಕ ಅವನು ಬೀರಬಲನ ಕಡೆಗೆ ನೋಡುತ್ತ ''ಬೀರಬಲ್, ನೀನೇನಾದರೂ ಹೇಳಬಲ್ಲೆಯಾ ಈ ಪ್ರಶ್ನೆಗಳ ಉತ್ತರಗಳನ್ನು?'' ಎಂದುಕೇಳಿದನು.

ಬೀರಬಲನು ಎದ್ದುನಿಂತು ವಿನಯದಿಂದ ನುಡಿದನು

''ಖಾವಂದಾ! ಒಂದು ದಿನದ ಅವಧಿಯನ್ನು ಕೊಡಿರಿ. ನಾಳಿಯ ದಿನ ತಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುವೆನಿಷ್ಟೇ ಅಲ್ಲ ಉತ್ತರವಾಗಿರುವ ವಸ್ತು ಗಳನ್ನೂ ವ್ಯಕ್ತಿಗಳನ್ನೂ ತಂದು ತೋರಿಸುವ ಪ್ರಯತ್ನವನ್ನೂ ಮಾಡುವೆನು.''

ಬಾದಶಹನಿಗೆ ಸಂತೋಷವಾಯಿತು. ಅಂದಿನ ಓಲಗವನ್ನು ಮುಗಿಸಿ ಅವನು ಅರಮನೆಯ ಕಡೆಗೆ ಹೊರಟನು.

ಮರುದಿನ ಓಲಗವು ಪ್ರಾರಂಭವಾಯಿತು. ಪಂಡಿತರೆಲ್ಲ ಬಂದು, ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ಬಾದಶಹನೂ ಬಂದು ತನ್ನ ಸಿಂಹಾಸನವನ್ನು ಅಲಂಕರಿಸಿದನು. ಬೀರಬಲನು ಇನ್ನೂ ಬಂದಿರಲಿಲ್ಲ ವಾದುದರಿಂದ, ಅವನು ಪಂಡಿತಮಂಡಲಿಯನ್ನು ಉದ್ದೇಶಿಸಿ ಕೇಳಿದನು

ಅದೇಕೋ ಬೀರಬಲನು ಇದುವರೆಗೂ ಬಂದೇ ಇಲ್ಲವಲ್ಲ!

ಮುಖ್ಯಪಂಡಿತನು ಎದ್ದು ನಿಂತು ಬಿನ್ನವಿಸಿದನು

ಹೇಗೆ ಬರುತ್ತಾನೆ ಹುಜೂರ್? ತಮ್ಮ ಪ್ರಶ್ನೆಗಳಿಗೆ ಉತ್ತರಗಳೊಂದು ಹೊಳೆಯಬೇಕಲ್ಲವೆ? ಬರಿಯೆ ಅಭಿಮಾನಕ್ಕೆ ಕಟ್ಟುಬಿದ್ದು, ಎಲ್ಲವೂ ತನಗೆ ಗೊತ್ತಿದೆಯೆಂದು ಹೊರಟರೆ, ಮುಂದಿನ ವಿಷಯ ನೀಗಬೇಕು ಹೇಗೆ?.....

ಹೀಗೆ ನುಡಿಯುತ್ತಿರುವಾಗಲೆ ಬೀರಬಲನು ಓಲಗವನ್ನು ಪ್ರವೇಶಿಸಿದನು. ಎಲ್ಲವೂ ವಿಲಕ್ಷಣ! ಅವನು ಬಲಗೈಯಲ್ಲಿ ಮಣ್ಣಿನ ಹರಿವಾಣವೊಂದನ್ನು ಹಿಡಿದಿದ್ದಾನೆ ಎಡಗೈಯಲ್ಲಿ ಹಿತ್ತಾಳೆಯ ತಂಬಿಗೆಯೊಂದಿದೆ. ಸಾಕಿದ ನಾಯಿ ಅವನನ್ನು ಬೆಂಬಳಿಸಿ ಬರುತ್ತಲಿದೆ. ಓಲಗದಲ್ಲಿ ಕುಳಿತವರೆಲ್ಲರೂ ಬೀರಬಲನನ್ನು ವಿಸ್ಮಯದಿಂದ ನೋಡತೊಡಗಿದರು.

ಬೀರಬಲನು ನೇರವಾಗಿ ಬಂದು ಬಾದಶಹನ ಬಳಿ ನಿಂತು ನುಡಿದನು. ಖಾವಂದ್. ಈಗ ನಾನು ತಮಗೆ ನಮಸ್ಕಾರ ಮಾಡಲಾರೆನು. ಕೈಯಲ್ಲಿ ತಮ್ಮ ಪ್ರಶ್ನೆಯ ಉತ್ತರಗಳಿವೆ. ದಯೆಯಿಟ್ಟು ಕ್ಷಮಿಸಬೇಕು!

ಪಂಡಿತ ಮಂಡಲಿ ಮಿಳಮಿಳನೆ ಬೀರಬಲನತ್ತ ನೋಡುತ್ತಿತ್ತು. ಬಾದಶಹ ಬೆರಗಾಗಿ ಕೇಳಿದನು

ಏನು ಬೀರಬಲ್? ಇದೇನು ವೇಷ ನಿನ್ನದು? ಮಣ್ಣಿನ ಹರಿವಾಣ ವೇಕೆ? ಹಿತ್ತಾಳಿಯ ತಂಬಿಗೆಯೇಕೆ? ಬೆನ್ನ ಹಿಂದೆ ನಾಯಿಯೇಕೆ?

ಬೀರಬಲ ಅರಿಕೆ ಮಾಡಿಕೊಂಡು

ಖಾವಂದ್, ತಮ್ಮ ಒಂದನೆಯ ಪ್ರಶ್ನೆಯ ಉತ್ತರ ಈ ಮಣ್ಣಿನ ಹರಿವಾಣದಲ್ಲಿದೆ, ಚಿತ್ತಯಿಸಬೇಕು!

ಬಾದಶಹ ಕುತೂಹಲದಿಂದ ನೋಡಿದ. ಹರಿವಾಣದಲ್ಲಿ ಬರಿಯೆ ಸ್ವಲ್ಪ ಉಪ್ಪು ಇದ್ದಿತು.ಕೂಡಲೆ ಬೆರಗಿನ ನುಡಿಗಳಲ್ಲಿ ಆತನು ಬೀರಬಲನನ್ನು ಕೇಳಿದ

ಎಲ್ಲ ರಸಗಳಲ್ಲಿಯೂ ಪ್ರಧಾನವಾದ ರಸವೇ ಇದು?

ಬೀರಬಲ ಗಂಭೀರಭಾವದಲ್ಲಿ ಹೇಳತೊಡಗಿದ.

''ಅಹುದು ಹುಜೂರ್! 'ಷಣ್ಣಾಂರಸಾನಾಂ ಲವಣಂ ಪ್ರಧಾನಂ' ಎಂದು ಪುರಾತನರ ವಚನವಿದೆ. ಉಪ್ಪು ಇಲ್ಲದೆ ಇದ್ದರೆ ಯಾವ ಅಡಿಗೆಯೂ ರುಚಿ ಯೆನಿಸದು. ಸಿಹಿ, ಹುಳಿ, ಖಾರ ಇವೆಲ್ಲ ಅಡಿಗೆಯಲ್ಲಿ ಕಡಮೆಯಾದರೆ ನಡೆಯುವುದು ಉಪ್ಪು ಕಡಮೆಯಾದರೆ ಹೀಗಾಗುವುದೆಂಬುದು ತಮಗೆ ಗೊತ್ತಿದೆ!

ಬಾದಶಹನು ತಲೆದೂಗಿದನು ಪಂಡಿತರೆಲ್ಲರ ಮುಖದ ಮೇಲೆ ಮಂಕು ಕವಿಯತೊಡಗಿತು. ಆಗಲೆ ಬೀರಬಲನು ತಂಬಿಗೆಯನ್ನು ಮುಂದೆ ಮಾಡಿ ಹೇಳಿದನು.

''ಇದರಲ್ಲಿ ಜೀವನಕ್ಕೆ ಆಧಾರವಾದ ವಸ್ತುವಿದೆ ಅವಲೋಕಿಸಬಹುದು!''

ಬಾದಶಹನು ನೋಡಿದನು, ತಂಬಿಗೆ ನೀರಿನಿಂದ ತುಂಬಿದ್ಧಿತು. ಕೂಡಲೆ ಅವನು ಏನು ಬೀರಬಲ್! ಇದು ನೀರಲ್ಲವೆ? ಎಂದು ಕೇಳಿದನು.

ಬೀರಬಲ ಹೇಳಿದ

''ಅಹುದು, ಪ್ರಭು! ಜೀವನಕ್ಕೆ ನೀರೇ ಮುಖ್ಯವಾದ ಆಧಾರ, ಅಹುದೋ ಅಲ್ಲವೋ ವಿಚಾರಮಾಡಬೇಕು! ಯಾವ ಪ್ರಾಣಿಯ ಆಗಲಿ, ಆಹಾರವಿಲ್ಲದೆ ಕೆಲವು ದಿನ ಜೀವಿಸಬಹುದು, ಆದರೆ ನೀರಿಲ್ಲದೆ ಅದು ಒಂದು ದಿನವೂ ಜೀವಿಸಲಾರದು. ವೈದ್ಯರು ರೋಗಿಗಳನ್ನು ಆಹಾರವಿಲ್ಲದೆ ಹತ್ತಿಪ್ಪತ್ತು ದಿನಗಳವರೆಗೆ ಕೆಡಹುವರು, ಆದರೆ ಅವರಿಗೆ ನೀರನ್ನು ಮಾತ್ರಬೇಕಾದಷ್ಟು ಕುಡಿಸಲು ಹೇಳುವರು!

ಬಾದಶಹನು ಭಲೆ ಬೀರಬಲ್ ಎನ್ನಲು ಪಂಡಿತರೆಲ್ಲರೂ ತಲೆತಗ್ಗಿಸಿ ಕುಳಿತರು. ಬಳಿಕ ಬೀರಬಲನು ತನ್ನ ನಾಯಿಯನ್ನು ತೋರಿಸಿ ಹೇಳಿದನು

ನಿಜವಾವಾದ ಕೃತಜ್ಞನೆಂದರೆ ಈ ನಾಯಿ! ಆಪ್ತರು, ಇಷ್ಟರು, ಹೆಂಡಿರು, ಮಕ್ಕಳು ಇವರೆಲ್ಲರೂ ಮಾಡಿದ ಉಪಕಾರವನ್ನು ಮರೆತಾರು, ಸಾಕಿದ ನಾಯಿ ಮಾತ್ರ ಒಡೆಯನ ಉಪಕಾರವನ್ನು ಎಂದೂ ಮರೆಯದು.

ಬೀರಬಲನ ಈ ಉತ್ತರವೂ ಬಾದಶಹನ ಮನಸ್ಸಿಗೆ ಸರಿಯೆನಿಸಿತು ಮೆಚ್ಚಿಕೆಯ ಧ್ವನಿಯಲ್ಲಿಯೆ ಅವನು ಕೇಳಿದನು

ಆಯಿತು, ಇನ್ನು ಕೊನೆಯ ಪ್ರಶ್ನೆಯ ಉತ್ತರ? ನಿಜವಾದ ಕೃತಘ್ನನು ಯಾರು?

ಬೀರಬಲನು ನಮ್ರತೆಯಿಂದಲೆ ಹೇಳತೊಡಗಿದನು

ಅವರನ್ನು ಹೊರಗಿನಿಂದ ತರುವ ಕಾರಣವೇನೂ ಕಾಣಲಿಲ್ಲ ಏಕೆಂದರೆ, ಈ ಸಭೆಯಲ್ಲಿಯೇ-ತಮ್ಮ ಪಕ್ಕದಲ್ಲಿಯೆ-ಅವರು ಕುಳಿತಿದ್ದಾರೆ!

ಈಗ ಸಭೆಯಲ್ಲಿದ್ದವರೆಲ್ಲರ ಮುಖಗಳು ಕಳೆಗೆಟ್ಟು ಹೋದುವು. ಬೀರಬಲನು ಯಾರ ಹೆಸರನ್ನು ಹೇಳುವನೋ ಎಂದು ಎಲ್ಲರಿಗೂ ಗಾಬರಿ, ಬಾದಶಹನು ಚಕಿತನಾಗಿಯೆ ಕೇಳಿದನು

''ಇಲ್ಲಿ ಕೃತಘ್ನರು ಯಾರಿದ್ದಾರೆ ಬೀರಬಲ್? ಎಲ್ಲರೂ ರಾಜನಿಷ್ಠರಾಗಿ ಇರುವರು!''

ಬೀರಬಲ್ ಅರಿಕೆ ಮಾಡಿದ

ಎಲ್ಲರೂ ರಾಜನಿಷ್ಠರಾಗಿ ಇರಬಹುದು ಪ್ರಭು! ಆದರೆ ಕೃತಘ್ನರೂ ಇಲ್ಲಿ ಇದ್ದಾರೆ ಅವರ ಹೆಸರನ್ನು ನಾನು ಹೇಳಿದೆನಾದರೆ, ನನ್ನ ಜೀವಕ್ಕೇ ಸಂಚಕಾರ ಬಂದೀತೆಂದು ಹೆದರಿಕೆ ನನಗೆ!

ಅಭಯವಾಣಿಯಲ್ಲಿ ಬಾದಶಹ ಹೇಳಿದ

ಹೆದರಬೇಡ ಬೀರಬಲ್! ಯಾರಿಂದಲೂ ನಿನ್ನ ಕೂದಲೂ ಕೊಂಕದಂತೆ ನಾನು ನೋಡಿಕೊಳ್ಳುತ್ತೇನೆ. ಬೇಗನೆ ಹೇಳು, ಯಾರು ಕೃತಘ್ನರು?

ಬೀರಬಲನು ಮಾತುಗಳನ್ನು ಪ್ರಾರಂಭಿಸಿದ

ಮಹಾಪ್ರಭುಗಳ ಅಭಯವೇ ಇದೆಯೆಂದ ಮೇಲೆ ಹೇಳುತ್ತೇನೆ ಕೇಳಬೇಕು. ಅಳಿಯಂದಿರೆಲ್ಲರೂ ಕೃತಘ್ನರು! ಮಾವಂದಿರು ಏನು ಕೊಟ್ಟರೂ ಅವರಿಗೆ ತೃಪ್ತಿಯಿರದು. ಹುಜೂರ್, ತಾವು ದಿಲ್ಲಿಯ ಸಿಂಹಾಸನವನ್ನು ಅಳಿಯಂದಿರಿಗೆ ಒಪ್ಪಿಸಿ ಕೊಟ್ಟರೂ ಏನು ಮಹಾ ಕೊಟ್ಟರು! ಎಂದೇ ಅವರು ಎನ್ನುವರು. ನವಗ್ರಹಗಳನ್ನೆಲ್ಲ ಜಪತಪಗಳಿಂದ ಶಾಂತಗೊಳಿಸಬಹುದು ಹತ್ತನೆಯ ಗ್ರಹವೆನಿಸಿಕೊಳ್ಳುವ ಅಳಿಯನು ಮಾತ್ರ ಯಾವುದರಿಂದಲೂ ಶಾಂತನಾಗನು!

ಬಾದಶಹನು ಗಟ್ಟಿಯಾಗಿ ನಕ್ಕುಬಿಟ್ಟನು. ಓಲಗದಲ್ಲಿಯ ಜನರಿಗೂ ನಗೆಯನ್ನು ತಡೆದುಕೊಳ್ಳುವುದಾಗಲಿಲ್ಲ. ಬೀರಬಲನ ಬುದ್ಧಿವಂತಿಕೆಗಾಗಿ ಬಾದಶಹನು, ಅತನಿಗೆ ಅಂದು ವಿಶೇಷಮಾನ ಸನ್ಮಾನಗಳನ್ನು ಮಾಡಿದನು ಸಾವಿರಾರು ಮೊಹರುಗಳ ಬಹುಮಾನವನ್ನೂ ಸಲ್ಲಿಸಿದನು. ಬೀರಬಲನ ನಿಜವಾದ ಯೋಗ್ಯತೆಯು ಆ ದಿನ ಆಸ್ಥಾನದೊಳಗಿನ ಪಂಡಿತರಿಗೆಲ್ಲ ಪ್ರತ್ಯಕ್ಷ ನಿದರ್ಶನಕ್ಕೆ ಬಂದಿತು. ಅಂದಿನಿಂದಲೂ ಅವರು ಬೀರಬಲನನ್ನು ಮನಃ ಪೂರ್ವಕನಾಗಿ ಗೌರವಿಸತೊಡಗಿದರು.

## ಶಬ್ದಗಳ ಅರ್ಥ

ಕೃತಜ್ಞನು – ಉಪಕಾರ ಸ್ಮರಿಸುವವನು; ಓಲಗ – ಸಭಾಮಂಟಪ; ಲವಣ – ಉಪ್ಪು; ಕೃತಘ್ನರು – ಉಪಕಾರಕ್ಕೆ ಅಪಕಾರ ಮಾಡುವವರು

## ಅಭ್ಯಾಸ

**ಕೃತಿ-1 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಚಕ್ರವರ್ತಿ ಅಕಬರನ ಆಸ್ಥಾನದಲ್ಲಿಯ ವಿದ್ಯಾರತ್ನಯಾರು?

ಉತ್ತರ ..........................................................................................................

2) ಮಣ್ಣಿನ ಹರಿವಾಣದಲ್ಲಿ ಏನಿತ್ತು?

ಉತ್ತರ ..........................................................................................................

3) ಕೃತಘ್ನರ ಹೆಸರನ್ನು ಹೇಳಲು ಬೀರಬಲನು ಹಿಂದೇಟು ಹಾಕಲು ಕಾರಣವೇನು?

ಉತ್ತರ ..........................................................................................................

4) ಉತ್ತರಗಳನ್ನು ಕೇಳಿ ತೃಪ್ತನಾದ ಬಾದಶಹ ಏನು ಮಾಡಿದನು?

ಉತ್ತರ ..........................................................................................................

**ಕೃತಿ-2 ಕೆಳಗಿನ ಚೌಕಟ್ಟುಗಳನ್ನು ಪೂರ್ಣಗೊಳಿಸಿರಿ.**

ನೀರಿನ ಉಪಯೋಗಗಳು

☐
☐
☐
☐
☐

**ಕೃತಿ-3 ರಾಜುವಿನ ಪ್ರಶ್ನೆಗೆ ಉತ್ತರ ಶೋಧಿಸಿರಿ.**

ಹಾಗಾದರೆ

ಅಳಿಯ ಅಂದರೆ ಮಗಳ ಗಂಡ

ಸೋದರಮಾವ ☐

ಸೋದರತ್ತೆ ☐

ಅಣ್ಣನಹೆಂಡತಿ ☐

ಅಕ್ಕನ ಮಗ ☐



**ಕೃತಿ-4** ‘ಕೃತಘ್ನ’ ಈ ಉತ್ತರಕ್ಕೆ ಬೀರಬಲನು ಕೊಟ್ಟ ಉತ್ತರವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ ................................................................................................................................

................................................................................................................................

................................................................................................................................


**ಕೃತಿ-5** ಅಕಬರ ಬೀರಬಲರ ವಿನೋದ ಕಥೆಯನ್ನು ಅಂತರ್ಜಾಲದ ಮುಖಾಂತರ ಮನೆಯವರಿಗೆಲ್ಲ ತೋರಿಸಿರಿ.

**ಕೃತಿ-6** ಅಂತರ್ಜಾಲದ ಮುಖಾಂತರ ನೋಡಿದ, ಅಥವಾ ನೀವುಕೇಳಿದ ಒಂದು ವಿನೋದ ಕಥೆಯನ್ನು ಬರೆಯಿರಿ.

ಉತ್ತರ ................................................................................................................................

................................................................................................................................

**ಕೃತಿ-7** ಸುಳಿವುಗಳನ್ನಾಧರಿಸಿ ಶಬ್ದ ರಚಿಸಿರಿ.




HSDUUE

# 2. ನದಿ ಜೋಡು

ಭಾರತವು ಕೃಷಿಪ್ರಧಾನದೇಶ
ಬಹುಪಾಲು ಕೃಷಿಯು
ಮಳೆಯಾಧಾರಿತವಾಗಿದೆ.
ವರ್ಷದಿಂದ ವರ್ಷಕ್ಕೆ ಮಳೆಯ
ಪ್ರಮಾಣ ಕಡಿಮೆಯಾಗುತ್ತಿದೆ.
ಅಂತರ್ಜಲದ ಪ್ರಮಾಣ
ಕುಸಿಯುತ್ತಿದೆ.





ನೀರು ಜೀವನ,
ನೀರು ಪ್ರಾಣ
ನೀರಿಲ್ಲದೆ ಯಾವ ಜೀವಿಯೂ
ಬದುಕುಳಿಯಲು ಸಾಧ್ಯವಿಲ್ಲ
ಕುಡಿಯಲು ಬೆಳೆ ಬೆಳೆಯಲು
ನಿತ್ಯಬಳಕೆಗೆ ಹೀಗೆ
ನಾನಾವಿಧದಲ್ಲಿ ನೀರಿನ
ಅವಶ್ಯಕತೆ ಇದೆ.

ಟಿಪ್ಪಣಿ 1 Yellow colour ಉದ್ದೇಶ 1 Sky Blue ಉಪಲಬ್ಧತೆ ಟಿಪ್ಪಣಿ 1 Green ಆವಶ್ಯಕತೆ 1 Orange ಪ್ರೆರಣೆ

ಉತ್ತರ
ಭಾರತದಲ್ಲಿ ಹನ್ನೆರಡು ತಿಂಗಳು
ತುಂಬಿ ಹರಿಯುವ ನದಿಗಳಿವೆ
ಗಂಗಾ, ಯಮುನಾ ನದಿಗಳ
ಪ್ರದೇಶವು ಹಚ್ಚ ಹಸಿರಾಗಿದ್ದು
ಸಂಪದ್ಭರಿತವಾಗಿದೆ.

ಕೆರೆತುಂಬುವ
ಯೋಜನೆಯಿಂದ
ಅಂತರ್ಜಲ ಹೆಚ್ಚಿಸಲು
ಸಾಧ್ಯವಿದೆ.

ಮಳೆಯಾಧಾರಿತ
ಕೃಷಿಯಿಂದ ಮುಕ್ತಿ
ಪಡೆಯಲು ನದಿಜೋಡಣೆಯ
ಕಾರ್ಯವು ಅತ್ಯಂತ
ಅವಶ್ಯಕವಾಗಿದೆ

ನದಿಗಳ ಜೋಡಣೆಗೆ
ಅನೇಕ ಪ್ರಕಾರದ
ಅಡೆತಡೆಗಳು ಬರುತ್ತವೆ.
ಅವುಗಳನ್ನು ಸೂಕ್ತರೀತಿಯಲ್ಲಿ
ಬಗೆಹರಿಸಬೇಕು.

ಗೋದಾವರಿ,
ಕೃಷ್ಣ, ಭೀಮಾ, ಕಾವೇರಿ ಮುಂತಾದ
ನದಿಗಳು ಮಳೆಗಾಲದಲ್ಲಿ
ಮಾತ್ರ ಹರಿಯುತ್ತವೆ.
ಇವುಗಳಿಗೆ ಜಲಾಶಯಗಳನ್ನು
ಕಟ್ಟಿ ನೀರನ್ನು
ಸಂಗ್ರಹಿಸಿದ್ದಾರೆ.

ಮಳೆ ನೀರು
ಕೊಯ್ಲು ಮತ್ತು
ಇಳುಕಲಿಗೆ ಅಡ್ಡವಾಗಿ
ಅಲ್ಲಿ ಅಲ್ಲಿ ಒಡ್ಡುಗಳನ್ನು ಕಟ್ಟಿ,
ಮಳೆ ನೀರನ್ನು ನೆಲದಲ್ಲಿ
ಇಂಗಿಸಿದಾಗ ಅತರ್ಜಲ
ಹೆಚ್ಚಾಗುತ್ತದೆ.।

ಉತ್ತರ
ಭಾರತದ ನದಿಗಳನ್ನು
ದಕ್ಷಿಣ ಭಾರತ ನದಿಗಳೊಂದಿಗೆ
ಜೋಡಣೆ ಮಾಡಿದರೆ ವರ್ಷ ವಿಡೀ
ನೀರು ದೊರಕುತ್ತದೆ. ನೀರಿನ ಕುರಿತಾದ
ಎಲ್ಲ ಸಮಸ್ಯೆಗಳು ಬಗೆ ಹರಿಯುತ್ತವೆ.
ಭಾರತವು ಸುಜಲಾಂ ಸುಫಲಾಂ ಆಗಿ
ವಿಶ್ವದಲ್ಲಿಯೇ ಬಲಿಷ್ಟ
ರಾಷ್ಟ್ರವಾಗುವುದಲ್ಲಿ
ಸಂದೇಹವಿಲ್ಲ

ಆಗದು
ಎಂದು
ಕೈಲಾಗದು
ಎಂದು
ಕೈಕಟ್ಟಿ
ಕುಳಿತರೆ
ಸಾಗದು
ಕೆಲಸವು
ಮುಂದೆ
ಮನ
ಸೊಂದಿದ್ದರೆ......

MSMQM2

# 3. ಆದರ್ಶ ಮಹಿಳೆಯರು



ಪುಣ್ಯ ಭೂಮಿಯಾದ ಭಾರತದಲ್ಲಿ ಮಹಾಪುರುಷರ ಚರಿತ್ರೆಗಳಂತೆ ಆದರ್ಶ ಮಹಿಳೆಯರ ಚರಿತ್ರೆಗಳೂ ಇವೆ. ಪತಿಯ ನೆರಳಾಗಿ ಬಾಳಿದ, ವೀರ ಪತ್ನಿಯಾಗಿ ಮೆರೆದ, ಅರಸೊತ್ತಿಗೆಯನ್ನು ನಡೆಸಿದ. ಯುದ್ಧ ಕಣದಲ್ಲಿ ಅಸಾಮಾನ್ಯ ಶೌರ್ಯವನ್ನು ತೋರಿದ, ಸೌಶೀಲ್ಯಾದಿ ಗುಣಗಳಿಂದ ಬಾಳನ್ನು ಬೆಳಗಿದ, ರಾಜ್ಯ ಕ್ಷೇಮಕ್ಕಾಗಿ ಪುತ್ರ ಬಲಿಯರ್ಪಿಸಿದ ಆದರ್ಶ ಮಹಿಳೆಯರ ಚರಿತ್ರೆಗಳೆಂದರೆ ಅವು ನಮ್ಮ ಭವ್ಯ ಪರಂಪರೆಯ ಚಿರಂತನವಾದ ಸೊತ್ತು, ಎಂದೆಂದೂ ಮರೆಯಲಾಗದ ಅಮೂಲ್ಯ ಸಂಪತ್ತು.

ವೈದಿಕ ಯುಗದಲ್ಲಿ, ಪೌರಾಣಿಕ ಐತಿಹಾಸಿಕ ಸಂಧಿಗಳಲ್ಲಿ ತಮ್ಮ ಜೀವಿತದಿಂದ ಸಮಾಜ ಜೀವನವನ್ನೇ ಉತ್ಕರ್ಷಗೊಳಿಸಿದ ಅನೇಕಾನೇಕ ಮಹಿಳೆಯರು ತಮ್ಮ ಪರಮೋನ್ನತ ಗುಣಗಳಿಂದ ವಿಖ್ಯಾತೆಯರಾದರು. ಆ ಚರಿತ್ರೆಗಳ ಅಧ್ಯಯನ ಅನುಸಂಧಾನಗಳು ನಮ್ಮ ಆತ್ಮೋನ್ನತಿಗೆ ಆವಶ್ಯವಾದವುಗಳು. ಸಮಾಜವು ಕಂಡರಿಯಬೇಕಾದ ನೂರಾರು ಸತ್ಯಗಳು, ಆದರ್ಶಗಳು ಈ ಚರಿತ್ರೆಗಳ ಅಧ್ಯಯನದಿಂದ ಸ್ಪಷ್ಟವಾಗುತ್ತವೆ. ಇಂತಹ ವಿಶಿಷ್ಟ ಮಹಿಳಾ ಚರಿತ್ರೆಯಲ್ಲಿ ಇತಿಹಾಸ ಸಂಪುಟವನ್ನಲಂಕರಿಸಿದ ಸ್ವಾಮಿನಿಷ್ಠೆಯ ಪನ್ನಾ ಧಾತ್ರಿಯ ಸಫಲ ಜೀವನವನ್ನಿಲ್ಲಿ ನಿರೂಪಿಸಲಾಗಿದೆ.

ಮೇವಾಡದ ಅರಸರ ಮನೆತನದ ಚರಿತ್ರೆಯಲ್ಲಿ ಎಂದೆಂದೂ ಬೆಳಗುತ್ತಿರುವ ಒಂದು ರತ್ನವೆಂದರೆ ಅದು ಪಚ್ಚೆ. ಇದು ತನ್ನ ಮಗನನ್ನು ರಾಜಪುತ್ರನಿಗಾಗಿ ಬಲಿನೀಡಿ ತ್ಯಾಗದ ಮಹೋನ್ನತಿಯನ್ನು ಸಾಧಿಸಿದ ಓರ್ವಧಾತ್ರಿಯ ಹೆಸರು. ನವರತ್ನಗಳಲ್ಲೊಂದಾದ ಪಚ್ಚೆಯು ಅಮೂಲ್ಯವಾದುದೆಂಬುದನ್ನು

ನೆನಪಿಗೆ ತರುವಂತೆ ಜನನೀಜನಕರು ಆಕೆಯನ್ನು ಪನ್ನಾಪಚ್ಚೆಯೆಂದು ಕರೆದರು. ಆಕೆಯು ಪನ್ನೆಯೆಂದು ವಿಶ್ರುತೆಯಾಗಿ ತನ್ನ ಹೆಸರಿಗನುಗುಣವಾದ ನೆಲೆಯಲ್ಲಿ ಬಾಳನ್ನು ಬೆಳಗಿ ಈ ಧಾತ್ರಿ ಕೃತಾರ್ಥಳಾದಳು.

ಪ್ರಸಿದ್ಧವಾದ ಮೇವಾಡ ದೇಶ. ಅಲ್ಲಿಗೆ ರಾಜನು ಸಂಗ್ರಾಮಸಿಂಹನು. ಈತನಿಗೆ ಮೂವರು ಮಕ್ಕಳು. ಮೊದಲ ಇಬ್ಬರು ಅಲ್ಪಕಾಲ ಮಾತ್ರ ಜೀವಿಸಿದ್ದು ಮೃತರಾದರು. ಮೂವರಲ್ಲಿ ಕಿರಿಯವನು ಉದಯಸಿಂಹ. ಈತನು ತೀರ ಚಿಕ್ಕವನಿದ್ದು ಅರಮನೆಯ ಧಾತ್ರಿಯಾದ ಪನ್ನೆಯ ಪೋಷಣೆಯಲ್ಲಿರುತ್ತಿರುವಾಗಲೇ ಮೇವಾಡದ ದುರದೃಷ್ಟವೊ ಎಂಬಂತೆ ಪ್ರಜಾರಂಜಕನಾದ ಸಂಗ್ರಾಮಸಿಂಹನು ಇಹಲೋಕವನ್ನು ತ್ಯಜಿಸಿದನು.

ಉದಯಸಿಂಹನಿನ್ನೂ ಮಗುವಾಗಿದ್ದುದರಿಂದ ಪಟ್ಟವನ್ನೇರುವಂತಿಲ್ಲ. ಆದುದರಿಂದ ಪ್ರಜೆಗಳೆಲ್ಲರೂ ಒಮ್ಮತದಿಂದಿತ್ತ ಸಲಹೆಯಂತೆ ಬನವೀರನೆಂಬವನು ಉದಯಸಿಂಹನ ಹೆಸರಿನಲ್ಲಿ ರಾಜ್ಯವನ್ನು ಪರಿಪಾಲಿಸುವ ಏರ್ಪಾಡಾಯಿತು, ಬನವೀರನು ಸಮರ್ಥನಾದುದರಿಂದಲೂ ಮನೆತನದ ಸಂಪರ್ಕಕ್ಕೆ ಹತ್ತಿರದವನಾದುದರಿಂದಲೂ ಈ ಯೋಗ್ಯತೆಯನ್ನು ಗಳಿಸಿಕೊಂಡನು, ಪರಂಪರೆಯ ನೆಲೆಯಲ್ಲಿ ಪಟ್ಟನ್ನೇರುವ ಉತ್ತರಾಧಿಕಾರಿಯು ಅಂದಿಗೆ ಯಾರೂ ಇಲ್ಲವಾಗಿತ್ತು.

ಬನವೀರನು ಸಮರ್ಥನಾದರೂ, ರಾಜನೀತಿ ವಿಶಾರದನಾದರೂ ಅವನ ಹೃದಯವು ಮಾತ್ರ ನಿರ್ಮಲವಾಗಿರಲಿಲ್ಲ. ದುರ್ಮಂತ್ರಗಳನ್ನು ಒಳಗೆ ತುಂಬಿಟ್ಟುಕೊಂಡು ಆತನು ರಾಜ್ಯಾಧಿಕಾರವು ಶಾಶ್ವತವಾಗಿ ತನ್ನ ಪಾಲಿಗೆ ಬರುವಂತಾಗುವ ಯೋಜನೆಗಳನ್ನು ಸೂತ್ರಿಸುತ್ತಿದ್ದನು. ರಾಜಕುಮಾರನನ್ನು ನಾಶಮಾಡದ ಹೊರತು ತನ್ನ ಮನೋರಥವು ಫಲಿಸುವಂತಿಲ್ಲವೆಂದು ನಿರ್ಣಯಿಸಿ ಅರಮನೆಯ ಶ್ರೇಯಸ್ಸನ್ನು ಸದಾ ನಿಟ್ಟಿಸುತ್ತಿದ್ದ ಸರದಾರರಿಗೆ ಸಂದೇಹವುಂಟಾಗದಂತೆ, ಸಭ್ಯನಾಗಿ ವರ್ತಿಸುತ್ತಿದ್ದನು. ಕಾರ್ಯ ಸಾಧನೆಗೆ ತಕ್ಕ ಸಮಯವನ್ನು ಕಾಯುತ್ತಿದ್ದನು

ತನ್ನನ್ನು ಉನ್ನತಿಗೆ ತಂದ ಅರಮನೆಗವನು ಎರಡನ್ನು ಬಗೆಯಬಾರದಿತ್ತು ಎಷ್ಟಾದರೂ ಅವನು ದುಷ್ಟನಲ್ಲವೆ?

ನೀಚಃ ಪೂಜ್ಯ ಪದಸ್ಥೋಪಿ ಸ್ವನೀಚತ್ವಂ ನಮುಂಚತಿ।
ದೇವತಾಕೃತಿಮೇತ್ಯಾಪಿ ನ ಕಾಠಿನ್ಯಂ ತ್ಯಜೇತ್ ಶಿಲಾ।

(ನೀಚನು ಪೂಜ್ಯ ಪದವಿಯನ್ನು ಹೊಂದಿದರೂ ತನ್ನ ನೀಚತ್ವವನ್ನು ಬಿಡಲಾರನು. ಕಲ್ಲಿಗೆ ದೇವರ ಆಕಾರವು ಬಂದರೂ ಅದು ತನ ಕಾಠಿಣ್ಯವನ್ನು ಬಿಡದು)

ಬನವೀರನ ಕುಮಂತ್ರದ ಸುಳಿವು ಅರಮನೆಯ ನಾಪಿತನೊಬ್ಬನಿಗೆ ಹೇಗೋ ತಿಳಿಯಿತು. ಅವನು ಅರಮನೆಯ ಉಪ್ಪುಂಡು ಬದುಕಿಕೊಂಡಿರುವ ನಿಶ್ಚಲ ಸ್ವಾಮಿಭಕ್ತ. ಅವನು ಭಯಗೊಂಡು ತತ್ತರಿಸಿದನು. ಇಷ್ಟಾದರೂ ತನ್ನ ವಿವೇಕವನ್ನು ಕೈಬಡಿಲಿಲ್ಲ.

ರಾಜಪುತ್ರನನ್ನು ಕಣ್ಣಿನಲ್ಲಿ ಎಣ್ಣೆಯಿಟ್ಟು ಕೊಂಡು ರಕ್ಷಿಸುತ್ತಿದ್ದ ಪನ್ನೆಗೆ ಈ ರಹಸ್ಯವನ್ನು ತಿಳಿಸಿದನು. ಪನ್ನೆಯ ಕಣ್ಣುಗಳಿಗೆ ಕತ್ತಲು ಕವಿದಂತಾಯತು. ಪ್ರಾಣವನ್ನು ಪಣವಿಟ್ಟಾದರೂ ರಾಜಕುಮಾರನನ್ನು ಉಳಿಸಬೇಕೆಂದು ದೃಢ ಸಂಕಲ್ಪವನ್ನು ಮಾಡಿದಳು. ಅಂದಿನಿಂದ ಕ್ಷಣವೂ ರಾಜಕುಮಾರನನ್ನಗಲದೆ ಅರಮನೆಯಲ್ಲಿ ಕಾದುನಿಂತಳು.

ಒಂದು ಅಮವಾಸ್ಯೆಯ ನಡುವಿರುಳು, ಎಲ್ಲೆಲ್ಲೂ ನಿಶ್ಶಬ್ದ, ಪನ್ನೆಯ ತನ್ನ ಏಕಮಾತ್ರ ಪುತ್ರನನ್ನು ಬಳಿಯಲ್ಲಿ ಮಲಗಿಸಿ ಉಯ್ಯಾಲೆಯಲ್ಲಿ ಪವಡಿಸಿದ್ದ ರಾಜಕುಮಾರನನ್ನು ಆಗಾಗ ತೂಗುತ್ತಾ ಯಾವುದೋ ಪಂಚೆಯನ್ನು ಹೊಲಿಯುತ್ತಿದ್ದಳು.

ಅಷ್ಟರಲಿ ಹೆಜ್ಜೆಯ ಸಪ್ಪಳ ಕೇಳಿಸಿದಂತಾಯಿತು. ಪನ್ನೆಯು ಬಾಗಿಲತ್ತ ದೃಷ್ಟಿಯನ್ನು ಹೊರಳಿಸುತ್ತಿರುವಾಗಲೇ ಮೆಲುವಾಗಿ ಬಾಗಿಲನ್ನು ಪಕ್ಕಕ್ಕೆ ಸರಿಸಿ ಅದೇ ನಾಪಿತನು ಒಳಕ್ಕೆ ಬಂದು ಅಮ್ಮ ಬನವೀರನಿತ್ತ ಹೊರಟು ಬರುವಂತಿದೆ ಅವನ ಚರ್ಯೆಯು ನನ್ನನ್ನಿಲ್ಲಿಗೆ ಬರಮಾಡಿತು. ಈಗೇನು ಮಾಡೋಣ? ಎಂದನು.

ಪನ್ನೆಯು ಬೆಚ್ಚಿದಳು. ಪ್ರತೀಕ್ಷಿಸುತ್ತಿದ್ದ ವಿಪತ್ತು ಈ ದಿನ ಸಂಪ್ರಾಪ್ತವಾಯಿತೆಂದು ನೆನೆದು ಆ ಧೀರ ಮಹಿಳೆ ಒಂದು ಕ್ಷಣ ಕಲ್ಲಿನಂತೆ ನಿಂತು ಯೋಚಿಸಿದಳು. ತನ್ನ ಹೃದಯವೂ ಕಲ್ಲಾಗಿ ನಿಲ್ಲುವಂತೆ ತನ್ನ ನಿರ್ಧಾರವನ್ನು ಬಲಿದಳು. ಈ ನಿರ್ಧಾರವು ಫಲಿಸುವಂತೆ ಭುವನೇಶ್ವರಿಯನ್ನು ಪ್ರಾರ್ಥಿಸಿದಳು. ಅದಾಗಲೇ ಆಕೆಯ ಕಣ್ಣುಗಳಿಂದ ಕಣ್ಣೀರು ಸುರಿಯತೊಡಗಿತ್ತು. ಆವೇಶಗೊಂಡವಳಂತೆ ನಾಪಿತನ ಕಡೆಗೆ ತಿರುಗಿ ''ಮೇವಾಡ ಸಿಂಹಾಸನದ ಭದ್ರತೆಗಾಗಿ ಬಂದಿರುವ ಓ ಸ್ವಾಮಿಷ್ಠ, ನನ್ನ ಮಾತನ್ನು ಕೇಳು. ಸಲ್ಲದ ಮಾತೆಂದು ಹಿಂದುಳಿಯಬೇಡ. ಇದು ನನ್ನ ನಿನ್ನ ಕಲ್ಯಾಣದ ಚಿಂತನೆಯ ಕಾಲವಲ್ಲ. ಮೇವಾಡವು ಉತ್ತರಾಧಿಕಾರಿ ಇಲ್ಲದಂತಾಗಬಾರದು. ಇಗೋ ಗಾಢ ನಿದ್ರೆಯಲ್ಲಿರುವ ರಾಜಕುಮಾರನನ್ನು ನಿನ್ನವಶಕೊಪ್ಪಿಸುವೆನು ಇವನನ್ನು ಯಾರ ಕಣ್ಣುಗಳಿಗೂ ಬೀಳದಂತೆ ಸುರಕ್ಷಿತವಾದ ಸ್ಥಳಕ್ಕೊಯ್ದು ಬಿಡು. ನಾನು ನಿನ್ನನ್ನು ಕಾಣುವವರೆಗೆ ಮಗುವಿನ ಕೂದಲು ಕೊಂಕದಂತೆ ಸಂರಕ್ಷಿಸುತ್ತಿರು.

ಮುಂದಿನ ಕೆಲಸ ನನ್ನದು'' ಎಂದಳು. ನಾಪಿತನು ''ಅಮ್ಮ ಯಾವ ಬಾಲಕನನ್ನೂ ಅರಮನೆಯಿಂದ ಹೊರಗೊಯ್ಯಬಾರದೆಂದು ಆ ಸಂಶಯ ಪಿಶಾಚಿಯು ಆಜ್ಞಾಪಿಸಿರುವನಲ್ಲ'' ಎಂದು ಹೇಳಿದನು.

ಹಾಗೂ ಇದೆಯೇ? ಚಿಂತೆಯಿಲ್ಲ. ಇಗೋ ಈ ಬುಟ್ಟಿಯಲ್ಲಿ ರಾಜಕುಮಾರನನ್ನು ಮಲಗಿಸಿ, ಮೇಲೆ ಕಸವನ್ನು ತುಂಬಿಸಿ ನಿನ್ನ ವಶಕ್ಕೊಪ್ಪಿಸುತ್ತೇನೆ, ಯಾರೂ ಸಂದೇಹ ಗೊಳ್ಳುವಂತಿಲ್ಲ. ಅದರಲ್ಲೂ ನಡವಿರುಳು, ನಿದ್ದೆಯ ಗುಂಗಿನಲ್ಲಿರುವ ಯಾವ ದ್ವಾರ ಪಾಲಕನೂ ಸರಿಯಾಗಿ ನೋಡುವಂತಿಲ್ಲ ಎಂದು ಪನ್ನೆ ಒಂದೇ ಉಸಿರಲ್ಲಿ ಹೇಳಿದಳು. ನಾಪಿತನು ಸಂದೇಹಗೊಂಡವನಂತೆ ''ತಾಯೆ, ಈ ಸೂಚನೆಯೋನೋ ಸಮರ್ಪಕವಾಗಿಯೇ ಇದೆ. ಆದರೆ ದುಷ್ಟನಾದ ಬನವೀರನಿಗೆ ನೀವೇನು ಉತ್ತರಗೊಡುವಿರಿ? ಇಲ್ಲಿಂದ ಮರೆಯಾದರೂ ರಾಜಕುಮಾರನು ಒಂದಲ್ಲ ಒಂದು ದಿನ ಆ ಹದ್ದಿನ ಕಣ್ಣುಗಳಿಗೆ ಬಲಿಬೀಳದಿರಲಾರನು. ಅಷ್ಟಕ್ಕೂ ದುಷ್ಟನವನು ತಾಯೆ'' ಎಂದನು.

ರಾಜನಿಷ್ಠ, ಇದನ್ನೆಲ್ಲ ನೀನು ಚಿಂತಿಸಬೇಡ, ನಿನಗಿತ್ತ ಈ ಹೊಣೆಯನ್ನು ಚಾಚೂ ತಪ್ಪದೆ ನಿರ್ವಹಿಸಿಬಿಡು, ಮೇವಾಡದ ಈ ಕಿರುಕಂದಗೆ, ರಾಜವಂಶದ ಕುಡಿಗೆ, ಯಾವುದೇ ಅಪಾಯವೊದಗದಂತೆ ನೋಡಿಕೊಳ್ಳುವ ಭಾರ ನಿನ್ನದು, ಬೇಗನೆ ತೆರಳು, ನಿನಗೆ ಮಂಗಲವಾಗಲಿ ಎಂದೆಂದು ಪನ್ನೆಯು ತನ್ನ ಯೋಚನೆಯಂತೆ ಮಾಡತಕ್ಕ ಕೆಲಸವನ್ನು ಮುಗಿಸಿ ಒಂದಿಷ್ಟೂ ಸದ್ದಾಗದಂತೆ, ನಾಪಿತನಿಗೆ, ಬುಟ್ಟಿಯನ್ನೊಪ್ಪಿಸಿ ಅವನನ್ನು ಹೊರಗೆ ಕಳುಹಿ ಬಾಗಿಲನ್ನು ಮುಚ್ಚಿಕೊಂಡಳು.

ಕರುಣಾದ್ರೆಯಾಗಿದ್ದ ಪನ್ನೆ ಮುಂದಿನ ಕೆಲಸಕ್ಕೆ ತಾನು ತಾಯಿಯೆಂಬುದನ್ನೂ ಗಣಿಸದೆ ಕಲ್ಲು ಹೃದಯದವಳಾದಳು. ತನ್ನ ಪಕ್ಕದಲ್ಲೊರಗಿದ್ದ ರಾಜಕುಮಾರನ ಸಮ ವಯಸ್ಕನಾಗಿದ್ದ ತನ್ನ ಪುತ್ರನನ್ನು ಮೆಲ್ಲಗೆ ಎತ್ತಿ ಉಯ್ಯಾಲೆಯಲ್ಲಿ ಮಲಗಿಸಿದಳು. ರಾಜಕುಮಾರನ ಬಟ್ಟೆಬರೆಗಳನ್ನು ಹೊದಿಸಿದಳು. ಮಗುವಿನ ಹಣೆಯನ್ನೊಮ್ಮೆ ಮೆಲುವಾಗಿ ಒರಸಿ, ಮುಂಗುರುಳುಗಳನ್ನು ನೇವರಿಸಿದಳು. ಅವಳಿಗರಿಯದೇನೆ ಕಣ್ಣುಗಳಿಂದ ನೀರು ಇಳಿಯಿತು. ಅದನ್ನೊರಸಿಕೊಳ್ಳುತ್ತಾ ಮಗನೆ ನೀನು ನನ್ನನ್ನು ನೋಡಲಾರೆ. ನಾನು ಮಾತ್ರ ನೋಡುತ್ತಿರುವೆ ನಿನ್ನನ್ನು. ಈ ಕಣ್ಣುಗಳಿಗೆ ನಿನ್ನ ದರ್ಶನ ಕೊನೆಯದು. ರಾಜಪುತ್ರನಿಗಾಗಿ ಆತ್ಮ ಬಲಿದಾನ ಮಾಡಿದ ಹಿರಿಯ ಪುಣ್ಯ ನಿನಗಿದೆ. ನಿನ್ನನ್ನು ಹೆತ್ತು ಹೊತ್ತ ನಾನು ಪುಣ್ಯಶಾಲಿನಿ ಎಂದಂದು ತನ್ನೆರಡೂ ಕೈಗಳಿಂದ ಮಗನ ಮೈಯನ್ನು ತಡವಿ, ಪ್ರಸನ್ನವಾಗಿ ನಿದ್ರಿ ಸುತ್ತಿದ್ದ ಮಗನನ್ನು ಮುದ್ದಿ ಸಿ ಅಲ್ಲಿಂದ ಹಿಂದಿರುಗಿ ಮೊದಲು ಕುಳಿತೆಡೆಗೆ ಬಂದಳು.

ಕ್ಷಣವು ದಾಟಿತು. ನಾಪಿತನ ಮಾತು, ಸೂಚನೆ ಪನ್ನೆಯ ಕಿವಿಗಳಲ್ಲಿ ಗುಂಯಿ ಗುಟ್ಟುತ್ತಿತ್ತು.

ಅಷ್ಟರಲ್ಲಿ ಹೊರಗಿನಿಂದ ಕಾಲ ಸಪ್ಪಳ, ಕೊಂಚ ಹೊತ್ತಿನಲ್ಲಿ ಬಾಗಿಲ ಬಡಿತ, ಅದೂ ಮೆಲುವಾಗಿ ಪನ್ನೆ ಬಾಗಿಲ ಬಳಿ ಬಂದು ಚಿಲಕವನ್ನು ಸರಿಸಿದಳು. ಕಾಲ ಸ್ವರೂಪನಾದ ಪ್ರಚ್ಛನ್ನವೇಷನಾದ ಬನವೀರನು ನುಗ್ಗಿ ಬಂದು ಉಸಿರೆತ್ತಿದರೆ ಉಳಿಯಲಾರೆ-ಹೇಳು -ಎಲ್ಲಿರುವನು ರಾಜಕುಮಾರನು? ಎಂದು ಅಬ್ಬರಿಸಿದನು. ಪನ್ನೆ ಅಳುಕಲಿಲ್ಲ ''ಎಲೈ ಘಾತಕಿಯೇ, ನೀನಾರೆಂದು ನಾನು ಬಲ್ಲೆ. ನಿನ್ನ ಮರೆ ವೇಷದಲ್ಲಿಯೂ ನೀನೆದ್ದು ಕಾಣುತ್ತಿರುವೆ. ಹೀಗಿದ್ದರೂ ಒಂದು ಮಾತನ್ನು ಹೇಳುವೆ. ತಾಯಿಯ ನೆಲೆಯಲ್ಲಿ ಸೆರಗೊಡ್ಡಿ ಬೇಡುವೆನು. ದಯಮಾಡಿ ಈ ಕೊಲೆಗೆ ಮುಂದೆ ಬರಬೇಡ ಎಂದಳು ಪನ್ನೆ ''ಯಾವುದೇ ಬೇಡಿಕೆಯನ್ನು ಈ ಕಿವಿಗಳು ಕೇಳುವಂತಿಲ್ಲ. ಇರಲಿ, ಒಂದು ಮಾತನ್ನು ಮಾತ್ರ ಆಡದಿರಲಾರೆ. ಎಂದಾದರೂ ಯಾರಿಗಾದರೂ ಈ ವಿಚಾರವು ತಿಳಿಯಿತೆಂದಾದರೆ ಅಲ್ಲಿಗೆ ತೀರಿತು ನಿನ್ನ ದಿನ ನೆನಪಿಟ್ಟುಕೋ' ಎಂದನ್ನುತ್ತಾ ತನ್ನನ್ನು ತಡೆಯಲು ಬಂದ ಪನ್ನೆಯನ್ನು ಬಲವಾಗಿ ತಳ್ಳಿ ಉಯ್ಯಾಲೆಯಲ್ಲಿ ಏನನ್ನೂ ಅರಿಯದೆ ನಿದ್ರಿಸುತ್ತಿದ್ದ ಪನ್ನೆಯ ಮಗನ ಎದೆಯನ್ನು ಕಠಾರಿಯಿಂದ ಸೀಳಿ ಬಿರುಗಾಳಿಯಂತೆ ಅಲ್ಲಿಂದ ಮರೆಯಾದನು.

ಬಿದ್ದಲ್ಲಿಂದ ಎದ್ದು ಬರುವುದರೊಳಗೆ ಕಾರ್ಯವು ನಡೆದು ಹೋಗಿತ್ತು ಉಯ್ಯಾಲೆಯಲ್ಲಿ ಮಡುಗಟ್ಟಿನಿಂತ ರಕ್ತದಲ್ಲಿ ಮುಳುಗಿದ್ದ ಮಗುವನ್ನು ನೋಡಿ ಆಕೆಗೆ ಸಹಿಸಲಾಗಲಿಲ್ಲ. ಕಲ್ಲಾಗಿದ್ದ ಹೃದಯವು ಕರಿಗಿ ಹೋಯಿತು. ಆಕೆ ಗೋಳೋ ಎಂದು ಅತ್ತಳು.

ಧಾತ್ರಿಯ ಗೋಳನ್ನು ಕೇಳಿ ರಾಜಭವನದವರೆಲ್ಲರೂ ಧಾವಿಸಿ ಬಂದರು ನೋಡುವುದೇನು? ರಕ್ತಮಯವಾದ ಬಾಲಕನ ಕಳೇಬರ ಒಂದೆಡೆ ಮೂರ್ಛಾಗತೆಯಾದ ಪನ್ನೆ ಮತ್ತೊಂದೆಡೆ. ಬಂದವರೆಲ್ಲರೂ ದಿಗ್ಭ್ರಾಂತರಾದರು. ಪನ್ನೆಯನ್ನು ಉಪಚರಿಸಿ ಎಚ್ಚರಗೊಳಿಸಿ ನಡೆದ ಸಂಗತಿಯನ್ನು ಕೇಳಿದರು. ಪನ್ನೆಯು ಆಲೋಚನೆ ಮಾಡಿಯೇ ಉತ್ತರಗೊಡುತ್ತಾ ''ಯಾರೋ ಕರಿಯ ಮನುಷ್ಯನೊಬ್ಬನು ಬಂದು ಈ ಅನರ್ಥವನ್ನೆಸಗಿದನು''

ಎಂದಳು. ಈ ಮಾತು ಯಾರಿಂದಲೂ ಒಡೆಯಲಾಗದ ಸಮಸ್ಯೆಯಾಯಿತು. ಆ ಇರುಳಲ್ಲಿ ಹಲವರು ಅರಮನೆಯಿಡೀ ಶೋಧ ಮಾಡಿದರು. ಪ್ರಯೋಜನ ವಾಗಲಿಲ್ಲ. ಮರುದಿನ ಬೆಳಗಾಗುವುದರೊಳಗೆ ಎಲ್ಲೆಲ್ಲೂ ಈ ದುರಂತ ವಾರ್ತೆಯು ಹರಡಿತು. ಬನವೀರನೂ ಶೋಕನಟನೆಯನ್ನು ಮಾಡಿ ತನ್ನ ಸರದಾರರ ಕಣ್ಣಿಗೆ ಮಣ್ಣೆರಚಿದನು.

ವರ್ಷಗಳು ದಾಟಿದವು. ಧೀರೆಯಾದ ಪನ್ನೆಯು ತಾನು ಸಂಕಲ್ಪಿಸಿದಂತೆ ಬಹುರಹಸ್ಯವಾಗಿ ಶಿಕ್ಷಣ ಮೊದಲಾದುವುಗಳಿಂದ ರಾಜಕುಮಾರನನ್ನು ಬೆಳೆಸುತ್ತ ಬಂದಳು. ರಾಜಕುಮಾರನು ಯೌವನಾವಸ್ಥೆಗೆ ಬರುತ್ತಲೇ ಅರಮನೆಯಲ್ಲಿ ನಡೆದ ಅನ್ಯಾಯಕ್ಕೆ ಕಾರಣವಾದ ಹುತ್ತದ ಹಾವಿನ ಸುಳಿವು ಸಿಕ್ಕಿತು. ವ್ಯಗ್ರರಾದ ಪ್ರಜೆಗಳು ಬನವೀರನನ್ನು ಛೀಗಳೆದು ರಾಜ್ಯದಿಂದಲೇ ಹೊರಗೋಡಿಸಿದರು.


ವೀರ ಪನ್ನೆಯ ಸಾಹಸ ಕೃತ್ಯವನ್ನೂ ಪುತ್ರ ಬಲಿದಾನದ ಮೂಲಕ ರಾಜಕುಮಾರನನ್ನು ಉಳಿಸಿದ ಅತುಲ ತ್ಯಾಗವನ್ನೂ ಕೊಂಡಾಡಿ ಪ್ರಜೆಗಳು ಆಕೆಯನ್ನು ಮಹಾ ಮಾತೆಯೆಂದು ಸಂಬೋಧಿಸುತ್ತಾ ಆಕೆಯ ಸಮಕ್ಷಮದಲ್ಲಿಯೇ ಉದಯಸಿಂಹನಿಗೆ ಪಟ್ಟಾಭಿ ಷೇಕವನ್ನು ಮಾಡಿದರು. ರಾಜಭಕ್ತಿಯುತೆಯಾದ ಪನ್ನೆಯ ದೆಸೆಯಿಂದ ಸಂಗ್ರಾಮ ಸಿಂಹನ ವಂಶವು ಕಡಿಯದೆ ಚಿಗುರಿತು. ಪನ್ನೆಯ ಚರಿತ್ರೆಯು ಮೇವಾಡದಲ್ಲಿ ಮಾತ್ರವಲ್ಲ ಭಾರತದಲ್ಲಿಯೇ ಜನಜನಿತವಾಯಿತು.

## ಶಬ್ದಗಳ ಅರ್ಥ

ಧಾತ್ರಿ – ಸಾಕುತಾಯಿ; ಪಚ್ಚೆ – ಹಸಿರುರತ್ನ; ಅಮೂಲ್ಯ – ಬೆಲೆಕಟ್ಟಲಾಗದ; ವಿಶ್ರುತೆ – ಹೆಸರುವಾಸಿ; ಇಹಲೋಕ ತ್ಯಜಿಸು – ಮರಣಹೊಂದು; ಮನೋರಥ – ಬಯಕೆ; ಕುತಂತ್ರ – ದುಷ್ಟಾಲೋಚನೆ; ನಾಪಿತ – ಕ್ಷೌರಿಕ; ಚರ್ಯೆ – ಹಾವಭಾವ; ಪ್ರಚ್ಛನ್ನ – ಮುಸುಕುದಾರಿ;

## ಅಭ್ಯಾಸ

**ಕೃತಿ – 1 ಕೆಳಗಿನ ಜಾಲಾಕೃತಿಯನ್ನು ಬಿಡಿಸಿರಿ.**




**ಕೃತಿ – 2 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1) ಮೇವಾಡದ ರಾಜನ ಹೆಸರು ಏನಿತ್ತು?

ಉತ್ತರ : ..................................................................................................

..................................................................................................

2) ಬನವೀರನು ರಾಜ್ಯಪರಿಪಾಲಕನಾಗಲು ಕಾರಣವೇನು?

ಉತ್ತರ : ..................................................................................................

..................................................................................................

3) ಬನವೀರನಲ್ಲಿದ್ದ ದುರ್ವಿಚಾರ ಯಾವುದು?

ಉತ್ತರ : ..................................................................................................

..................................................................................................

4) ರಾಜಕುಮಾರನನ್ನು ಅರಮನೆಯಿಂದ ಹೊರಗೆ ಒಯ್ದವರುಯಾರು?

ಉತ್ತರ : ....................................................................................................................

....................................................................................................................................

5) ಪ್ರಜೆಗಳು ಪನ್ನಾಧಾತ್ರಿಯನ್ನು ಮಹಾಮಾತೆ ಎಂದು ಸಂಬೋಧಿಸಲು ಕಾರಣವೇನು?

ಉತ್ತರ : ....................................................................................................................

....................................................................................................................................

**ಕೃತಿ - 3 ಮೇವಾಡದ ರಾಜವಂಶ ಉಳಿಸಲು ಪನ್ನಾಧಾತ್ರಿ ಮಾಡಿದ ಕಾರ್ಯವನ್ನು ಬರೆಯಿರಿ.**

ಉತ್ತರ : ....................................................................................................................

....................................................................................................................................

**ಕೃತಿ- 4 ಪಾಠದಲ್ಲಿ ಬಂದ ಹೆಸರುಗಳನ್ನು ಕ್ರಮವಾಗಿ ಬರೆಯಿರಿ .**

**ಕೃತಿ - 5 ಪನ್ನಾಧಾತ್ರಿ ಮತ್ತು ಬಲವೀರನ ನಡುವೆ ನಡೆದ ಸಂಭಾಷಣೆಯನ್ನು ವರ್ಗದಲ್ಲಿ ಅಭಿನಯಿಸಿರಿ.**

**ಕೃತಿ - 6 ಕೆಳಗಿನ ತರಂಗಾಕೃತಿಯನ್ನು ಪೂರ್ಣ ಮಾಡಿರಿ**

ಇತಿಹಾಸ ಪ್ರಸಿದ್ಧ ಮಹಿಳೆಯರು

ಆದರ್ಶಮನೆತನಗಳು

**ಕೃತಿ-7 ಕೆಳಗಿನ ಚಿತ್ರವನ್ನು ನಿರೀಕ್ಷಿಸಿರಿ ನಿಮ್ಮ ಸ್ವಅಭಿಪ್ರಾಯವನ್ನು ಬರೆಯಿರಿ.**

ಬನವೀರನನಡತೆ ಉಚಿತವೇ?



# 4. ದುರಗ ಮುರಗಿಯರು

ಗೀತಾ ನಾಗಭೂಷಣ

**ಲೇಖಕರ ಪರಿಚಯ :** ಗೀತಾ ನಾಗಭೂಷಣ ಕೆಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಲೇಖಕಿ ಇವರು. ಕರ್ನಾಟಕ ರಾಜ್ಯ ಸಾಹಿತ್ಯ ಆಕಾಡೆಮಿಯ ಅಧ್ಯಕ್ಷರಾಗಿ ಅನುಪಮ ಸೇವೆ ಸಲ್ಲಿಸಿರುವರು. ಹಲವಾರು ಕಾದಂಬರಿ, ನಾಟಕ, ಕಥಾ ಸಂಕಲನಗಳನ್ನು ಪ್ರಕಟಿಸಿರುವರು. ಬದುಕು, ಹೆಣ್ಣಿನ ಕೂಗು, ನೀಲಗಂಗಾ, ಜೀವನಚಿತ್ರ ಮುಂ. ಅವರ ಮಹತ್ವದ ಕೃತಿಗಳು, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅತ್ತಿಮಬ್ಬೆ, ಬಿ. ಸರೋಜಾದೇವಿ ಹಾಗೂ ಮಲ್ಲಿಕಾ ಪ್ರಶಸ್ತಿ ಮುಂತಾದವು ಅವರಿಗೆ ದೊರೆತ ಪುರಸ್ಕಾರಗಳಲ್ಲಿ ಮಹತ್ವ ಪಡೆದಿವೆ. ಮರಾಠಿ, ತೆಲುಗು, ತಮಿಳಿಗೆ ಇವರ ಕೆಲವು ಕಥೆಗಳು ಭಾಷಾಂತರವಾಗಿವೆ.



ಭಾರತ ಹಳ್ಳಿಗಳ ದೇಶ. ಇಲ್ಲಿ ಎಲ್ಲ ಧರ್ಮ, ಮತ, ಪಂಥಗಳ ಜನರು ಸಹೋದರತ್ವದಿಂದ ಬಾಳುತ್ತಿದ್ದಾರೆ. ಒಕ್ಕಲುತನವು ಮುಖ್ಯ ಉದ್ಯೋಗವಾಗಿದೆ. ಹಳ್ಳಿಗಳಲ್ಲಿ ಕುಂಬಾರರು, ಕಂಬಾರರು, ಬಡಿಗರು ಹೀಗೆ ಹಲವಾರು ಸಮುದಾಯದ ಜನರು ವಾಸಿಸಿದ್ದಾರೆ. ಇವರೆಲ್ಲರೂ ಒಕ್ಕಲುತನಕ್ಕೆ ಬೇಕಾಗುವ ಉಪಕರಣಗಳನ್ನು ತಯಾರಿಸಿ ಕೊಡುತ್ತಾರೆ. ಇವರಿಗೆ ಹಳ್ಳಿಯ ಕಸಬುದಾರರು ಎನ್ನುತ್ತಾರೆ. ಇವರ ಊರೊಳಗೆ ವಾಸಿಸಿದ್ದರೆ, ಊರಹೊರಗೆ ವಾಸಿಸುವ ಸಂಚಾರಿ ಜನಾಂಗದವರೂ ಇದ್ದಾರೆ. ಅಂಥವರಲ್ಲಿ ದುರಗ ಮುರಗಿಯರ ಜನಾಂಗವೂ ಒಂದು.

ಮೂಲತಃ ಅಲೆಮಾರಿ ಜೀವನ ನಡೆಸುವ ಈ ಜನರು ಬುಡಕಟ್ಟು ಜನಾಂಗದವರು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಇವರು ಕಂಡುಬರುತ್ತಾರೆ. ಊರಹೊರಗೆ ಮತ್ತು ಅಡವಿಯಲ್ಲಿ ಗುಡಿಸಲು ಅಥವಾ ಡೇರೆಗಳಲ್ಲಿ ವಾಸಿಸುತ್ತಾರೆ. ತಮ್ಮದೇ ಆದ ಭಾಷೆ, ವೇಶ, ರೂಪ, ಆಚಾರ, ವಿಚಾರ ಮೊದಲಾದವುಗಳನ್ನು ರೂಢಿಸಿಕೊಂಡಿದ್ದಾರೆ. ಮಳೆಗಾಲದಲ್ಲಿ ಮಾತ್ರ ಒಂದೆಡೆ ಇರುತ್ತಾರೆ. ಚಳಿಗಾಲದಲ್ಲಿ ದವಸ ಧಾನ್ಯಗಳ ರಾಶಿಗೆ ಅಂತ ಹಳ್ಳಿ, ಹಳ್ಳಿಗಳಲ್ಲಿ ತಿರುಗುತ್ತಾರೆ. ಬೇಸಿಗೆಯಲ್ಲಿ ಊರ ನಡುವೆಯೇ ಜನರ ಮುಂದೆ ಆಟಕಟ್ಟಿ ಕುಣಿದು ಉದರಪೋಷಣೆ ಮಾಡಿಕೊಳ್ಳುತ್ತಾರೆ. ಇಂದು ಈ ಹಳ್ಳಿಯಾದರೆ ನಾಳೆ ಮತ್ತೊಂದು. ಹೀಗೆ ಇವರು ಸಂಚಾರಿ ಜೀವನ ನಡೆಸುತ್ತಾರೆ.

ದುರಗ ಮುರಗಿಯರಲ್ಲಿ ಎಲ್ಲರಂತೆ ನಾಲ್ಕು ವಯೋಮಾನದ ಜನರನ್ನು ಕಾಣಬಹುದು. ಮುದುಕ ಮುದುಕಿಯರು. ಹರೆಯದವರು, ಬಾಲಕರು ಮತ್ತು ಕೂಸುಗಳು. ಮುದುಕ-ಮುದುಕಿಯರು ಯಾವಾಗಲೂ ಗುಡಿಸಲುಗಳಲ್ಲಿರುತ್ತಾರೆ. ಹರೆಯದವರು ಮುಖವಾಡ ಧರಿಸಿ, ವೇಷಕಟ್ಟಿ ಪೋತರಾಜರಾಗಿ ಕುಣಿಯಲು ಊರೂರಿಗೆ ಹೋಗುತ್ತಾರೆ. ಅವರ ಹೆಂಡಂದಿರರು ಬುರುಬುರು ವಾದ್ಯ ಬಾರಿಸುತ್ತ ಊರಲ್ಲಿ ತಿರುಗಾಡಿ ಹಣ, ದವಸ-ಧಾನ್ಯ ಮತ್ತು ಆಹಾರ ಸಂಗ್ರಹಿಸುತ್ತಾರೆ. ಬಾಲಕರು ಕುಣಿಯುವ, ಲಡ್ಡ ಹೊಡೆದುಕೊಳ್ಳುವ ಹಾಗೂ ಆರ್ಭಟಿಸುವ ತರಬೇತಿಯನ್ನು ಪಡೆಯುತ್ತಿರುತ್ತಾರೆ. ಪುಟ್ಟ ಕೂಸುಗಳು ಆಯಿ - ಮುತ್ಯಾರ ಬಳಿಯಲ್ಲಿ ಗುಡಿಸಲಿನಲ್ಲಿ ಇರುತ್ತವೆ. ಕೆಲವೊಮ್ಮೆ ತಾಯಿ ಎಳೆಗೂಸನ್ನು ಬಟ್ಟೆಯ ಜೋಳಿಗೆಯಲ್ಲಿ ಮಲಗಿಸಿಕೊಂಡು ಹೆಗಲಿಗೆ ನೇತುಹಾಕಿಕೊಂಡೇ ಬುರುಬುರು ವಾದ್ಯ ಬಾರಿಸುತ್ತಿರುತ್ತಾಳೆ.

ದುರುಗ ಮುರಗಿಯರು ಅಂದರೆ ದುರಗಮ್ಮನ ಆರಾಧಕರು. ದುರುಗ ಅಂದರೆ ದುರ್ಗಾದೇವಿ ಮತ್ತು ಮರಗಮ್ಮ.

ಮುರಗಿ ಅಂದರೆ ಪಾರ್ವತಿ ಎಂದು ಅರ್ಥೈಸಬಹುದು. ಅಡವಿವಾಸಿಗಳಾಗಿದ್ದ ಇವರಿಗೆ ಅರಣ್ಯವೇ ದೇವತೆ. ಮರದಿಂದ ಮಾಡಿದ ಗೊಂಬೆಯನ್ನು ಕಟ್ಟಿಗೆಯ ಕಪಾಟಿನಲ್ಲಿ ಅಥವಾ ಬಿದಿರಿನ ಬುಟ್ಟಿಯಲ್ಲಿಡುತ್ತಾರೆ. ಅದನ್ನು ತಲೆಯ ಮೇಲೆ ಹೊತ್ತು ಬೀದಿ ಬೀದಿ ಹೋಗಿ ''ಈ ದೇವತೆ ಬಹಳ ಜಾಗ್ರತವಾಗಿದ್ದಾಳೆ. ನಿಮ್ಮ ಎಲ್ಲ ಆಶೋತ್ತರಗಳನ್ನು, ಈಡೇರಿಸುತ್ತಾಳೆ. ತಪ್ಪಿದರೆ ಕಾಟಕೊಡುತ್ತಾಳೆ.'' ಎಂದು ಹೇಳುತ್ತ, ಜೀವನೋಪಾಯವನ್ನು ಕಂಡು ಕೊಳ್ಳುತ್ತಾರೆ. ಇವರ ಆಚಾರ, ವಿಚಾರ, ರೀತಿ ರಿವಾಜುಗಳನ್ನು ನೋಡಿದರೆ ಇವರ ಭಿಲ್ಲ ಅಥವಾ ಗೊಂಡ ಜಾತಿಯಿಂದ ಬಂದ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿರಬೇಕು, ಎಂದು ಅನಿಸುತ್ತದೆ.

ದುರಗ ಮುರಗಿಯರ ಆಹಾರ ಸಂಗ್ರಹಣೆಯ ರೀತಿಗಳನ್ನು ಅನುಸರಿಸಿ ಮೂರು ವಿಧಾನಗಳನ್ನು ಮಾಡಲಾಗಿದೆ.

1) ಬುಟ್ಟಿ ದುರಗ ಮುರಗಿಯರು. - ಇವರು ದೇವತೆಯನ್ನು ಬುಟ್ಟಿಯಲ್ಲಿಟ್ಟುಕೊಂಡು ಊರೂರು ಅಲೆದಾಡುತ್ತಾರೆ.

2) ಪೆಟ್ಟಿಗೆ ದುರುಗ ಮುರಗಿಯರು - ಇವರು ದುರ್ಗಾದೇವತೆಯನ್ನು ಪೆಟ್ಟಿಗೆಯಲ್ಲಿ ಇಟ್ಟುಕೊಂಡು ಓಣಿ ಓಣಿ ತಿರುಗುತ್ತ ಧನ ಧಾನ್ಯಗಳನ್ನು ಸಂಗ್ರಹಿಸುತ್ತಾರೆ.

ಹಗುರವಾದ ಕಟ್ಟಿಗೆಯ ಪೆಟ್ಟಿಗೆಯನ್ನು ಗಂಡಸರು ತಲೆಯ ಮೇಲೆ ಹೊತ್ತು ತರುತ್ತಾರೆ. ಓಣಿಯ ಪ್ರಮುಖ ಸ್ಥಳದಲ್ಲಿ ಗುಡಿಯನ್ನು ಇಳಿಸುತ್ತಾರೆ. ಪೋಚಮ್ಮ ತನ್ನ ಬುರುಬುರು ವಾದ್ಯವನ್ನು ಬಾರಿಸುತ್ತ ಮನೆಮನೆಗೆ ಹೋಗಿ ''ತಾಯಿ ಬಂದಾಳ ಬರ್ರೀ. ಮರಗಮ್ಮ ಬಂದಾಳ ಬರ್ರೆ ನಮ್ಮವ್ವಾ'' ಎಂದು ಒಂದು ಸುತ್ತು ಸುತ್ತಿ ಬರುತ್ತಾಳೆ. ಬುರುಬುರು ವಾದ್ಯದ ಸಪ್ಪಳ ಕೇಳಿ ಗಂಡಸರು., ಹೆಂಗಸರು ಮಕ್ಕಳಾದಿಯಾಗಿ ಎಲ್ಲರೂ ಬಂದು ಸೇರುತ್ತಾರೆ. ಬರುವಾಗ ಮರದಲ್ಲಿ ದವಸ ಧಾನ್ಯಗಳನ್ನೂ, ಬಟ್ಟೆಗಳನ್ನೂ ತಂದು ದೇವತೆಯ ಮುಂದೆ ಇಡುತ್ತಾರೆ. ಜೋಡುಚರಿಗೆ ನೀರನ್ನು ದೇವಿಯ ಮುಂದೆ ಸುರುವಿ, ಭಕ್ತಿಯಿಂದ ಕೈ ಮುಗಿದು ತಮ್ಮನ್ನು ಉದ್ದರಿಸು ಎಂದು ಬೇಡಿಕೊಳ್ಳುತ್ತಾರೆ.
ಪೋತರಾಜನು ಆಟ ಕಟ್ಟುವನು.

''ಅಹಾಹಾ...... ಮರಗ ಮರಗಮ್ಮ
ದುರಗ ದುರಗಮ್ಮ ತಾಯಿ ದ್ಯಾಮವ್ವ,
ಎಲ್ಲಾರ ರೋಗ ಎಲ್ಲಾರ ಪೀಡಾ ಇಲ್ಲದಂಗ ಮಾಡವ್ವ''

ಎಂದು ಅರ್ಭಟಿಸುವನು ಮೈಗೆ ಲಡ್ಡ ಹೊಡೆದುಕೊಳ್ಳುತ್ತ, ಡಬ್ಬಣ ಚುಚ್ಚಿಕೊಳ್ಳುತ್ತ ಬೇವಿನ ಪೆಳ್ಳಿ ತಿನ್ನುತ್ತ ಜೋರಾಗಿ ಕುಣಿಯುವನು. ಈಗ ಪೋತರಾಜನ ಮೈಯಲ್ಲಿ ದೇವಿ ಬಂದಳೆಂದು ಪೋಚಮ್ಮ ಸಾರಿ ಸಾರಿ ಹೇಳುವಳು. ನೆರೆದವರೆಲ್ಲರೂ ''ಚ್ಯಾಂಗ ಭಲೋ...........'' ಎಂದು ಜೋರಾಗಿ ಹೇಳುವರು. ಪೋತರಾಜನ ಮೈಯಲ್ಲಿ ಇನ್ನಷ್ಟು ಉತ್ಸಾಹ ಉಕ್ಕಿ ಅವನು ದೇವರ ಹೇಳಿಕೆ ಮಾಡುವನು.

''ಮರಗಮ್ಮ ಎಂದರೆ ಯಾರೂ ಅಸಡ್ಡೆ ಮಾಡಬ್ಯಾಡ್ರೀ.
ಅವಳು ಹೇಳಿ ಕೇಳಿ ಮರತ್ಯೂದೇವತೆ,
ಅವಳಿಗೆ ಅಲಕ್ಷ್ಯ ಮಾಡಿದರ,
ನಿಮ್ಮ ಮಕ್ಕಳು ಮರಿ ರಕ್ತಕಾರಿ ಸಾಯತಾರ.
ಹಿಂದಕ ಮುಂದಕ ಆಗಿ ಸಾಯತಾರ.
ಅಕೀಮ್ಯಾಲ ನಂಬಿಕೆ ಇಡ್ರೀ.
ನಂಬದವ್ರ ಕೈ ಎಂದೂ ಬಿಡಾಂಗಿಲ್ಲಾ.''

ಎಂದು ಜನರಿಗೆ ಅಂಜಿಕೆಯನ್ನೂ ಹಾಕಿ ಮತ್ತೆ ಅವರನ್ನು ನಂಬಿಸುವ ಕಲೆ ಪೋತರಾಜನದು.

''ಬರ್ರೆವ್ವಾ ಬರ್ರೀ........ನಮ್ಮವ್ವಗೋಳ್ಯಾ ಬರ್ರೀ........ ನಿಮ್ಮ ಕೇರೀಗಿ ಸುಖಾ........ ನಿಮ್ಮ ಊರಿಗಿ ಸುಖಾ........
ಆಡಾ ಮಕ್ಕಳಿ ಸುಖಾ....... ತೂಗಾ ತೊಟ್ಟಲೀಗಿ ಸುಖಾ......
ಬರ್ರೆವ್ವಾ ಬರ್ರೀ.......ನಮ್ಮವ್ವಗೋಳ್ಯಾ ಬರ್ರೀ.......
ನೀರಾಕ್ರೀ.......ಕಾಯಿಒಡೀರಿ.....ಕೈ ಜೋಡಸರ್ರೀ.......''

ಹೀಗೆ ಹೇಳುತ್ತ ಪೋಚಮ್ಮ ತನ್ನ ಬುರುಬುರು ವಾದ್ಯದೊಂದಿಗೆ ಜನರ ಮನಒಲಿಸುವ ಪ್ರಯತ್ನ ಮಾಡುತ್ತಾಳೆ.

3) ಗುಡಿ ದುರುಗ ಮುರಗಿಯರು- ಮಕ್ಕಳಾಡುವಂತಿರುವ ಸಣ್ಣ ಕೈ ಬಂಡಿಗಳಲ್ಲಿ ದುರ್ಗಾದೇವತೆಯನ್ನು ಕೂಡ್ರಿಸಿಕೊಂಡು ಊರತುಂಬೆಲ್ಲ ಸುತ್ತಾಡಿ ಊರಹೊರಗಿನ ಗುಡಿಯವರೆಗೆ ಬರುತ್ತಾರೆ. ಹೀಗೆ ದುರ್ಗಾದೇವಿಯನ್ನು ಊರು ಸುತ್ತಿಸಿ ಹೊರಗೆ ತಂದರೆ, ಊರಲ್ಲಿಯ ರೋಗ ರುಜಿನಗಳು ದೂರವಾಗುತ್ತವೆ. ಭಯಂಕರವಾದ ಪ್ರಾಣಘಾತಕ ಗೊಬ್ಬರ, ಗಣಜಲಿ, ಕಾಲರಾ (ವಾಂತಿಭೇಧಿ), ಪ್ಲೇಗ (ಸಿಡಬೇನೆ), ಇವುಗಳನ್ನು ಮರಗಮ್ಮ ದೇವತೆ ಹೊರಗೆ ಹಾಕುತ್ತಾಳೆಂದು ಇವರ ನಂಬಿಕ ಇತ್ತು. ಹಾಗೂ ಸಮಾಜವೂ ಇದನ್ನು ಬಲವಾಗಿ ನಂಬಿತ್ತು. ಜನರು ದೇವಿಯ ಶಾಂತಿಗಾಗಿ ಶಾಖಾಹಾರಿ ಮತ್ತು ಮಾಂಸಾಹಾರಿ ನೈವೇದ್ಯವನ್ನು ಇವರಿಗೆ ಕೊಡುತ್ತಿದ್ದರು.

ಪ್ರತಿವರ್ಷ ನಾಗರ ಪಂಚಮಿಗಿಂತಲೂ ಮೊದಲು ಆಷಾಢ ಮಾಸದಲ್ಲಿ

ಮಂಗಳವಾರ ಮತ್ತು ಶುಕ್ರವಾರಗಳಂದು ಇವರೆಲ್ಲರೂ ಮರಗಮ್ಮನ ವಿಶೇಷ ಪೂಜೆ ಮಾಡುತ್ತಾರೆ. ಮರಗಮ್ಮನ ಹಾವಳಿ ಮತ್ತೆ ಮರುಕಳಿಸ ಬಾರದೆಂದು ಈ ಪೂಜೆ. ಹಿಂದೆ ಬರುತ್ತಿದ್ದ ಪ್ಲೇಗು ಮತ್ತು ಕಾಲರಾಗಳಿಗೆ ಮರಗಮ್ಮನ ಹಾವಳಿ ಎಂದು ಕರೆಯುತ್ತಿದ್ದರು. ಈ ಸಮಯದಲ್ಲಿ ಥಂಡಿ ಮಾಡುವ ಪದ್ಧತಿ ಇತ್ತು. ಮಂಗಳವಾರ ಮತ್ತು ಶುಕ್ರವಾರ ಮನೆ ಸಾರಿಸಿ ಕೌದಿ - ಕಂಚಡಿ ಒಗೆದು ತಲೆಯ ಮೇಲೆ ನೀರೆರೆದುಕೊಳ್ಳುತ್ತಿದ್ದರು. ಒದ್ದೆ ಮೈಯಿಂದ ಜೋಡುತಂಬಿಗೆ ನೀರಿನಲ್ಲಿ ಬೇವಿನ ಸೊಪ್ಪನ್ನು ಹಾಕಿಕೊಂಡು ಹೋಗಿ ಊರಮುಂದಿನ ಮರಗಮ್ಮನ ಗುಡಿಯ ಹೊಸ್ತಿಲಿನ ಮೇಲೆ ಸುರುವುತ್ತಿದ್ದರು. ಮೊಸರನ್ನ ಮತ್ತು ಅಂಬಲಿ ಕಿಚಡಿ ನೈವೇದ್ಯ ಹಿಡಿಯುತ್ತಿದ್ದರು. ತಾಯಿಯ ಹೊಟ್ಟೆ ತಂಪಾಗಿ ನಮ್ಮ ಮಕ್ಕಳು ಮರಿಗಳನ್ನ ಯಾವ ರೋಗಗಳ ಬಿಸಿ ಬಾಧೆಯೂ ತಗಲದಂತೆ ತಣ್ಣಗಿಡಲು ಪ್ರಾರ್ಥನೆ ಮಾಡುತ್ತಿದ್ದರು.

ಇತ್ತಿತ್ತಲಾಗಿ ಈ ಜನರು ಸಮಾಜದ ಮುಖ್ಯವಾಹಿನಿಗೆ ಬರತೊಡಗಿದ್ದಾರೆ. ಸರಕಾರವು ಇವರ ನೆರವಿಗೆ ನಿಂತಿದೆ. ಶಿಕ್ಷಣದ ಪ್ರಭಾವದಿಂದ ಜನ ಜೀವನ ಬದಲಾಗುತ್ತಿದೆ. ಸುಶಿಕ್ಷಿತರು ಮುಂದೆ ಬರುತ್ತಿದ್ದಾರೆ. ವ್ಯಾಪಾರ ಉದ್ಯೋಗಗಳಲ್ಲಿ ಸಹಭಾಗಿಗಳಾಗುತ್ತಿದ್ದಾರೆ. ಹಳೆಯ ಸಂಪ್ರದಾಯಗಳನ್ನೆಲ್ಲ ಬದಿಗೊತ್ತಿ ಎಲ್ಲರಂತೆ ಸಾಮಾನ್ಯ ಜೀವನ ನಡೆಸಲು ಪ್ರಯತ್ನಿಸುತ್ತಿದ್ದಾರೆ. ಕಾಲಾಂತರದಲ್ಲಿ ದೊಡ್ಡ ಬದಲಾವಣೆಯಾಗುವ ಮುನ್ಸೂಚನೆಗಳೂ ಕಂಡು ಬರುತ್ತಿವೆ.

## ಶಬ್ದಗಳ ಅರ್ಥ

ಸಂಚಾರಿ – ತಿರುಗಾಡು;  ಉದರ ಪೋಷಣೆ– ಹೊಟ್ಟೆಹೊರೆದು ಕೊಳ್ಳು, ನೇತುಹಾಕು–ತೂಗುಹಾಕು, ಸೊಪ್ಪು–ತಪ್ಪಲು.

## ಅಭ್ಯಾಸ

**ಕೃತಿ: 1 – ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1. ಹಳ್ಳಿಯ ಕಸಬುದಾರರ ಹೆಸರು ಬರೆಯಿರಿ.**

ಉತ್ತರ : ..........................................................................................................

..........................................................................................................

..........................................................................................................

**2. ದುರುಗ ಮುರಗಿಯರ ಜೀವನೋಪಾಯದ ವಿಧಾನ ಹೇಳಿರಿ.**

ಉತ್ತರ : ..........................................................................................................

..........................................................................................................

**3. ಪೋತರಾಜನು ಏನೆಂದು ಅರ್ಭಟಿಸುವನು?**

ಉತ್ತರ : ..........................................................................................................

..........................................................................................................

**4. ಮರಗಮ್ಮನ ವಿಶೇಷ ಪೂಜೆಯನ್ನು ಯಾವಾಗ ಮಾಡುತ್ತಾರೆ?**

ಉತ್ತರ : ..........................................................................................................


..........................................................................................................

**5. ಇತ್ತಿಚಿನ ದಿನಗಳಲ್ಲಿ ದುರುಗ ಮುರಗಿಯರಲ್ಲಾದ ಬದಲಾವಣೆಗಳೇನು?**

ಉತ್ತರ : ..........................................................................................................

..........................................................................................................

**ಕೃತಿ: 2 – ಕೆಳಗಿನ ಜಾಲಾಕೃತಿಯನ್ನು ಬಿಡಿಸಿರಿ.**



**ಕೃತಿ: 3 – ಪೆಟ್ಟಿಗೆ ದುರುಗ ಮುರಗಿಯರ ಜೀವನೋಪಾಯದ ವಿಧಾನವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಉತ್ತರ : ..............................................................................................................................

..............................................................................................................................

**ಕೃತಿ: 4 – ಯೋಗೇಶನ ಅನುಮಾನಕ್ಕೆ ನಿಮ್ಮ ಸಲಹೆ ಏನು?**

ಉತ್ತರ



**ದೇವಿಗೆ ಶಾಂತಿ ಮಾಡುವುದರಿಂದ ಪ್ರಾಣಘಾತಕ ರೋಗಗಳು ಕಡಿಮೆ ಯಾಗಬಲ್ಲವೆ?**

**ಕೃತಿ: 5 – ಪ್ರತ್ಯಕ್ಷ ನೋಡಿ ಅಥವಾ ಅಂತರ್ಜಾಲದ ಮುಖಾಂತರ ದುರುಗ ಮುರಗಿಯರ ವೇಷಕಟ್ಟಿ ಕುಣಿಯುವ ಸನ್ನಿವೇಶದ ವಿವರಣೆ ಬರೆಯಿರಿ.**

ಉತ್ತರ : ..............................................................................................................................

..............................................................................................................................

..............................................................................................................................

**ಕೃತಿ: 6 – ಬಿಟ್ಟ ಸ್ಥಳ ತುಂಬಿರಿ**

1) .................ಜೀವನ ನಡೆಸುವ ಈಜನರು ಬುಡಕಟ್ಟು ಜನಾಂಗದವರು.

2) ದುರುಗ ಮುರಗಿಯರು ಅಂದರೆ ದುರಗಮ್ಮನ ........................

3) ದೇವಿಯ ಶಾಂತಿಗಾಗಿ ................ ಮತ್ತು.................. ನೈವೇದ್ಯ ಕೊಡುತ್ತಿದ್ದರು.

4) ಇತ್ತಿತ್ತಲಾಗಿ ಈ ಜನರು ಸಮಾಜದ...................... ಬರತೊಡಗಿದ್ದಾರೆ.

**ಕೃತಿ: 7 – ಕೆಳಗಿನ ಶಬ್ದಗಳನ್ನು ಅನುಕ್ರಮವಾಗಿ ಬರೆದು ಅರ್ಥಪೂರ್ಣವಾಕ್ಯ ತಯಾರಿಸಿರಿ.**

1) ದುರುಗ ದುರ್ಗಾದೇವಿ ಅಂದರೆ ಮರಗಮ್ಮ

ಉತ್ತರ

| |
|---|
| |

2) ಕಿಚಡಿ ಹಿಡಿಯುತ್ತಿದ್ದರು ಅಂಬಲಿ ನೈವೇದ್ಯ ಮತ್ತು ಮೊಸರನ್ನ


ಉತ್ತರ

| |
|---|
| |

**ಕೃತಿ: 8 – ಅಲೆಮಾರಿಗಳು ನೆಲೆನಿಂತು ಬದುಕಲು ಸರಕಾರವು ನೀಡುತ್ತಿರುವ ಸವಲತ್ತುಗಳನ್ನು ಶಿಕ್ಷಕರಿಂದ/ ಅಧಿಕಾರಿಗಳಿಂದ ಅಂತರ್ಜಾಲದಿಂದ ಪಡೆದುಕೊಂಡು ಬರೆಯಿರಿ.**

**ಕೃತಿ: 9** – ಜಾಲಾಕೃತಿಯನ್ನು ಬಿಡಿಸಿರಿ.

ಉತ್ತರ




**ಕೃತಿ: 10 – ಕೆಳಗಿನ ಪರಿಚ್ಛೇದದಲ್ಲಿ ಕಂಡುಬರುವ ಗ್ರಾಮ್ಯ ಶಬ್ದಗಳ ಬದಲಿಗೆ ಗ್ರಾಂಥಿಕ ಶಬ್ದಗಳನ್ನು ಬಳಸಿ ಪರಿಚ್ಛೆದ ಪುನಃ ಬರೆಯಿರಿ.**

ಉತ್ತರ

ಬರ್ರೆವ್ವಾ ಬರ್ರೀ ................. ನಮ್ಮವ್ವಗೋಳ್ಯಾಬರ್ರೀ.....................

ನಿಮ್ಮ ಕೇರಿಗೆ ಸುಖಾ..................... ನಿಮ್ಮ ಊರೀಗಿ ಸುಖಾ.....................

ಆಡಾ ಮಕ್ಕಳಿಗೆ ಸುಖಾ........................ ತೂಗಾ....................... ತೊಟ್ಟಲೀಗಿಸುಖಾ...............

ಬರ್ರೆವ್ವಾ ಬರ್ರೀ......................... ನಮ್ಮವ್ವ ಗೋಳ್ಯಾ ಬರಿ........................

ನೀರಾಕ್ರೀ............................. ಕಾಯಿಒಡೀರಿ.......................... ಕೈ ಜೋಡಸರ್ರೀ..........................

**ಕೃತಿ: 11 – ಕೆಳಗಿನ ಭಿತ್ತಿ ಪತ್ರವನ್ನು ಓದಿ ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ನಗರದ ನಾಗರಿಕಗೊಂದು ಸುವರ್ಣ ಸಂಧಿ!

ಬನ್ನಿ! ಇಂದೇ ಬನ್ನಿ!! ನೋಡಿರಿ ಅದ್ಭುತ ಜಗತ್ತು !!!!

**ನಗರದ ಆಝಾದ ಮೈದಾನಿನಲ್ಲಿ...**

ಖ್ಯಾತ ಜಂಬೋಸರ್ಕಸ್ ಆಗಮಿಸಿದೆ

**ದಿನಾಲು ಮೂರು ಆಟಗಳು**

ಮೊದಲನೆಯ ಆಟ ಮಧ್ಯಾಹ್ನ 1 ರಿಂದ 4

ಎರಡನೆಯ ಆಟ ಸಂಜೆ 4 ರಿಂದ 7

ಮೂರನೆಯ ಆಟ ರಾತ್ರಿ 7 ರಿಂದ 10 ವರೆಗೆ

**ಟಿಕೇಟದರ** ಗ್ಯಾಲರಿ – 50 ರೂಪಾಯಿಗಳು

ಖುರ್ಚಿ – 100 ರೂಪಾಯಿಗಳು

ಚಿಕ್ಕ ಮಕ್ಕಳಿಗಾಗಿ ಹಾಗೂ ಹಿರಿಯನಾಗರಿಕರಿಗಾಗಿ ಟಿಕೇಟ ದರದಲ್ಲಿ 10% ರಿಯಾಯಿತಿ ನೀಡಲಾಗುವುದು.

ಟಿಕೇಟ ಒಂದು ಗಂಟೆ ಮುಂಚಿತ ಕೊಡಲಾಗುವುದು.

★ ಇಂದೇ ಪರಿವಾರದೊಂದಿಗೆ ಬಂದು ನೋಡಿ, ಆನಂದಿಸಿರಿ ★

ಪ್ರಶ್ನೆ 1. ಸರ್ಕಸ್ ಎಲ್ಲಿ ಆಗಮಿಸಿದೆ?

ಉತ್ತರ : ..........................................................................................................

..........................................................................................................

ಪ್ರಶ್ನೆ 2. ದಿನಾಲು ಎಷ್ಟು ? ಆಟಗಳಿವೆ ?

ಉತ್ತರ : ..........................................................................................................

..........................................................................................................

ಪ್ರಶ್ನೆ 3. ಚಿಕ್ಕ ಮಕ್ಕಳಿಗಾಗಿ ಹಾಗೂ ಹಿರಿಯ ನಾಗರಿಕಾಗಿ ಯಾವ ರಿಯಾಯಿತಿ ಇದೆ ?

ಉತ್ತರ : ..........................................................................................................

..........................................................................................................

ಪ್ರಶ್ನೆ 4. ಸರ್ಕಸ್ ಹೆಸರು ಏನು?

ಉತ್ತರ : ..........................................................................................................


..........................................................................................................

MT6HZC

# 5. ಅಜ್ಜಿ ಹೇಳಿದ ಕಥೆ

ಸಂಧ್ಯಾ ಪೈ

**ಲೇಖಕರ ಪರಿಚಯ:** ಸಂಧ್ಯಾ ಪೈಯವರು ಮಕ್ಕಳಿಗಾಗಿ ಅನೇಕ ಕಥೆಗಳನ್ನು ಬರೆದಿದ್ದಾರೆ. ತುಷಾರ, ತರಂಗ, ತುಂತುರ ಮುಖ್ಯ ಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಅನೇಕ ಮಾಸಿಕಗಳಲ್ಲಿ ಆಗಾಗ ಲೇಖನಗಳನ್ನು ಬರೆಯುತ್ತಿರುತ್ತಾರೆ.



ನನ್ನ ಬಂಗಾರೂ,

ಒಂದಾನೊಂದು ಊರಿನಲ್ಲಿ ಒಬ್ಬ ರಾಜ ಇದ್ದ. ಒಂದು ರಾತ್ರಿ ಅವನ ಅರಮನೆಯಲ್ಲಿ ಕಳ್ಳತನವಾಯಿತು. ಯಾರೋ ಬಲು ಚಾಣಾಕ್ಷತನದಿಂದ ಮನೆಯ ಭಂಡಾರದ ಒಳಗಿನ ಗೋಡೆಗೆ ತೂತು ಕೊರೆದು ಅಮೂಲ್ಯ ವಸ್ತುಗಳನ್ನು ಕದ್ದಿದ್ದರು ಕಾಳ್ಯಾ ಮತ್ತು ಅವನ ಗುಂಪಿನವರೇ ಈ ಕಳ್ಳತನ ಮಾಡಿರಬಹುದೆಂದು ಶಂಕಿಸಲಾಯಿತು ರಾಜನ ಕೊತ್ವಾಲ ಮೂರು ದಿನದೊಳಗೆ ಕಳ್ಳರನ್ನು ಹಿಡಿದು ತಂದು ರಾಜನ ಮುಂದೆ ನಿಲ್ಲಿಸಿದ. ರಾಜ ಅವರನ್ನ ವಿಚಾರಣೆಗೆ ಒಳಪಡಿಸಿದ್ದು ಹೀಗಂತೆ ''ನೀವು ನನ್ನ ಅರಮನೆಯಲ್ಲಿ ಕಳ್ಳತನ ಮಾಡಿದ್ದು ಹೌದು ತಾನೆ?''

''ಹೌದು ಸ್ವಾಮಿ. ನಾವು ಕಳ್ಳತನ ಮಾಡಿದ್ದು ನಿಜ'' ಎಂದ ಕಳ್ಳ. ರಾಜ, ''ಅದು ತಪ್ಪು ಅಂತ ಒಪ್ಪಿಕೊಳ್ಳುತ್ತೀರೋ?'' ''ಇಲ್ಲ ಸ್ವಾಮೀ ತಪ್ಪು ನಮ್ಮದಲ್ಲ!'' ರಾಜನ ಹುಬ್ಬು ಮೇಲೇರಿತು. ''ಹಾಂ! ಕಳ್ಳತನ ಮಾಡಿದ್ದು ಹೌದು. ಆದರೆ, ಅದು ತಪ್ಪಲ್ಲ ಅದು ಹೇಗೆ?'' ಎಂದು ಪ್ರಶ್ನಿಸಿದ. ಕಳ್ಳನೆಂದ, ''ಪ್ರಭೋ, ಭಂಡಾರದ ಗೋಡೆಯಲ್ಲಿ ಬಲವೇ ಇರಲಿಲ್ಲ. ಗೋಡೆ ಕಟ್ಟಿದವ ತನ್ನ ಕೆಲಸವನ್ನು ಸಮರ್ಪಕವಾಗಿ ಮಾಡಲಿಲ್ಲ. ಕಲ್ಲುಗಳ ಮಧ್ಯೆ ಸನಿಕೆ ತೂರಿಸಿದ್ದೇ ಸೈ ಗೋಡೆ ಬಿರುಕು ಬಿಟ್ಟಿತು. ಆದುದರಿಂದ ತಪ್ಪು ಉಪ್ಪಾರನದ್ದು, ನನ್ನದಲ್ಲ ಎಂದುತ್ತರಿಸಿದ.

ಸರಿ ಎನಿಸಿತು ರಾಜನಿಗೆ. ಉಪ್ಪಾರ ಭೀಮಣ್ಣನನ್ನು ಹಿಡಿದು ತರಿಸಿದ. ವಿಚಾರಣೆ ಶುರುವಾಯಿತು. ''ಅರಮನೆಯ ಭಂಡಾರದ ಗೋಡೆ ಕಟ್ಟಿದ್ದು ನೀನು ಹೌದೋ?'' ''ಹೌದು ಸ್ವಾಮಿ ನಾನೇ'' ''ನೀನು ಕೆಲಸ ಸರಿಯಾಗಿ ಮಾಡದೇ ಇದ್ದದ್ದು ತಪ್ಪು ಒಪ್ಪುತ್ತೀಯೋ?'' ''ಇಲ್ಲ ಮಹಾಸ್ವಾಮೀ. ತಪ್ಪು ನನ್ನದಲ್ಲ.ಕಲ್ಲು ಕಟ್ಟಲು ಬೇಕಾದ ಸುಣ್ಣ ಮತ್ತು ಬೆಲ್ಲದ ಮಿಶ್ರಣಕ್ಕೆ ಒಬ್ಬ ಕೆಲಸದವನನ್ನು ಉಪಯೋಗಿಸಲಾಗಿತ್ತು ಅವನ ಹೆಸರು ರಾಮಣ್ಣ ಅವನು ಮಿಶ್ರಣ ಸರಿಯಾಗಿ ಮಾಡದ್ದರಿಂದ ಗೋಡೆ ಬಲಹೀನವಾಯಿತು. ತಪ್ಪು ಆ ಕೆಲಸಗಾರನದು, ನನ್ನದಲ್ಲ ಎಂದುತ್ತರಿಸಿದ ಭೀಮಣ್ಣ.

ಇದೂ ಸರಿ ಎನಿಸಿತು ರಾಜನಿಗೆ. ಸುರ್ಕಿ ತಯಾರಿಸಿದ ಕೆಲಸಗಾರ ರಾಮಣ್ಣನನ್ನು ಕರೆದು

ತರಿಸಲಾಯಿತು. ರಾಜ, ಅರಮನೆಯ ಬೊಕ್ಕಸದ ಗೋಡೆ ಕಟ್ಟಲು ಉಪಯೋಗಿಸಿದ ಸುಣ್ಣ ಬೆಲ್ಲದ ಮಿಶ್ರಣ ತಯಾರಿಸಿದ್ದು ನೀನೆಯೋ? ಎಂದು ಪ್ರಶ್ನಿಸಿದ. ಅವನು, ''ಹೌದು ಮಹಾಸ್ವಾಮೀ ನಾನೇ'' ಎಂದುತ್ತರಿಸಿದ.

''ನೀನು ನಿನ್ನ ಕೆಲಸ ಸರಿಯಾಗಿ ಮಾಡಲಿಲ್ಲ ಅನ್ನುವುದು ಅಪರಾಧ ಎಂದು ಒಪ್ಪಿಕೊಳ್ಳುವಿಯೋ?'' ''ಇಲ್ಲ ಸ್ವಾಮೀ ತಪ್ಪು ನನ್ನದಲ್ಲ'' ಅಂದ ಮತ್ತೆ. ''ಹಾಂ, ಸುಣ್ಣಬೆಲ್ಲದ ಸುರ್ಕಿ ತಯಾರಿಸಿದ್ದು ನೀನು, ಸರಿಯಾಗಿ ಮನಸ್ಸಿಡದೇ ಕಲಸಿದ್ದೂ ಹೌದು. ಆದರೆ ತಪ್ಪು ಮಾತ್ರ ನನ್ನದಲ್ಲ ಅಂತಾ ಇದೀಯಲ್ಲ. ಅದು ಹೇಗೆ?'' ಅಂದ ರಾಜ. ''ಮಹಾಪ್ರಭೋ, ನಾನು ಸರಿಯಾಗಿ ಕೆಲಸ ಮಾಡ್ತಾ ಇದ್ದೆ. ಆ ಹೊತ್ತಿಗೆ ಸರಿಯಾಗಿ ಭಾರೀ ಚೆಂದದ ಹುಡುಗಿಯೊಬ್ಬಳು ಅತ್ತ ಬಂದಳು. ನನ್ನ ಮನಸ್ಸು ಚಂಚಲವಾಯಿತು.ಕೆಲಸ ಸರಿಯಾಗಲಿಲ್ಲ. ಆದುದರಿಂದ ತಪ್ಪು ಹುಡುಗಿಯದ್ದು'' ಎಂದುತ್ತರಿಸಿದ ಅವನು!

ಹಾಂ! ಇದೇ ಸರಿ ಅನ್ನಿಸಿತು ರಾಜನಿಗೆ. ''ಹುಡುಗಿಯನ್ನ ಕರೆತನ್ನಿ'' ಅಂತ ಹುಕುಂ ಮಾಡಿದ. ಹುಡುಗಿ ಬಂದಳು. ಅವಳು ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಾ ಬರ್ತಾ ಇದ್ದರೆ ಇಡೀ ಸಭೆ ಬೆರಗಿನಿಂದ ನೋಡ್ತಾ ಇತ್ತು. ಅಂಥ ಅದ್ಭುತ ಸೌಂದರ್ಯವತಿಯಾಗಿದ್ದಳು ಅವಳು. ಸ್ವತಃ ರಾಜನೇ ಮೃದುವಾದ.

ರಾಜ ವಿಚಾರಣೆ ಮಾಡಲು ಹುಡುಗಿಯನ್ನು ಕರೆಸಿದ.

ಅವಳನ್ನು ಕುರಿತು, ''ನೀನು ಕಣ್ಣಿಗೆ ಬಿದ್ದದ್ದರಿಂದ ಮನಸ್ಸು ಹಿಡಿತ ತಪ್ಪಿತು. ಹಿಡಿತ ತಪ್ಪಿದ್ದರಿಂದ ಗಾರೆ ಸರಿಯಾಗಿ ಕಲಸಲಾಗಲಿಲ್ಲ. ಕಲಸದೇ ಇದ್ದುದರಿಂದ ಗೋಡೆ ಬಲಹೀನವಾಯ್ತು ಅಂತಾನೆ ಈ ಕೆಲಸಗಾರ. ಆದುದರಿಂದ ತಪ್ಪು ನಿನ್ನದು ಅಂತಾನೆ. ನೀನು ಒಪ್ಪುತ್ತಿಯಾ ಹುಡುಗಿ?'' ಅಂದ. ಹುಡುಗಿ ವಯ್ಯಾರದಿಂದ ಬಳುಕುತ್ತಾ, ಕಿರುಗಣ್ಣಿನಿಂದ ಸಭೆಯನ್ನು ನೋಡ್ತಾ, ರಾಜನ ಕಡೆ ಒಂದು ಹೆಜ್ಜೆ ಮುಂದಿಡ್ತಾ, ಬರಲೊಲ್ಲೆ ಅನ್ತಾ ಇದ್ದ ಕಣ್ಣೀರನ್ನ ಸುಮ್ಮಸುಮ್ಮನೆ ಬರಸ್ತಾ, ಮಹಾಪ್ರಭೋ, ನಾನು ಹಾಗೆಲ್ಲಾ ಬರುವವಳೇ ಅಲ್ಲ. ನನ್ನ ಬಂಗಾರದ ಒಡವೆಗಳನ್ನ ತರೋಕೆ ಅಂತ ಹೋಗ್ತಾ ಇದ್ದೆ. ಚಿನಿವಾರ ಇವತ್ತು ಬಾ, ನಾಳೆ ಬಾ ಅಂತ ಸತಾಯಿಸ್ತಾ ಇದ್ದ. ಹತ್ತು ಸಲ ಅವನ ಮನೆಗೆ ಅಲೆದಾಡ್ತಾ ಇದ್ದೆ. ಹಾಗಾಗಿ ಈ ದಾರಿಯಲ್ಲಿ ಬಂದೆ. ನನ್ನ ಪ್ರಕಾರ ಚಿನಿವಾರನದ್ದೆ ತಪ್ಪು ನನ್ನದಲ್ಲ! ಅಂದಳು.

''ಹೌದಲ್ಲ! ಪಾಪ ಹುಡುಗಿ ಇವಳದ್ದೇನು ತಪ್ಪು. ಎಲ್ಲಿ ಚಿನಿವಾರನ್ನು ಕರಕೊಂಡು ಬನ್ನಿ'' ಅಂತ ಗುಡುಗಿದ ರಾಜ. ಚಿನಿವಾರ ಪಾಪ ತಲೆಬುಡ ತಿಳಿಯದೆ ಗಡಗಡಾಂತ ನಡಗ್ತಾನೇ ಅರಮನೆಗೆ ಬಂದ. ಇಲ್ಲಿಯವರೆಗೂ ಅವನು ಅರಮನೆ ನೋಡಿದವನೇ ಅಲ್ಲ. ಮತ್ತೆ ರಾಜನ ಅಪಾದನೆ ಕೇಳಿ ಅವನು ಕಂಗಾಲಾಗಿ ಹೋದ. ಎಲ್ಲಿಯ ಅರಮನೆಯ ಭಂಡಾರದ ಕಳ್ಳತನ, ಎಲ್ಲಿಯ ಚಿನಿವಾರ. ಯಾವುದೂ ಸಂಬಂಧವೇ ಇರಲಿಲ್ಲವಲ್ಲ! ಚಿನಿವಾರ ಒಳಗೊಳಗೇ ಹೆದರಿದರೂ ಈ ಕುತ್ತಿನಿಂದ ಪಾರೋಗೋದು ಹೇಗೆ ಅಂತ ಯೋಚಿಸ್ತಾನೇ ಇದ್ದ. ಇದ್ದಕ್ಕಿದ್ದ ಹಾಗೆ ಅವನು ಬಿಕ್ಕಿಬಿಕ್ಕಿ ಅಳೋಕೆ ಶುರುಮಾಡಿದ . ಶಿಕ್ಷೆ ಏನೂಂತ ಕೇಳಿ, ಹೆದರಿ ಅಳ್ತಾ ಇದಾನೆ ಅಂತ ಅಂದುಕೊಂಡರು ಎಲ್ಲರೂ. ಆದ್ರೆ ಅವನು ಅತ್ತದ್ದೇ ಬೇರೆ ಕಾರಣಕ್ಕೆ.

ಕಾರಣ ಕೇಳೋಣ ಏನಂತ. ಅವನೆಂದ, ''ಮಹಾಪ್ರಭೋ, ದೊಡ್ಡ ಬಂಡೆ ಹತ್ರ ನಿಲ್ಲಿಸಿ, ಪಟ್ಟದ ಆನೆಯಿಂದ ತಿವಿದು ಸಾಯಿಸಿ ಅಂದ್ರೆ. ನನಗೂ ಇದೊಂದು ಮಹಾಭಾಗ್ಯ! ಆದ್ರೆ ನನ್ನನ್ನು ನೋಡಿ, ಬರೀ ಮೂಳೆ ಮತ್ತು ಚರ್ಮವಾಗಿದೀನಿ. ಪಟ್ಟದ ಆನೆಯೇ ಅಷ್ಟು ಚೆಂದ, ಇನ್ನದರ ದಂತಗಳೋ ಲಕ್ಷಾಂತರ ರೂಪಾಯಿ ಬೆಲೆಬಾಳುವಂಥವು. ಅವು ನನ್ನ ದೇಹದೊಳಗೆ ಹೋದಾಗ ಬಂಡೆಗೆ ಅಪ್ಪಳಿಸಿದಂತಾಗಿ, ಮುರಿದು ಹೋಗುವುದಂತೂ ಖಂಡಿತ. ಅದಕ್ಕೆ ದುಃಖಿಸ್ತಾ ಇದೀನಿ ಅಂದ ಬುದ್ಧಿವಂತ, ಕಿಲಾಡಿ ಚಿನಿವಾರ.

''ಅರೇ! ನನ್ನ ತಲೆಗೆ ಇದ್ಯಾಕೆ ಹೊಳೆಯಲಿಲ್ಲ!'' ಅಂದು ಮನಸ್ಸಿನಲ್ಲೇ ಅಲವತ್ತುಕೊಂಡ ರಾಜ. ''ಹಾಗಾದ್ರೆ ಯಾರಿಗಪ್ಪಾ ಶಿಕ್ಷೆಯಾಗಬೇಕು?'' ಅಂದ. ಕೂಡಲೇ ಚಿನಿವಾರ. ''ಮಹಾಪ್ರಭೋ, ಯಾರಿಗೆ ಶಿಕ್ಷೆಯಾದ್ರ ಏನು? ಅಂತೂ ಯಾವುದಕ್ಕಾದ್ರೂ ಶಿಕ್ಷೆ ಆದ್ರೆ ಸೈ ತಾನೇ? ನಾನು ಬರೋ ದಾರಿಯಲ್ಲಿ ಒಂದು ಕೊಬ್ಬಿದ ಕೋಣ ಕಂಡೆ. ಮಸ್ತಾಗಿತ್ತು. ಅದಕ್ಕೆ ಶಿಕ್ಷೆ ಕೊಡೋಣ. ನಿಮ್ಮ ಆನೆಯ ದಂತಗಳೂ ಸುರಕ್ಷಿತವಾಗಿರುತ್ತವೆ. ತಮ್ಮ ನ್ಯಾಯದಾನದ ಬಗೆಯೂ ಜಗತ್ತು ಮೆಚ್ಚುತ್ತದೆ. ಏನಂತೀರಾ?'' ಅಂದ. ಸಭೆ ಕರತಾಡನ ಮಾಡಿತು. ಸರಿ ಸರಿ ಅಂತ ಕೂಗೋದೂ ಕೇಳಿಸಿತು.


ಬಂಗಾರು ಹೇಗಿದೆ ಕಥೆ. ಎಂದು ಅಜ್ಜಿ ಕೇಳಿದಳು. ಕಥೆ ಬಹಳ ವಿನೋದಮಯವಾಗಿದೆ. ಇಂತಹದೇ ಇನ್ನೊಂದು ಕಥೆಯನ್ನು ಹೇಳು ಎಂದು ಮೊಮ್ಮಗ ಒತ್ತಾಯಿಸಿದ. ನಾಳೆ ಹೇಳುತ್ತೇನೆ ಎಂದು ಅಜ್ಜಿ ಸಮಾಧಾನಪಡಿಸಿದಳು.

## ಶಬ್ದಗಳ ಅರ್ಥ

ಉಪ್ಪಾರ – ಗೌಂಡಿ; ಬಲಹೀನ – ಶಕ್ತಿ ಕುಂದಿದ, ಬೆರಗು – ಆಶ್ಚರ್ಯ, ಚಿನಿವಾರ –ಅಕ್ಕಸಾಲಿಗ, ಸುರ್ಕಿ–ಸುಣ್ಣಬೆಲ್ಲದ ಮಿಶ್ರಣ

## ಅಭ್ಯಾಸ

**ಕೃತಿ– 1 ಕೆಳಗಿನ ಜಾಲಾಕೃತಿಯನ್ನು ಬಿಡಿಸಿರಿ.**




**ಕೃತಿ – 2 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ರಾಜಸಭೆಯಲ್ಲಿ ಯಾವ ವಿಷಯದ ಕುರಿತು ವಿಚಾರಣೆ ನಡೆದಿತ್ತು?

ಉತ್ತರ : ................................................................................................................

................................................................................................................................

2) ಉಪ್ಪಾರ ನೀಡಿದ ವಿವರಣೆ ಏನು?

ಉತ್ತರ : ................................................................................................................

................................................................................................................................

3) ಚಿನಿವಾರ ಮಾಡಿದ ತಪ್ಪೇನು?

ಉತ್ತರ : ................................................................................................................

................................................................................................................................

4) ಕೊನೆಗೆ ಯಾರನ್ನು ತಪ್ಪುಗಾರನನ್ನಾಗಿ ಮಾಡಲಾಯಿತು?

ಉತ್ತರ : ................................................................................................................

................................................................................................................................

**ಕೃತಿ – 3 ನಿಮಗೆ ಗೊತ್ತಿರುವ ಒಂದು ವಿನೋದ ಪ್ರಸಂಗವನ್ನು ಬರೆಯಿರಿ.**

ಉತ್ತರ : ..................................................................................................................

..........................................................................................................................

**ಕೃತಿ – 4 ನಿನ್ನ ಸ್ವಅಭಿಪ್ರಾಯ ಬರೆಯಿರಿ.**

ಉತ್ತರ :

ನಿಜವಾಗಿಯೂ ಕೋಣ ಅಪರಾಧಿಯೇ?

**ಕೃತಿ – 5 ಕೆಳಗಿನ ಚೌಕಗಳಲ್ಲಿ ವಿಷಯ ತುಂಬಿರಿ.**

ಕಟ್ಟಡ ಕಟ್ಟಲು ಬೇಕಾಗುವ ಸಾಮಗ್ರಿಗಳು

**ಕೃತಿ-6 ನೀವು ನದಿದಡದಲ್ಲಿ ನಿಂತಿದ್ದೀರಿ ಎಂದು ಕಲ್ಪಿಸಿಕೊಂಡು ಅಲ್ಲಿ ಕಾಣುವ ಸನ್ನಿವೇಶವನ್ನು ಬರೆಯಿರಿ.**

ಉತ್ತರ : ..................................................................................................................

..........................................................................................................................

..........................................................................................................................

**ಕೃತಿ – 7 ಮರಳು/ ಪ್ಲಾಸ್ಟರ ಆಫ್ ಪ್ಯಾರೀಷ/ ಇನ್ನ್ಯಾವುದೊ ವಸ್ತುವನ್ನು ಬಳಸಿ ಮನೆ ಇತ್ಯಾದಿಗಳ ಮಾದರಿ ತಯಾರಿಸಿರಿ.**






# 6. ಪರನಾರಿ - ಸಹೋದರ

## ದೃಶ್ಯ - 1

ಕವಿತಾ ಕೃಷ್ಣ

**ಲೇಖಕರ ಪರಿಚಯ :** ಕವಿತಾ ಕೃಷ್ಣ ಇವರು ಕನ್ನಡದ ಉತ್ತಮ ಬರಹಗಾರರು. ಮಕ್ಕಳ ಮನಮುಟ್ಟುವಂತೆ ಅತ್ಯಂತ ಸರಳವಾದ ಶೈಲಿಯಲ್ಲಿ ಬರೆಯುವಲ್ಲಿ ಸಿದ್ಧಹಸ್ತರು. ಇವರು ಅನೇಕ ಕವಿತೆ, ಲೇಖನಗಳನ್ನು ಬರೆದಿದ್ದಾರೆ.



*(ಶಿವಾಜಿ ಮಹಾರಾಜರ ಆಸ್ಥಾನ : ಮಂತ್ರಿ, ಸಾಮಂತರಿಂದ ಸಭೆ ತುಂಬಿದೆ, ಶಿವಾಜಿ ಮಹಾರಾಜರು ಸಂಗೀತ ಕೇಳುವುದರಲ್ಲಿ ತಲ್ಲೀನನಾಗಿದ್ದಾರೆ.)*

**ಸೇವಕ** : (ಪ್ರವೇಶಿಸಿ ತಲೆಬಾಗುತ್ತಾ ಹೇಳುವನು) ರಾಜಾಧಿರಾಜ, ರಿಪುಕುಲಸಿಂಹ, ಶ್ರೀ ಶಿವಾಜಿ ಮಹಾರಾಜರಿಗೆ, ಜಯವಾಗಲಿ.

**ಶಿವಾಜಿಮಹಾ** : ಏನದು ಸಮಾಚಾರ?

**ಸೇವಕ** : ತಮಗೆ ಸಿಹಿ ಸುದ್ದಿಯೊಂದನ್ನು ಅರಿಕೆ ಮಾಡಲು ಸಂತೋಷಿಸುವೆನು ಪ್ರಭು.

**ಶಿವಾಜಿ** : ಸಿಹಿ ಸುದ್ದಿಯೇ? ಹೇಳು ಸೇವಕ.

**ಸೇವಕ** : ಕಲ್ಯಾಣದ ಹೋರಾಟದಲ್ಲಿ ಜಯ ನಮ್ಮ ದಾಗಿದೆ.

**ಮಂತ್ರಿ** : (ಮೇಲೆದ್ದು ನಿಂತು) ಏನೂ.... ಯುದ್ಧದಲ್ಲಿ ನಮ್ಮವರು ಗೆದ್ದರೆ ?

**ಸೇವಕ** : ಹೌದು.

ಮಂತ್ರಿ : ಪ್ರಭು, ಕಲ್ಯಾಣದಲ್ಲಿ ದೊಡ್ಡ ಹೋರಾಟವೇ ನಡೆದಿತ್ತು. ಅಲ್ಲಿನ ಅಧಿಕಾರಿ ಮಹಮದ್ ಸೊಕ್ಕಿನಿಂದ ಮೆರೆಯುತ್ತಿದ್ದ. ಜನರನ್ನು ಹಿಂಸಿಸುತ್ತಿದ್ದ.

ಶಿವಾಜಿ : ಹಾಗಾದರೆ ಜಯಲಕ್ಷ್ಮಿ ಮತ್ತೊಮ್ಮೆ ಒಲಿದಿದ್ದಾಳೆ.

ಮಂತ್ರಿ : ಅಹುದು ಪ್ರಭು. ಅಕೆ ಮತ್ತೊಮ್ಮೆ ನಿಮ್ಮ ಕೊರಳಿಗೆ ವಿಜಯದ ಮಾಲೆ ಹಾಕಿದ್ದಾಳೆ.

ಶಿವಾಜಿ : ಸೇವಕ, ಸಿಹಿ ಸುದ್ಧಿ ತಂದು ಮುಟ್ಟಿಸಿದ್ದಕ್ಕೆ ಇದು ಮೆಚ್ಚಿನ ಬಹುಮಾನ, (ಒಡವೆಯೊಂದನ್ನು ನೀಡುವರು)

ಸೇವಕ : ಧನ್ಯನಾದೆ ಪ್ರಭು ( ತಲೆ ಬಾಗುವನು)

ಮಂತ್ರಿ : ಸೇವಕಾ, ನಮ್ಮ ಸೇನಾಧಿಪತಿಗಳು ಬಂದರೆ?

ಸೇವಕ : ಬಂದಿದ್ದಾರೆ ಅವರೂ ಕೂಡ ಮಹಾರಾಜರ ದರ್ಶನ ಬಯಸಿ, ಕಾದು ನಿಂತಿದ್ದಾರೆ.

ಶಿವಾಜಿ : ಮಂತ್ರಿಗಳೇ...

ಮಂತ್ರಿ : ಅಪ್ಪಣೆಯಾಗಬೇಕು ಪ್ರಭು.

ಶಿವಾಜಿ : ಯುದ್ಧದಲ್ಲಿ ವಿಜಯಶಾಲಿಗಳಾಗಿ ಬಂದಿರುವ ಸೇನಾಪತಿ ಆಬಾಜಿ ಸೋನದೇವರನ್ನು ವಿರೋಚಿತವಾಗಿ ಸ್ವಾಗತಿಸಿ.

ಮಂತ್ರಿ : ತಮ್ಮ ಅಪ್ಪಣೆಯಂತಾಗಲಿ ದೊರೆ. ಆಬಾಜಿ ಸೋನದೇವರನ್ನು ನಾನೇ ಸ್ವಾಗತಿಸುತ್ತೇನೆ. (ನಿರ್ಗಮನ) (ಮಂಗಳವಾದ್ಯದೊಂದಿಗೆ, ಮಂತ್ರಿ, ಸೇನಾಪತಿಯನ್ನು ಸ್ವಾಗತಿಸುವನು)

ಆಬಾ. ದೇವಾ : ಅಂಬಾ ಭವಾನಿಯ ಪುತ್ರರಾದ ಶಿವಾಜಿ ಮಹಾರಾಜರ ಅಡಿದಾವರೆಗೆ ನೆಮಿಸುವೆನು.

ಶಿವಾಜಿ : ಬನ್ನಿ ಸೇನಾಧಿಪತಿಗಳೆ, ( ಹಾರವನ್ನು ಹಾಕಿ) ಯುದ್ಧದಲ್ಲಿ ವಿಜಯಶಾಲಿಗಳಾಗಿ ಬರುತ್ತಿರುವ ನಿಮಗೆ ನಾನು ಸಹ ಸ್ವಾಗತ ಕೋರುವೆ.

ಆಬಾ.ದೇವ : (ಕೈ ಮುಗಿದು) ದೊರೆಯ ಉಪಚಾರಕ್ಕೆ ಶರಣು ಮಹಾರಾಜ್.

ಶಿವಾಜಿ : ಅಂದ ಹಾಗೆ ನಮ್ಮ ಸೇನೆಯೆಲ್ಲವೂ ಕ್ಷೇಮವಷ್ಟೆ?

ಆಬಾ.ದೇವ : ತಾಯಿ ತುಳಜಾ ಭವಾನಿಯ ಕೃಪೆಯಿಂದ ಎಲ್ಲರೂ ಕ್ಷೇಮ ಮಹಾರಾಜ್...

ಶಿವಾಜಿ : ಹೇಳಿ ಸೇನಾಧಿಪತಿಗಳೆ. ವಿಜಯದ ವಿವರ ಕೇಳಲು ನಾನು ಸಹ ಕುತೂಹಲ ತಾಳಿರುವೆ.

ಆಬಾ. ದೇವ : ನಾವು ಇಲ್ಲಿಂದ ಸೇನೆಯೊಡನೆ ಕಲ್ಯಾಣಕ್ಕೆ ಹೋದೆವು. ದುರಾಚಾರಿ ಮಹಮದ್ ಎದುರಾದ, ಕದನಕ್ಕೆ ಸಿದ್ಧನಾದ. ನಮ್ಮ ವೀರರು ಕುಣಿದಾಡಿದರು. ಹೋರಾಟದಲ್ಲಿ ಕಲಿಗಳಂತೆ ಕಾದಾಡಿದರು. ವೈರಿ ಸೈನ್ಯ ನುಚ್ಚುನೂರಾಯಿತು.

ಶಿವಾಜಿ : ಭಲೆ-ಭಲೆ- ಮುಂದೆ.

ಆಬಾ. ದೇವ : ಸಮರ ಸಾಹಸದಲ್ಲಿ ವಿಜಯ ನಮ್ಮದಾಯಿತು. ಹಿಂದೂ ಪತಾಕೆ ಹಾರಾಡಿತು. ಜಯಕಾರ ಮುಗಿಲು ಮುಟ್ಟಿತು.

ಶಿವಾಜಿ : ಮತ್ತೆ ಅಲ್ಲಿನ ಪ್ರಾಂತ್ಯಾಧಿಕಾರಿ ಏನಾದನು?

ಆಬಾ.ದೇವ : ಮಹಮದ್ ತಾನೆ? ಪ್ರಭು, ಆತ ರಣರಂಗದಿಂದ ಕದ್ದು ಕಳ್ಳ ನಾಯಿಯಂತೆ ಪರಾರಿಯಾದ.

ಶಿವಾಜಿ : ಪ್ರಾಂತ್ಯಾಧಿಕಾರಿ ಮಹಮದ್ ಪ್ರಾಣ ಭಯದಿಂದ ಪರಾರಿಯಾದನೆ ?

ಆಬಾ. ದೇವ : ಪ್ರಭು, ಕಾಲರುದ್ರನ ಕಂಡ ನರಕುರಿಯಂತಾದನು. ಅವನ ಸೊಕ್ಕು ಸೋರಿಹೋಯಿತು ದಣಿ.

ಶಿವಾಜಿ : ಮುಂದೇನು?

ಆಬಾ.ದೇವಾ : ಅವನ ಅರಮನೆ ಭಂಡಾರವನ್ನು ದೋಚಿ ತಂದಿದ್ದೇವೆ.

ಮಂತ್ರಿ : ಅಂತೂ ಕಲ್ಯಾಣ ನಮ್ಮ ವಶವಾಯಿತು. ಪ್ರಭು, ವಿಜಯೋತ್ಸವ ಆಚರಿಸಲು ಅನುಮತಿ ನೀಡಬೇಕು.

ಶಿವಾಜಿ : ಆಗಲಿ, ನಗರದಲ್ಲೆಲ್ಲಾ ವಿಜಯೋತ್ಸವ ಆಚರಿಸಲ್ಪಡಲಿ. ನಮ್ಮ ಸೈನಿಕರಿಗೆ ಉಚಿತವಾದ ಸನ್ಮಾನ ಕಾರ್ಯವೂ ಜರುಗಲಿ.

**ಮಂತ್ರಿ** : ಅಪ್ಪಣೆ ಪ್ರಭು. (ಶಿವಾಜಿ ಮಹಾರಾಜರಿಗೆ ಜಯವಾಗಲಿ ಎಂಬ ಕೂಗು ಕೇಳಿ ಬರುವುದು)

**ಆಬಾ. ದೇವ** : ಪ್ರಭುಗಳಲ್ಲಿ ಮತ್ತೊಂದು ಬಿನ್ನಹ.

**ಶಿವಾಜಿ** : ಏನದು ಸೇನಾಧಿಪತಿಗಳೆ?

**ಆಬಾ. ದೇವ** : ಕಲ್ಯಾಣದಿಂದ ನಗ, ನಾಣ್ಯ ಮುತ್ತು-ರತ್ನಗಳನ್ನು ತಂದಿದ್ದೇವೆ.

**ಶಿವಾಜಿ** : ಸಂತೋಷ

**ಆಬಾ. ದೇವ** : ಹಾಗೆಯೇ ಸಂಗಡ ಅಮೂಲ್ಯ ರತ್ನವೊಂದನ್ನು ತಂದಿದ್ದೇನೆ.

**ಶಿವಾಜಿ** : ಅಮೂಲ್ಯವಾದ ರತ್ನವೆ?

**ಆಬಾ. ದೇವ** : ಹೌದು ದೊರೆ. ವಿಜಯದ ಕುರುಹಾಗಿ ಅರ್ಪಿಸಲು ತಂದಿದ್ದೇನೆ.

**ಶಿವಾಜಿ** : ಆಬಾಜಿ ಸೋನದೇವಾ, ರತ್ನ ಅಂತಹ ಅಮೂಲ್ಯವಾದುದೇ?

**ಆಬಾ. ದೇವ** : ಹೌದು, ನಿಜಕ್ಕೂ ಅದು ಅಪೂರ್ವವಾದ ರತ್ನ

**ಶಿವಾಜಿ** : ನೋಡೋಣ ತರಸಿ.

**ಆಬಾ.ದೇವ** : ನಾನೇ ತರುತ್ತೇನೆ. (ತಲೆಯ ಮೇಲೆ ಮುಸುಕು ಹಾಕಿದ ಸುಂದರ ಹೆಣ್ಣನ್ನು ತಂದು ಮುಂದೆ ನಿಲ್ಲಿಸುವನು. ಮಹಾದೊರೆಗಳು ಈ ನಾರಿ ರತ್ನವನ್ನು ಸ್ವೀಕರಿಬೇಕು.

**ಬೀಬಿ** : (ಅಳು ಧ್ವನಿ) ಸಲಾಂ ಖಾವಂದ್.

**ಶಿವಾಜಿ** : (ತಕ್ಷಣ ನಿಂತು) ಯಾರೀಕೆ?

**ಆಬಾ.ದೇವ** : ಈಕೆ ಕಲ್ಯಾಣದ ಪ್ರಾಂತಾಧಿಕಾರಿಯ ಮಡದಿ.

**ಬೀಬಿ** : ಹಾಂ ಭಯ್ಯಾ.

**ಶಿವಾಜಿ** : ಆಬಾಜಿ ಸೋನದೇವಾ, ಈಕೆಯನ್ನು ಕರೆತಂದ ಕಾರಣ?

**ಆಬಾ. ದೇವ** : ಈ ಸುಂದರಿಯು ತಮ್ಮ ಸೇವೆ ಮಾಡಲೆಂದು. ತನ್ನ ರೂಪಿನಿಂದ ನಿಮ್ಮ ಮನ ಮೆಚ್ಚಿಸಲೆಂದು.

**ಶಿವಾಜಿ** : (ಜೋರಾಗಿ) ಸೋನದೇವಾ, ಎಂತಹ ಪ್ರಮಾದ ಮಾಡಿದಿರಿ. ಪತಿಯಿಂದ ಅಗಲಿದ ಅಬಲೆಯನ್ನು ಹಿಡಿದು ತರಲು ನಾಚಿಕೆಯಾಗಲಿಲ್ಲವೆ?

**ಆಬಾ.ದೇವ** : ಪ್ರಭೂ....

**ಶಿವಾಜಿ** : ಸಾಕು, ಸಾಕು ಈ ಸಿಂಹಾಸನದಲ್ಲಿ ಕುಳಿತಿರುವ ಶಿವಾಜಿ ಜಾರನೆಂದು ತಿಳಿದಿರಾ? ಪವಿತ್ರ ಹಿಂದುವಾಗಿ ಹುಟ್ಟಿ ಈ ಅನಾಚಾರವೆ? ಆಕೆ ಮುಸ್ಲಿಂ ಹೆಂಗಸು. ಹಾಗೆಂದು ಕುರುಡನಾದಿರಾ? ಈ ಸ್ತ್ರೀ ರತ್ನ ಯಾರು ಗೊತ್ತೆ? ಈಕೆ ಈ ಶಿವಾಜಿಯ ಸಹೋದರಿ. ಒಡ ಹುಟ್ಟಿದ ತಂಗಿ.

**ಬೀಬಿ** : ಅಣ್ಣಾ.....(ಬಿಕ್ಕಿ ಅಳುವಳು)

**ಶಿವಾಜಿ** : ಅಳಬೇಡ ತಂಗಿ. ಈತ ಮಾಡಿದ ತಪ್ಪಿಗೆ ನಾನು ಕ್ಷಮೆ ಕೇಳುವೆ. ಹಿಂದುಗಳು ಧರ್ಮಾಭಿಮಾನಿಗಳು. ಪರನಾರಿ ಸೋದರರು. ನೀನು ಅಂಜಬೇಡ, ಇದು ನಿನ್ನ ಅಣ್ಣನ ಮನೆ. ನಿನ್ನ ಪತಿಯ ಬಳಿಗೆ ಕಳುಹಿಸುವುದು ನನ್ನ ಧರ್ಮ.

**ಬೀಬಿ** : ಭಯ್ಯಾ ನಿಮಗೆ ಕೋಟಿ ಸಲಾಂಗಳು. ಅಲ್ಲಾ ನಿಮ್ಮನ್ನು ಚೆನ್ನಾಗಿರಿಸಲಿ.

**ಶಿವಾಜಿ** : ಸೋದರಿ ಹಿಂದೂ ಧರ್ಮ ಸಕಲರ ಲೇಸನ್ನು ಬಯಸುತ್ತದೆ. ಪರಸ್ತ್ರೀಯರನ್ನು ತಾಯಿಯೆಂದು ಗೌರವಿಸುತ್ತದೆ.ನಾನು, ಗುರು ದಾದಾಜಿ ಕೊಂಡದೇವರ ಮೇಲೆ ಆಣೆಯಿಟ್ಟು ಹೇಳುವೆ. ಇಲ್ಲಿ ನಿನಗೆ ಯಾವ ಕುಂದೂ ಉಂಟಾಗಲಾರದು.

**ಬೀಬಿ** : ಭಯ್ಯಾ, ನಿಮ್ಮ ಗುಣ ಇತರ ರಾಜರಿಗೆ ಬರಲೆಂದು ಕೋರುವೆನು.

**ಆಬಾ. ದೇವ** : ಪ್ರಭು, ನನ್ನ ಅವಿವೇಕವನ್ನು ಕ್ಷಮಿಸಿಬಿಡಿ.

**ಶಿವಾಜಿ** : ಕ್ಷಮಿಸಲು ನಾನಾರು ಸೋನೆದೇವಾ?


| | | |
|---|---|---|
| **ಬಾ.ದೇವ** | : | ತಾವು ದೊರೆಗಳು. ಹಿಂದೂ ರಾಜ್ಯದ ಸಾಮ್ರಾಟರು. |
| **ಶಿವಾಜಿ** | : | ಆದರೂ ಅಪಚಾರವಾಗಿರುವುದು ನನಗಲ್ಲ. ಈ ನನ್ನ ತಂಗಿಗೆ. ನೀವು ಕ್ಷಮೆ ಕೇಳಬೇಕಾದ್ದು ನನ್ನಲ್ಲಿ ಅಲ್ಲ. ಈ ತಂಗಿಯಲ್ಲಿ. |
| **ಆಬಾ.ದೇವ** | : | ದಿಟ ಪ್ರಭೂ, ಪರನಾರಿ ಸೋದರರೆನಿಸಿದ ಶಿವಾಜಿ ಮಹಾರಾಜರ ಸೇನಾಧಿಪತಿಯಾಗಿ ದಾರಿ ತಪ್ಪಿದವ ನಾನು. ಕೆಟ್ಟ ನೋಟದಿಂದ ನೋಡಿದವನು ನಾನು. ಅಪರಾಧ ನನ್ನದೇ ಆಗಿದೆ. ತಂಗಿಯಲ್ಲಿ ನಾನೇ ಕ್ಷಮೆ ಯಾಚಿಸುತ್ತೇನೆ. |
| **ಶಿವಾಜಿ** | : | ಈಗ ಮೆಚ್ಚಿದೆ. ಮೊದಲು ಕ್ಷಮೆಯನ್ನು ಕೋರಿರಿ. |
| **ಆಬಾ. ದೇವ** | : | (ಕೈ ಮುಗಿದು) ತಂಗಿ, ಅರಿಯದೆ ಮಾಡಿದ ತಪ್ಪಿಗೆ ಕ್ಷಮೆಯಿರಲಿ. ನಿನ್ನಿಂದ ಪಾಠ ಕಲಿತೆ, ಮತ್ತೆ ಮಾನವನಾದೆ. ಅಣ್ಣನನ್ನು ಕ್ಷಮಿಸಿದ್ದೇನೆಂದು ಹೇಳು. |
| **ಬೇಬಿ** | : | ಭಯ್ಯಾ...ಭಯ್ಯಾ. |
| **ಆಬಾ. ದೇವ** | : | ತಂಗಿ...ತಂಗಿ. ಕ್ಷಮಿಸಿಬಿಡು ನನ್ನವ್ವ |
| **ಬೀಬಿ** | : | ಯಾ ಅಲ್ಲಾ.... ತೋಬಾ.... ತೋಬಾ. |
| **ಆಬಾ.ದೇವ** | : | ಪ್ರಭು... |
| **ಶಿವಾಜಿ** | : | ಏನು ಬಾಜಿದೇವಾ? |
| **ಆಬಾ. ದೇವ** | : | ಈ ನನ್ನ ತಂಗಿಯನ್ನು ಪತಿಯೆಡೆಗೆ ಇಲ್ಲವೇ ತವರೂರಿಗೆ ನಾನೇ ಮುಟ್ಟಿಸಿ ಬರುವೆ. ಅವಕಾಶ ಕಲ್ಪಿಸಬೇಕು. |
| **ಶಿವಾಜಿ** | : | ಆಬಾಜಿ ಸೋನದೇವ ನಿಮ್ಮನ್ನು ಈಗ ಮೆಚ್ಚಿದೆ. ತಪ್ಪು ಮಾಡುವುದು ಸಹಜ, ಆದರೆ ತಪ್ಪನ್ನು ತಿದ್ದಿಕೊಳ್ಳುವುದೇ ಶ್ರೇಷ್ಠರ ಗುಣ. ಈಕೆಯ ಕಲ್ಯಾಣಕ್ಕೆ ಸ್ವಯಂ ಮುಂದಾದುದು ನಮಗೆ ಸಂತೋಷ ತಂದಿದೆ. |
| **ಆಬಾ. ದೇವ** | : | ತಂಗಿ, ನನ್ನೊಡನೆ ಬಾ ನಿನ್ನ ಊರಿಗೆ ಮುಟ್ಟಿಸಿ ಬರುವೆ. |
| **ಶಿವಾಜಿ** | : | ತಂಗಿ, ಈ ಅಣ್ಣನ ಮನೆಯ ಆತಿಥ್ಯ ಪಡೆದು ಹೋಗಬೇಕು ನೀನು ಹಿಂದೂ ನಾಡಿನಿಂದ ಹೋಗುವಾಗ ಅಳುತ್ತಾ ಹೋಗಬಾರದು. ನಗು ನಗುತ್ತಾ ಹೋಗಬೇಕು. ಮಂತ್ರಿಗಳೇ! |
| **ಮಂತ್ರಿ** | : | ಅಪ್ಪಣೆಯಾಗಲಿ ಪ್ರಭು |
| **ಶಿವಾಜಿ** | : | ಈ ತಂಗಿಯ ಸತ್ಕಾರಕ್ಕೆ ವ್ಯವಸ್ಥೆ ಮಾಡಿ. ಅರಮನೆಯ ಹೆಂಗಸರಲ್ಲಿಗೆ ಕರೆದೊಯ್ಯಿರಿ.ತಂಗಿ ಹೋಗಿ ಬಾ ನಿನಗೆ ಮಂಗಳವಾಗಲಿ, |
| **ಬೀಬಿ** | : | ಭಯ್ಯಾ, ನಿನ್ನ ಗುಣ ತುಂಬಾ ದೊಡ್ಡದು, ನಿನ್ನಂತಹ ಅಣ್ಣನನ್ನು ಪಡೆದ ನಾನು ಧನ್ಯಳು. ಹಿಂದೂ ದೇಶದ ವೀರ ದೊರೆ ಎಂದರೆ ನೀನೆ. ನೀನು ಪರನಾರಿ ಸೋದರನಾಗಿ ಬದುಕು. ಅಲ್ಲಾ ನಿನಗೆ ಒಳ್ಳೆಯದು ಮಾಡುವನು. |
| **ಶಿವಾಜಿ** | : | ಹೋಗಿ ಬಾ ತಂಗಿ. ನಿನ್ನ ಹಾದಿಗೆ ಮಂಗಳವಾಗಲಿ. (ಮಂತ್ರಿ ಸಂಗಡ ಬೀಬಿ ನಿರ್ಗಮಿಸುವಳು.) |
| **ಆಬಾ. ದೇವ** | : | ಪ್ರಭು ನಿಮ್ಮಿಂದ ಉತ್ತಮ ಪಾಠ ಕಲಿತೆ. ರಾಜ ಪ್ರತ್ಯಕ್ಷ ದೈವ ಎಂಬ ಮಾತನ್ನು ಸಾರ್ಥಕಗೊಳಿಸಿದಿರಿ. ನಾನು ಆಕೆಯನ್ನು ಮುಟ್ಟಿಸಿಬರುವೆ. ಅಪ್ಪಣೆ ಕೊಡಿ. |
| **ಶಿವಾಜಿ** | : | ಆಕೆಗೊಂದು ಮೇನೆಯ ವ್ಯವಸ್ಥೆ ಮಾಡಿ. ರಕ್ಷಣೆಗೆ ಸೈನಿಕರೂ ಇರಲಿ. ಒಟ್ಟಾರೆ ಸುರಕ್ಷಿತವಾಗಿ ಮುಟ್ಟಿಸಿ ಬನ್ನಿ. |
| **ಆಬಾ. ದೇವ** | : | ತಮ್ಮ ಅಣತಿಯಂತಾಗಲಿ, ನಾನಿನ್ನು ಹೋಗಿ ಬರುತ್ತೇನೆ. |
| **ಶಿವಾಜಿ** | : | ಹೋಗಿ ಬನ್ನಿ, ತಂಗಿ ತುಳಜಾ ಭವಾನಿಯ ಕೃಪೆ ನಿಮ್ಮ ಮೇಲಿರಲಿ. |
| **ಆಬಾ. ದೇವ** | : | ನ್ಯಾಯನಿಧಿ ಶಿವಾಜಿ ಮಹಾರಾಜರಿಗೆ ಜಯವಾಗಲಿ, ಪರನಾರಿ ಸಹೋದರ ಶಿವಾಜಿಗೆ ಜಯವಾಗಲಿ. |

## ಶಬ್ದಗಳ ಅರ್ಥ

ಅರಿಕೆ – ವಿಜ್ಞಾಪನೆ; ಸಮರ – ಯುದ್ಧ; ಲೇಸು – ಒಳ್ಳೆಯತನ; ಆಣತಿ – ಆಜ್ಞೆ

## ಅಭ್ಯಾಸ

**ಕೃತ -1 ಕೆಳಗಿನ ಜಾಲಾಕೃತಿಯನ್ನು ಪೂರ್ಣ ಗೊಳಿಸಿರಿ.**




**ಕೃತಿ-2 ಮಾಹಿತಿ ತುಂಬಿರಿ.**




**ಕೃತಿ-3 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಶಿವಾಜಿ ಮಹಾರಾಜರ ಸೈನಿಕರು ಯಾರೊಡನೆ ಯುದ್ಧಮಾಡಲು ಹೋಗಿದ್ದರು?

ಉತ್ತರ : ..........................................................................................................

..........................................................................................................

..........................................................................................................

2) ಆಬಾಜಿ ಸೋನದೇವನು ಕಲ್ಯಾಣದಿಂದ ಏನೇನು ತಂದಿದ್ದನು ?

ಉತ್ತರ : ..........................................................................................................

..........................................................................................................

..........................................................................................................

3) ಶಿವಾಜಿ ಮಹಾರಾಜರು ಬೀಬಿಯನ್ನು ಹೇಗೆ ಸಮಾಧಾನ ಪಡಿಸಿದರು?

ಉತ್ತರ : ..........................................................................................................................

..........................................................................................................................

..........................................................................................................................

4) ಆತಿಥ್ಯದ ಕುರಿತು ಮಹಾರಾಜರು ಆಬಾದೇವನಿಗೆ ಏನು ಹೇಳಿದರು?

ಉತ್ತರ : ..........................................................................................................................

..........................................................................................................................

..........................................................................................................................

5) ಈ ನಾಟಕದಿಂದ ತಿಳಿದು ಬರುವ ನೀತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ?

ಉತ್ತರ : ..........................................................................................................................

..........................................................................................................................

..........................................................................................................................

**ಕೃತಿ – 4 ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?**

1) ''ಕಲ್ಯಾಣಹೋರಾಟದಲ್ಲಿ ಜಯ ನಮ್ಮದಾಗಿದೆ''

ಉತ್ತರ : ..........................................................................................................................

..........................................................................................................................

..........................................................................................................................

2) ''ಹಾಗೆಯೇ ಸಂಗಡ ಅಮೂಲ್ಯವಾದ ರತ್ನವೊಂದನ್ನು ತಂದಿದ್ದೇವೆ?''

ಉತ್ತರ : ..........................................................................................................................

..........................................................................................................................

..........................................................................................................................

3) ''ಈಕೆ ಈ ಶಿವಾಜಿಮಹಾರಾಜರ ಸಹೋದರಿ, ಒಡಹುಟ್ಟಿದತಂಗಿ.''

ಉತ್ತರ : ..........................................................................................................................

..........................................................................................................................

..........................................................................................................................

4) ''ನೀನು ಪರನಾರಿ ಸಹೋದರನಾಗಿ ಬದುಕು ಅಲ್ಲಾ ಒಳ್ಳೆಯದು ಮಾಡುವನು.''

ಉತ್ತರ : ..........................................................................................................................

..........................................................................................................................

..........................................................................................................................

5) "ತಂಗಿ ನನ್ನೊಡನೆ ಬಾ ನಿನ್ನ ಊರಿಗೆ ಮುಟ್ಟಿಸಿ ಬರುವೆನು."

ಉತ್ತರ : ....................................................................................................

....................................................................................................

....................................................................................................

**ಕೃತಿ -5 ಸುಳಿವನ್ನು ಆಧರಿಸಿ ಮಾಹಿತಿ ಬರೆಯಿರಿ.**





ಶಿವಾಜಿ ಮಹಾರಾಜರು ಬೀಬಿಯನ್ನುಕುರಿತು ಹೇಳಿದ ಮಾತುಗಳು

**ಕೃತಿ-6 ಶಿಕ್ಷಕ/ಪಾಲಕ/ಗ್ರಂಥಾಲಯ ಅಥವಾ ಅಂತರ್ಜಾಲವನ್ನು ಬಳಸಿಕೊಂಡು ಕೆಳಗಿನ ಮಾಹಿತಿ ಬರೆಯಿರಿ.**

ಉತ್ತರ

.......... .......... .......... .......... ..........

ಶಿವಾಜಿ ಮಹಾರಾಜರ ಕೋಟೆಗಳು

**ಕೃತಿ-7 ಈ ನಾಟಕವನ್ನು ವರ್ಗಮಿತ್ರರೊಂದಿಗೆ ಅಭಿನಯಿಸಿರಿ.**

●●●

# 7. ಅರಣ್ಯ ಸಂಪತ್ತು



ಭೂಮಿದೇವಿಯ ಪುಣ್ಯಗರ್ಭದಲ್ಲಿ ಅಡಗಿರುವ ಅಮೂಲ್ಯವಾದ ವಸ್ತುಗಳು ಅಸಂಖ್ಯಾತವೂ ಅಪರಿಮಿತವೂ ಆಗಿವೆ. ಭೂಮಿಯಲ್ಲಿ ಹುಟ್ಟಿ ಬೆಳೆಯುವ ಗಿಡ ಮೂಲಿಕೆಗಳೂ ಮರಬಳ್ಳಿಗಳೂ ಅಸಂಖ್ಯೇಯವಾದುವು. ಇಲ್ಲಿ ಕಂಗೊಳಿಸುವ ಜಲಾಶಯಗಳೂ ಹುಟ್ಟಿಹರಿಯುವ ನದಿಗಳೂ ಸಾವಿರಾರು. ಈ ಸಂಪತ್ಸಮೂಹವನ್ನು ಧರಿಸಿರುವುದರಿಂದಲೇ ಭೂಮಿಯನ್ನು ರತ್ನಗರ್ಭೆ, ವಸುಮತಿ ವಸುಂಧರೆ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ತಮ್ಮ ಅನುಕೂಲತೆಗಳನ್ನು ಪಡೆಯುವುದಕ್ಕಾಗಿ ಮಾನವರು ಬೇಕಾದಂತೆ ಉಪಯೋಗಿಸುವ ಪ್ರಕೃತಿದತ್ತವಾದ ಸಂಪತ್ತುಗಳಲ್ಲಿ ಅರಣ್ಯ ಸಂಪತ್ತು ವಿಶಿಷ್ಟವಾದುದು. ಅರಣ್ಯಗಳು ಭೂಖಂಡದ ವಿಸ್ತೀರ್ಣದ ಮೂರನೆ ಒಂದು ಪಾಲಿನಷ್ಟು ಭಾಗವನ್ನು ಆವರಿಸಿರುತ್ತದೆ. ಭಾರತದಲ್ಲಿ ಅವು ಸುಮಾರು 23ರಷ್ಟು ಭಾಗದಲ್ಲಿ ಮಾತ್ರ ಇವೆ. ಇಲ್ಲಿಯೂ ಕಾಡುಗಳನ್ನು ಮೂರನೆ ಒಂದು ಪಾಲಿನಷ್ಟು ಜಾಗದಲ್ಲಿ ಬೆಳೆಸಬೇಕೆಂದು ಯೋಜನೆ ಹೂಡಿದ್ದಾರೆ.

ಅಮೆರಿಕದ ಎಮೆಜೋನ್ ನದಿ ಪ್ರದೇಶದ ಮಹಾರಣ್ಯಗಳಂತೆ, ಆಫ್ರಿಕದ ಕಾಂಗೋ ನದಿ ಪ್ರದೇಶದ ಮಹಾಟವಿಗಳಂತೆ, ಭಾರತದ ದಟ್ಟಡವಿಗಳು ಜಗತ್ಪ್ರಸಿದ್ಧವಾಗಿವೆ. ಕನ್ಯಾಕುಮಾರಿಯಿಂದ ಕಾಶ್ಮೀರದ ತನಕ ಅಲ್ಲಲ್ಲಿ ಕಾಣಸಿಗುವ ವಿವಿಧ ಅರಣ್ಯಗಳಲ್ಲಿರುವ ಸಸ್ಯಗಳ ವೈವಿಧ್ಯ ವಿಶ್ವದ ಇನ್ನಾವ ಭಾಗದಲ್ಲಿಯೂ ಕಾಣಸಿಗುವುದಿಲ್ಲ. ನಮ್ಮ ದೇಶದ ಅರಣ್ಯಗಳಲ್ಲಿ ಹೆಚ್ಚಿನಂಶವೂ ಪರ್ವತ ಪ್ರದೇಶದಲ್ಲಿದೆ. ಮಣ್ಣಿನ ಸ್ವಭಾವವನ್ನೂ ಹವೆಯ ಗುಣವನ್ನೂ, ಮಳೆಯ ಪರಿಮಾಣವನ್ನೂ ಹೊಂದಿಕೊಂಡು ಕಾಡುಗಳು ಭಿನ್ನ ಭಿನ್ನ ರೀತಿಯಲ್ಲಿ ಬೆಳೆಯುತ್ತವೆ.

ಭಾರತದಲ್ಲಿ ಧಾರಾಳ ಮಳೆ ಬೀಳುವ ಪ್ರದೇಶಗಳಲ್ಲಿ ಸದಾ ಹಸುರೆಲೆ ಮರಗಳಿಂದ ತುಂಬಿದ ಗೊಂಡಾರಣ್ಯಗಳು ಬೆಳೆಯುತ್ತವೆ. ಗಗನವನ್ನು ಮುಟ್ಟಲು ಯತ್ನಿಸುವ ಭಾರೀ ಬೆಲೆಬಾಳುವ ದೈತ್ಯಾಕಾರದ ಮರಗಳೂ, ಕಡುನಿಬಿಡವಾಗಿ ಬೆಳೆಯುವ ನಾನಾ ಗಾತ್ರದ ಗಿಡಬಳ್ಳಿಗಳೂ, ಬೆತ್ತಬಿದಿರುಗಳ ಮೆಳೆಗಳೂ, ಬಗೆಬಗೆಯ ಪೊದರುಗಳೂ, ಇಂತಹ ಕಾನನಗಳಲ್ಲಿದ್ದು ಇವು ಅಭೇದ್ಯವಾಗಿರುತ್ತವೆ. ಸೂರ್ಯನ ಕಿರಣಗಳಿಗೂ ಈ ವನಗಳೊಳಗೆ ಪ್ರವೇಶಿಸಲು ಅಸಾಧ್ಯವಾಗಿರುತ್ತವೆ. ಗಾಳಿಯೂ ಇಲ್ಲಿ ಅಲೆದಾಡಲು ಸಂಕೋಚಪಡುತ್ತದೆ. ಈ ರೀತಿಯ ಕಾಡುಗಳು ಪಶ್ಚಿಮ ಘಟ್ಟಗಳಲ್ಲಿಯೂ ಪೂರ್ವ ಹಿಮಾಲಯದ ಭಾಗದಲ್ಲಿಯೂ ಕಂಡಬರುತ್ತವೆ.

60 ರಿಂದ 80 ಅಂಗುಲದಷ್ಟು ಮಳೆ ಬೀಳುವ ಪ್ರದೇಶಗಳಲ್ಲಿರುವ ಕಾಡುಗಳು ವರ್ಷದ ಎಲ್ಲ

ಭಾಗಗಳಲ್ಲಿಯೂ ಹಸುರಾಗಿರುವುದಿಲ್ಲ ಒಂದು ಋತುವಿನಲ್ಲಿ ಮರಗಿಡಗಳ ಎಲೆಗಳು ಉದುರಿಹೋಗಿ ವನಗಳ ಶೋಭೆಯು ಕುಂದುತ್ತದೆ. ವಸಂತ ಕಾಲವು ಬಂದೊಡನೆ ಸಸ್ಯಗಳೆಲ್ಲ ಚಿಗುರಿ ನವ ಚೈತನ್ಯವನ್ನು ಪಡೆಯುತ್ತವೆ. ಇಂತಹ ಅರಣ್ಯಗಳು ಉತ್ತರ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಓಡಿಶಾ, ತಮಿಳನಾಡು, ಕರ್ನಾಟಕ, ಕೇರಳ– ಈ ರಾಜ್ಯಗಳಲ್ಲಿ ಹೇರಳವಾಗಿವೆ.

ಇದಕ್ಕಿಂತ ಕಡಿಮೆ ಮಳೆಯಿರುವ ರಾಜಸ್ಥಾನದ ಮತ್ತು ಪಂಜಾಬಿನ ಮರುಭೂಮಿ ಪ್ರದೇಶಗಳಲ್ಲಿ ಕಂಡು ಬರುವ ಕಾಡುಗಳಲ್ಲಿ ದಪ್ಪವಾದ ಕಾಂಡಗಳೂ, ಎಲೆಗಳೂ ಇರುವ ಗಿಡಗಳಿಂದ ಕೂಡಿದ ಪೊದರುಗಳೂ ಗಿಡ್ಡ ಮರಗಳೂ ತುಂಬಿರುತ್ತವೆ.

ಹಿಮಾಲಯದ 3000 ಅಡಿಗಳಿಗಿಂತ ಎತ್ತರದ ಭಾಗದಲ್ಲಿಯೂ ದಕ್ಷಿಣ ಭಾರತದ ಪರ್ವತಗಳ 5000 ಅಡಿಗಳಿಗಿಂತ ಎತ್ತರದ ಸ್ಥಳಗಳಲ್ಲಿಯೂ ಸದಾಕಾಲ ಹಸುರೆಲೆಗಳಿರುವವು ವೃಕ್ಷಗಳಿಂದ ತುಂಬಿದ ಮಹಾಟವಿಗಳು ವಿರಾಜಿಸುತ್ತವೆ.

ಗಂಗಾನದಿ, ಮಹಾನದಿ, ಸಿಂಧುನದಿ – ಇವುಗಳ ಮುಖಜ ಭೂಮಿಗಳಲ್ಲಿಯೂ, ಭರತದ ಸಮಯ ಸಮುದ್ರದ ನೀರು ಹರಿಯುವ ಭಾಗಗಳಲ್ಲಿಯೂ, ಕಟ್ಟಿಗೆಗೆ ಉಪಯುಕ್ತವಾದ ಮರಗಳಿಂದ ಕೂಡಿದ ಕಾಡುಗಳು ಬೆಳೆಯುತ್ತವೆ.

ಹೆಚ್ಚಿನ ಅರಣ್ಯಗಳು ಸರಕಾರದ ವಶದಲ್ಲಿದ್ದು ಹಲವು ಸರಕಾರದ ಉಪಯೋಗಕ್ಕಾಗಿಯೇ ಕಾದಿರಿಸಲ್ಪಟ್ಟವು. ಕೆಲವು ಸರಕಾರದ ನಿಬಂಧನೆಗಳಿಗನುಸಾರವಾಗಿ ಸಾರ್ವಜನಿಕರ ಉಪಯೋಗಕ್ಕೆ ದೊರಕುವಂತಹವುಗಳು. ಇನ್ನೂ ಎಷ್ಟೊ ಸಣ್ಣ ಪುಟ್ಟ ಸರಕಾರಿ ಕಾಡುಗಳು ಗ್ರಾಮಗಳಲ್ಲಿದ್ದು ಅವು ಅರಣ್ಯ ಖಾತೆಯ ಅಧಿಕಾರದಲ್ಲಿರುವುದಿಲ್ಲ. ಕೃಷಿಕರು ಅವುಗಳ ಪ್ರಯೋಜನವನ್ನು ಧಾರಾಳವಾಗಿ ಪಡೆಯುತ್ತಾರೆ. ಎಷ್ಟೋ ಖಾಸಗಿ ವನಗಳೂ ಈ ದೇಶದಲ್ಲಿವೆ.

ದಕ್ಷಿಣಭಾರತದಲ್ಲಿ ಸಾಗುವಾನಿ, ಬೀಟೆ, ಹಲಸು, ಹೆಬ್ಬಲಸು, ಬಣಪು, ಕಿರಾಲಭೋಗಿ ಇತ್ಯಾದಿ ಅಮೂಲ್ಯ ಮರಗಳು ಪ್ರಸಿದ್ಧವಾದರೆ, ಉತ್ತರ ಭಾರತದಲ್ಲಿ ದೇವದಾರು, ಮಹಾಗನಿ ಇತ್ಯಾದಿ ವೃಕ್ಷಗಳು ಸಾಮಾನ್ಯವಾಗಿ ಬೆಳೆಯುತ್ತವೆ. ಪ್ರಪಂಚದಲ್ಲೇ ಪ್ರಾಚೀನವಾದ ಸಾಗುವಾನಿ ಕಾಡುಗಳು ಕೇರಳದ ನೀಲಂಬೂರಿನಲ್ಲಿವೆ. ಗಂಧದ ಮರಗಳನ್ನು ಜಗತ್ತಿಗೆ ಒದಗಿಸುವ ಮಹಾಭಾಗ್ಯ ಕೇರಳ, ಮೈಸೂರುಗಳದ್ದಾಗಿರುತ್ತದೆ.

ಸಸ್ಯ ಸಾಮ್ರಾಜ್ಯದಿಂದ ದೊರಕುವ ಪ್ರಯೋಜನ ಅಷ್ಟಿಷ್ಟಲ್ಲ. ಮನೆ ಮೊದಲಾದ ಕಟ್ಟಡಗಳನ್ನು ನಿರ್ಮಿಸಲು, ಮೇಜು ಕುರ್ಚಿ, ಮುಂತಾದ ಉಪಕರಣಗಳನ್ನು ಸಿದ್ಧಪಡಿಸಲು ಮರಮಟ್ಟುಗಳು ಬೇಕು. ಹಡಗು, ದೋಣಿ, ಉಗಿಬಂಡಿ, ಬಸ್ಸು ಮುಂತಾದುವುಗಳ ರಚನೆಗೆ ಮರ ಉಪಯೋಗವಾಗುತ್ತದೆ. ರೈಲು ಮಾರ್ಗಗಳಿಗೂ ವಿದ್ಯುತ್ತಿನ ಕಂಬಗಳಿಗೂ ಮರಗಳನ್ನು ಧಾರಾಳವಾಗಿ ಬಳಸುತ್ತಾರೆ. ನಾನಾ ಬಗೆಯ ಸಾಮಾನುಗಳನ್ನು ತುಂಬಿಸಿ ರವಾನಿಸಲು ಮರದ ಪೆಟ್ಟಗೆಗಳ ರಾಶಿ ರಾಶಿಗೆಗಳೇ ಬೇಕಾಗುತ್ತವೆ. ತರತರದ ಆಟದ ಸಾಮಾನುಗಳು, ಅಡಿಗೋಲು, ಪೆನ್ಸಿಲು, ಸ್ಲೇಟಿನ ಚೌಕ, ಬೆಂಕಿಪೆಟ್ಟಿಗೆ ಇತ್ಯಾದಿಗಳಿಗೆ ಬೇಕಾದ ಮರವೇನು ಕಡಿಮೆಯಿಲ್ಲ. ಗಂಧದ ಮರದಿಂದ ಕಡೆದು ತೆಗೆಯುವ ಸುಂದರ ಕಲಾಕೃತಿಗಳು ಜಗತ್ಪ್ರಸಿದ್ಧವಾಗಿವೆ. ಇತ್ತಿತ್ತಲಾಗಿ ಜನಪ್ರಿಯವಾಗಿರುವ ಪ್ಲೈವುಡ್ ತಯಾರಿಕೆಗೆ ಮೆತ್ತನೆಯ ಮರಗಳು ಎಷ್ಟಿದ್ದರೂ ಸಾಕಾಗುವುದಿಲ್ಲ, ಚೆಂಡೆ, ಮದ್ದಳೆ, ವೀಣೆ, ತಂಬೂರಿ, ಪೀಟೀಲು, ಹಾರ್ಮೋನಿಯಮ್, ನಾಗಸ್ವರ, ಕೊಳಲು, ಇತ್ಯಾದಿಗಳ ತಯಾರಿಕೆ ಮರಗಳೂ, ಬಿದಿರೂ ಅಗತ್ಯ. ಕಾಗದ, ರೇಯನ್ಸ್, ಮೊದಲಾದುವುಗಳು ಸಸ್ಯಲೋಕದ ಕೊಡುಗೆಗಳು ಬೆತ್ತ ಬಿದಿರುಗಳ ಉಪಯೋಗ ಹಲವಾರು. ಮನೆಗಳ ಉಪಯೋಗಕ್ಕೂ ಕಾರ್ಖಾನೆಗಳಿಗೂ, ಕಟ್ಟಿಗೆಗಳು ಗಾಡಿ ಗಾಡಿಗಳೇ ಬೇಕಾಗುತ್ತವೆ.

ಲವಂಗ, ರಾಮಪತ್ರಿ, ದಾಲಚಿನ್ನಿ, ಸೀಗೆಕಾಯಿ, ಸೊರೆಕಾಯಿ, ಮೊದಲಾದುವುಗಳು ಕಾಡುತ್ಪತ್ತಿಗಳು, ಕಾಪಿ, ಏಲಕ್ಕಿ, ಕಿತ್ತಳೆ, ಒಳ್ಳೆಮೆಣಸು ಇವನ್ನೆಲ್ಲ ಹೆಚ್ಚಾಗಿ ವನಪ್ರದೇಶದಲ್ಲಿ ಬೆಳೆಸುತ್ತಾರೆ. ಗಂಧದೆಣ್ಣೆ, ನೀಲಗಿರಿ ಎಣ್ಣೆ ಮುಂತಾದ ಹಲವು ತರದ ಸಸ್ಯಜನ್ಯ ತೈಲಗಳು ಬಳಕೆಯಲ್ಲಿವೆ. ಅತ್ಯುಪಯುಕ್ತವಾದ ರಬ್ಬರು, ಗೋಂದು, ಹಿಂಗು ಇವನ್ನು ನಮಗೆ ವೃಕ್ಷಗಳೇ ನೀಡುತ್ತವೆ. ಚರ್ಮವನ್ನು ಹದಗೊಳಿಸಲು ಬೇಕಾದ ಪದಾರ್ಥಗಳನ್ನು ಅರಣ್ಯಗಳೇ ಒದಗಿಸುತ್ತವೆ. ಕೃಷಿಕರಿಗೆ ಅಗತ್ಯವಿರುವ ಹಸುರೆಲೆ ಗೊಬ್ಬರ, ತರಗೆಲೆ ಗೊಬ್ಬರ, ಬೇಲಿಮುಳ್ಳು,ಹುಲ್ಲು ಇವೇ ಮೊದಲಾದುವು ಅರಣ್ಯಗಳಲ್ಲೇ ದೊರೆಯುತ್ತವೆ.

ರೋಗ ನಿವಾರಣೆಗೆ ಬೇಕಾದ ಅಸಂಖ್ಯಾತ ಮದ್ದಿನ ಗಿಡಗಳು ವನಗಳಲ್ಲಿ ಹುಟ್ಟಿ ಬೆಳೆಯುತ್ತವೆ. ಔಷಧವಲ್ಲದ ಗಿಡವೇ ಇಲ್ಲ ಎಂಬುದಾಗಿ ಬಲ್ಲವರ ಮಾತಿದೆ.

ಮಹಾರಣ್ಯದಲ್ಲಿ ಸಸ್ಯ ಸಮುದಾಯದೊಡನೆ ಸಹಬಾಳ್ವೆಯನ್ನು ನಡೆಸುವ ವಿವಿಧ ಮೃಗ ಪಕ್ಷಿ ಜಂತುಗಳು ಅಗಣಿತವಾದವುಗಳು. ಇವುಗಳನ್ನು ಬಂಧಿಸಿ ಮೃಗಾಲಯಗಳಿಂದ ಆರ್ಥಿಕ ಲಾಭವೂ ದೊರಕುತ್ತದೆ. ನಮ್ಮ ಕಾಡುಗಳಲ್ಲಿರುವ ಮೃಗಗಳಲ್ಲಿ ಹುಲಿ, ಕರಡಿ, ಸಿಂಹ, ಚಿರತೆ, ತರತರದ ಜಿಂಕೆಗಳು, ಕಾಡುಕೋಣ, ಖಡ್ಗಮೃಗ, ಕಾಡಾನೆ ಇತ್ಯಾದಿಗಳು

ಮುಖ್ಯವಾದವುಗಳು. ಕಾಡಾನೆಗಳನ್ನು ಹಿಡಿದು ಪಳಗಿಸಿ ಭಾರವನ್ನೆಳೆಯಲು ಉಪಯೋಗಿಸುತ್ತಾರೆ. ಮೃಗಗಳು ಮಾಂಸ, ಚರ್ಮ, ಕೋಡುಗಳು, ಪುಣುಗು ಕಸ್ತೂರಿ ನವಿಲುಗರಿ ಇತ್ಯಾದಿಗಳು ಬಹುಪಯುಕ್ತವಾದವುಗಳು, ಗೂಡುಗಳಿಂದ ಲಭಿಸುವ ಜೇನು, ಮೇಣಕ್ಕೆ ಮುಂತಾದುವು ಅಮೂಲ್ಯವಾದ ದ್ರವ್ಯಗಳು, ಆನೆಯ ದಂತದಿಂದ ಅಂದವಾದ ಪ್ರತಿಮೆಗಳನ್ನೂ, ಇತರ ಸಾಧನಗಳನ್ನೂ ತಯಾರಿಸುತ್ತಾರೆ.

ಧಾರಾಳವಾಗಿ ಮಳೆಯನ್ನು ಬೀಳುವಂತೆ ಮಾಡಿ, ನೀರಿನ ಕೊರೆತದಿಂದ ನೆಲವನ್ನು ರಕ್ಷಿಸಿ, ಮಣ್ಣಿನ ಫಲವತ್ತತೆಯನ್ನು ಕಾಪಾಡಿ, ಗಾಳಿಯ ಹೊಡೆತವನ್ನು ತಡೆದು ತಂಪಾದ ನೆಳಲನ್ನಿತ್ತು ಬಗೆಬಗೆಯ ವಸ್ತುಗಳನ್ನೂ ಬೇಕು ಬೇಕಾದ ಹಣ್ಣು ಹಂಪಲುಗಳನ್ನೂ ಚಂದವಾದ ಹೂವುಗಳನ್ನೂ ಒದಗಿಸುವ ಅರಣ್ಯಗಳ ಬೆಲೆಯನ್ನರಿತೇ ನಮ್ಮ ಪೂರ್ವಜರು ವನಗಳನ್ನು ಪೂಜಿಸಿ ಕೃತಜ್ಞತೆಯನ್ನು ಪ್ರದರ್ಶಿಸುತ್ತಿದ್ದರು. ಸಸ್ಯಗಳ ಮಹತ್ವವನ್ನು ಜನತೆಗೆ ತಿಳಿಸುವುದಕ್ಕಾಗಿ ವನಮಹೋತ್ಸವ, ಸಸಿ ಸಪ್ತಾಹ ಮೊದಲಾದ ಉತ್ಸವಗಳನ್ನು ಈಗ ಆಚರಿಸಲಾಗುತ್ತದೆ.

ಅರಣ್ಯ- ವಿಜ್ಞಾನಕ್ಕೆ ಸಂಬಂಧಿಸಿದ ಶಿಕ್ಷಣ, ಸಂಶೋಧನೆ, ಇವುಗಳ ವ್ಯವಸ್ಥೆಯನ್ನು ಕೇಂದ್ರ ಸರಕಾರವು ನಿರ್ವಹಿಸುತ್ತದೆ. ಅರಣ್ಯ ವಿಜ್ಞಾನದ ವಿದ್ಯಾಲಯಗಳು ಡೆಹ್ರಾಡೂನಿನಲ್ಲಿಯೂ ಕೋಹಿಮುತ್ತೂರಿನಲ್ಲಿಯೂ ಇವೆ. ಮುಖ್ಯ ಸಂಶೋಧನಾಲಯವು ಡೆಹ್ರಾಡೂನಿನಲ್ಲಿದ್ದು ಪ್ರಾದೇಶಿಕ ಸಂಶೋಧನಾಲಯಗಳು ಜಬಲ್‌ಪುರ, ಬೆಂಗಳೂರು ಮತ್ತು ಕೋಹಿಮುತ್ತೂರ ಈ ಕೇಂದ್ರಗಳಲ್ಲಿವೆ. ಈ ಸಂಸ್ಥೆಗಳು ಅರಣ್ಯ ವಿಜ್ಞಾನಕ್ಕೆ ಸಂಬಂಧಿಸಿದ ಸಕಲ ವಿಷಯಗಳನ್ನು ಅಭ್ಯಸಿಸಿ ಅರಣ್ಯಗಳ ಸರ್ವತೋಮುಖವಾದ ಅಭಿವೃದ್ಧಿಯಾಗಿ ರಾಷ್ಟ್ರದ ಸಂಪತ್ತು ವರ್ಧಿಸುವಂತೆ ಮಾರ್ಗದರ್ಶನವನ್ನು ಮಾಡುತ್ತಿವೆ.

## ಶಬ್ದಗಳ ಅರ್ಥ

ಅಪರಿಮಿತ – ಮಿತಿಯಿಲ್ಲದ; ಕಂಗೊಳಿಸು – ಸುಂದರವಾಗಿಕಾಣು; ಅಭೇದ್ಯ – ಮುರಿಯಲಾಗದ; ಭರತ –ಕಡಲು ಉಕ್ಕುವ ಸಮಯ;

## ಅಭ್ಯಾಸ

**ಕೃತಿ: 1 – ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಭೂಮಿಯನ್ನು ವಸುಂಧರೆ ಎಂದು ಕರೆಯಲು ಕಾರಣವೇನು ?

ಉತ್ತರ : ..........................................................................................................

..........................................................................................................

..........................................................................................................

2. ಜಗತ್ಪ್ರಸಿದ್ಧವಾದ ಕಾಡುಗಳು ಎಲ್ಲಿಲ್ಲಿ ಇವೆ?

ಉತ್ತರ : ..........................................................................................................

..........................................................................................................

..........................................................................................................

3. ಗೊಂಡಾರಣ್ಯ ಎಂದರೇನು?

ಉತ್ತರ : ..........................................................................................................

..........................................................................................................

..........................................................................................................

4. ಮರುಭೂಮಿ ಪ್ರದೇಶದ ಗಿಡಗಳ ವೈಶಿಷ್ಟ್ಯಗಳೇನು?

ಉತ್ತರ : ..........................................................................................................

..........................................................................................................

..........................................................................................................


5. ವನ ಮಹೋತ್ಸವದ ಉದ್ದೇಶವೇನು?

ಉತ್ತರ : ..........................................................................................................

..........................................................................................................

..........................................................................................................

**ಕೃತಿ: 2 – ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**





**ಕೃತಿ: 3 – ಪಶ್ಚಿಮ ಘಟ್ಟದ ಕಾಡುಗಳ ವೈಶಿಷ್ಟ್ಯವನ್ನು ಕುರಿತು ನಿಮ್ಮ ಅನಿಸಿಕೆ ಬರೆಯಿರಿ.**

ಉತ್ತರ : ..........................................................................................................


..........................................................................................................

..........................................................................................................

**ಕೃತಿ: 4 – ಜಾಲಾಕೃತಿಯನ್ನು ಪೂರ್ಣಗೊಳಿಸಿರಿ**




**ಕೃತಿ: 5 – ಶಾಮನ ಪ್ರಶ್ನೆಗೆ ಉತ್ತರ ಬರೆಯಿರಿ.**



**ಕೃತಿ: 6 – ಸುಳಿವನ್ನಾಧರಿಸಿ ಮಾಹಿತಿ ಬರೆಯಿರಿ.**

ಕಾಡಿನ ವರ್ಣನೆ

ವರ್ಣನಾತ್ಮಕ

ಭಾವನಾತ್ಮಕ

ವಿವೇಚನಾತ್ಮಕ

**ಕೃತಿ: 7 – ಸುಳಿವನ್ನಾಧರಿಸಿ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ.**

ಕಾಡುನಸಿಸುತ್ತಿರುವ ರೀತಿ

ಕಾಡ್ಗಿಚ್ಚು

ನಗರೀಕರಣ

ನೈಸರ್ಗಿಕವಿಪತ್ತು

**ಕೃತಿ: 8 – ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.**

ಹರಿತ ಕ್ರಾಂತಿಗಾಗಿ ನಿಮ್ಮ ಸಲಹೆಗಳು

**ಕೃತಿ: 9 – ಬಿಟ್ಟ ಸ್ಥಳ ತುಂಬಿರಿ**

1) ಭಾರತದಲ್ಲಿ ಸುಮಾರು........................... ರಷ್ಟು ಭಾಗದಲ್ಲಿ ಮಾತ್ರ ಅರಣ್ಯಗಳಿವೆ.

2) ...................... ಕಾಲವು ಬಂದೊಡನೆ ಸಸ್ಯಗಳೆಲ್ಲ ಚಿಗುರಿ ನವಚೈತನ್ಯ ಪಡೆಯುತ್ತವೆ.

3) ಕಾಗದ ರೇಯನ್ ಮೊದಲಾದವು........................... ಕೊಡುಗೆಗಳು.

4) ..................... ಆರ್ಥಿಕ ಲಾಭವೂ ದೊರಕುತ್ತದೆ.


5) ಅರಣ್ಯ ವಿಜ್ಞಾನದ ವಿದ್ಯಾಲಯಗಳು......................... ಮತ್ತು .........................ನಲ್ಲಿ ಇವೆ.

**ಕೃತಿ: 10 – ಶಾಲೆಯ ಪರಿಸರದಲ್ಲಿ ವೃಕ್ಷಾರೋಪಣಮಾಡಲು ಸಸಿಗಳನ್ನು ಪೂರೈಸಬೇಕಾಗಿ ಕೋರಿ ತಾಲೂಕಾ ಪಂಚಾಯತಿ ಕೃಷಿ ಅಧಿಕಾರಿಗಳಿಗೆ ಒಂದು ವಿನಂತಿ ಪತ್ರವನ್ನು ಬರೆಯಿರಿ.**





# 8. ಗೆಲಿಲಿಯೊ



ಸೂರ್ಯನು ಚಲಿಸುವುದಿಲ್ಲ; ಅವನು ಮೂಡುವುದಿಲ್ಲ; ಮುಳುಗುವುದೂ ಇಲ್ಲ; ಭೂಮಿಯೇ ತಿರುಗುತ್ತದೆ – ಎಂದು ಈಗ ಎಲ್ಲರೂ ಬಲ್ಲರೂ. ಆದರೆ ಮೂರುವರೆ ನೂರು ವರ್ಷಗಳ ಹಿಂದೆ ಜನರಿಗೆ ಈ ತಿಳಿವಳಿಕೆ ಇರಲಿಲ್ಲ. ಇಷ್ಟೇ ಅಲ್ಲ; ಭೂಮಿಯು ತಿರುಗುತ್ತದೆಯೆಂದು ಯಾರಾದರೂ ಹೇಳಿದರೆ, ಅವರು ಜನರ ರೋಷಕ್ಕೂ ಧರ್ಮದಂಡನೆಗೂ ಗುರಿಯಾಗಿ, ತಮ್ಮ ಜೀವಕ್ಕೆ ಎರವಾಗ ಬೇಕಾಗುತ್ತಿತ್ತು. ಇದಕ್ಕೆ ಹೆದರದೆ, ತನಗೆ ಸರಿಕಂಡದ್ದನ್ನು ಧೈರ್ಯದಿಂದ ಇತರರಿಗೆ ಭೋಧಿಸಿ, ಅನೇಕ ಕಷ್ಟ-ನಷ್ಟಗಳಿಗೆ ಈಡಾದ ಶ್ರೇಷ್ಠವಿಜ್ಞಾನಿಯೆಂದರೆ ಗೆಲಿಲಿಯೊ.

ಗೆಲಿಲಿಯೊ ಇಟಲಿಯ ಪೀಸಾ ನಗರದ ಒಂದು ಶ್ರೀಮಂತ ಮನೆತನದಲ್ಲಿ, ಕ್ರಿ. ಶ. 1564ರಲ್ಲಿ ಜನಿಸಿದನು. ಬಾಲ್ಯದಿಂದಲೂ ಅವನಿಗೆ ಯಂತ್ರಗಳಲ್ಲಿ ಹೆಚ್ಚು ಆಸಕ್ತಿ ಇತ್ತು. ಸಣ್ಣಸಣ್ಣ ಯಂತ್ರಗಳನ್ನು ಬಿಚ್ಚಿ ಜೋಡಿಸುತ್ತಿದ್ದನು ಅವುಗಳಲ್ಲಿ ಹೊಸದನ್ನೇನಾದರೂ ಕಲ್ಪಿಸುತ್ತಿದ್ದನು. ಈ ಚುರುಕುಬುದ್ಧಿಯನ್ನು ಕಂಡು ಅವನ ತಂದೆಯು, ಪೀಸಾ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಅಭ್ಯಾಸಕ್ಕಾಗಿ ಅವನನ್ನು ಸೇರಿಸಿದನು; ಆದರೆ ಗೆಲಿಲಿಯೊನಿಗೆ ಗಣಿತ ವಿಷಯವೇ ಹೆಚ್ಚು ಸೇರಿತು. ಅವನು ವೈದ್ಯಕೀಯ ಅಭ್ಯಾಸವನ್ನು ಬಿಟ್ಟು ಗಣಿತಶಾಸ್ತ್ರದ ಅಭ್ಯಾಸ ಮಾಡಹತ್ತಿದನು. ಆಗ ರೂಢವಾಗಿದ್ದ ಜ್ಯೋತಿಷಶಾಸ್ತ್ರ, ಗ್ರಹಗಳ ಚಲನೆಯ ಶಾಸ್ತ್ರ ಮೊದಲಾದುವುಗಳನ್ನು ಆಸಕ್ತಿಯಿಂದ ಓದಿದನು ತತ್ತ್ವಶಾಸ್ತ್ರವನ್ನೂ ಅವನು ಓದಿ ತಿಳಿದುಕೊಂಡನು.

ವಿದ್ಯಾರ್ಥಿ ದೆಶೆಯಲ್ಲಿರುವಾಗಲೆ ಗೆಲಿಲಿಯೊ ಒಂದು ಸಿದ್ಧಾಂತವನ್ನು ಕಂಡುಹಿಡಿದನು: ಒಂದು ದಿನ ಅವನು ಪ್ರಾರ್ಥನಾಮಂದಿರಕ್ಕೆ ಹೋಗಿದ್ದನು. ಅಲ್ಲಿ ತೂಗುಹಾಕಿದ ಒಂದು ದೀವಿಗೆಯನ್ನು ತುಸು ಮಗ್ಗುಲಿಗೆ ಎಳೆದು ದೀಪ ಹೊತ್ತಿಸಿ ಕೈಬಿಟ್ಟಾಗ ಅದು ಅಲುಗಾಡಹತ್ತಿತ್ತು. ಗೆಲಿಲಿಯೊ ಅದನ್ನೇ ನಿರೀಕ್ಷಿಸುತ್ತ ಕುಳಿತನು. ಮೊದ-ಮೊದಲು ಆ ಅಲುಗಾಟದ ಅಗಲಳತೆಯು ದೊಡ್ಡದಿತ್ತು. ಬರು-ಬರುತ್ತ ಅದು ಸಣ್ಣದಾಗಿ, ಕಡೆಗೆ ಆ ದೀಪದ ಅಲುಗಾಟವು ನಿಂತಿತು. ಆದರೆ ಅಲುಗಾಟದ ಅಗಳತೆಯು ದೊಡ್ಡದಿರಲಿ ಸಣ್ಣದಿರಲಿ. ದೀಪವು ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಿ ತಿರುಗಿ ಮೊದಲಿನ ಸ್ಥಳಕ್ಕೆ ಬರಲು ಹಿಡಿಯುವ ವೇಳೆಯು ಯಾವಾಗಲೂ ಸಮಾನ ವಾಗಿರುತ್ತದೆಂದು ಗೆಲಿಲಿಯೊ ಕಂಡುಹಿಡಿದನು. ಇದೇ ಸಿದ್ಧಾಂತದ ಮೇರೆಗೆ ಮುಂದೆ ಆಂದೋಲಕದ

(ಪೆಂಡ್ಯೂಲಂ) ಕಲ್ಪನೆ ತಲೆದೋರಿ, ಗಡಿಯಾರವು ನಿರ್ಮಾಣವಾಗಲು ಅನುಕೂಲವಾಯಿತು. ಹೀಗೆ ಗೆಲಿಲಿಯೊನ ನಿರೀಕ್ಷಣೆ ಮತ್ತು ಕಲ್ಪನಾಶಕ್ತಿಗಳು ಎಳೆಯ ವಯಸ್ಸಿನಿಂದಲೆ ತಮ್ಮ ಪ್ರಭಾವವನ್ನು ಬೀರಿದವು. ತನ್ನ ಪಾಂಡಿತ್ಯದ ಬಲದಿಂದ ಕ್ರಿ. ಶ. 1588ರಲ್ಲಿ ಅವನು ಅದೇ ಪೀಸಾ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕನಾಗಿ ನಿಯಮಿಸಲ್ಪಟ್ಟನು.

ಆಗ ಗೆಲಿಲಿಯೊ ಇನ್ನೊಂದು ಮಹತ್ವದ ಸಿದ್ಧಾಂತವನ್ನು ಹೇಳಿದನು. ಆ ಪೂರ್ವದಲ್ಲಿ ಸಾವಿರಾರು ವರ್ಷಗಳ ಹಿಂದೆ ಅರಿಸ್ಟಾಟಲನೆಂಬ ಗ್ರೀಕ ಪಂಡಿತನು ಬರೆದಿಟ್ಟ ಗಣಿತಶಾಸ್ತ್ರ-ತತ್ತ್ವಶಾಸ್ತ್ರಗಳೇ ಜನರಿಗೆ ಪ್ರಮಾಣ ಗ್ರಂಥಗಳಾಗಿದ್ದವು. ಅರಿಸ್ಟಾಟಲನ ಸಿದ್ಧಾಂತಗಳನ್ನು ಪಂಡಿತ-ಪಾಮರರಷ್ಟೇ ಅಲ್ಲದೆ, ಕ್ರೈಸ್ತ ಧರ್ಮಪೀಠವೂ ಮನ್ನಿಸಿತ್ತು. ಅವುಗಳಲ್ಲಿ ಕೆಲವು ಮೂಢನಂಬಿಗೆಯ ಮಾತುಗಳೂ ತಪ್ಪು ಕಲ್ಪನೆಗಳೂ ಇದ್ದವು.

''ಒಂದೇ ಎತ್ತರದಿಂದ ಬೀಳುವ ವಸ್ತುಗಳಲ್ಲಿ, ಭಾರವಾದ ವಸ್ತು ವೇಗವಾಗಿಯೂ ಹಗುರಾದ ವಸ್ತು ನಿಧಾನವಾಗಿಯೂ. ಕೆಳಗೆ ಬೀಳುವುದು'' ಎಂಬುದೊಂದು ಅರಿಸ್ಟಾಟಲನ ಸಿದ್ಧಾಂತವಾಗಿತ್ತು. ''ಇದು ಸರಿಯಾದುದಲ್ಲ; ಕೆಳಗೆ ಬೀಳುವ ವಸ್ತುಗಳು ಹಗುರಾಗಿರಲಿ ಭಾರವಾಗಿರಲಿ. ಅವುಗಳಿಗೆ ಗಾಳಿಯ ಒತ್ತುವಿಕೆ ಸಮಾನವಾಗಿದ್ದರೆ, ಅವು ಒಂದೇ ವೇಗದಿಂದ ಕೆಳಗೆ ಬೀಳುವುವು'' ಎಂದು ಗೆಲಿಲಿಯೊ ಹೇಳಿದನು. ಇದನ್ನು ಪ್ರತ್ಯಕ್ಷ ಸಿದ್ಧಮಾಡಿ ತೋರಿಸಲು ಅವನು ಪೀಸಾ ನಗರದ ಓಲು (ಒಲೆದ) ಗೋಪುರದ ತುದಿಗೆ ಹೋಗಿ, ಅಲ್ಲಿಂದ ಒಂದು ಪೌಂಡು ಮತ್ತು ನೂರು ಪೌಂಡು ತೂಕದ ಎರಡು ಗುಂಡುಗಳನ್ನು ಒಂದೇ ಕಾಲಕ್ಕೆ ಕೆಳಗೆ ಉರಿಸಿದನು. ಎರಡೂ ಗುಂಡುಗಳು ಒಂದೇ ವೇಳಗೆ ನೆಲವನ್ನು ಮುಟ್ಟಿದವು. ಗೋಪುರದ ಸುತ್ತಲೂ ನೆರೆದಿದ್ದ ಪೀಸಾ ವಿಶ್ವವಿದ್ಯಾಲಯದ ಪಂಡಿತರೂ, ವಿದ್ಯಾರ್ಥಿಗಳೂ ಅಧಿಕಾರಿ ವರ್ಗದವರೂ ಇದನ್ನು ಕಣ್ಣಾರೆ ಕಂಡರು. ಆದರೂ ಅವರಿಗೆ ನಂಬಿಕೆ ಹುಟ್ಟಲಿಲ್ಲ. ಗೆಲಿಲಿಯೋನ ಪ್ರಯೋಗದಲ್ಲಿ ಏನೋ ಮಾಟವಿರಬೇಕೆಂದು ತರ್ಕಿಸಿದರು. ಅರಿಸ್ಟಾಟಲನ ಸಿದ್ಧಾಂತವೆ ಸರಿಯೆಂದು ಸರಿಯೆಂದು ಎತ್ತಿಹಿಡಿದರು. ಪುರಾತನ ಧರ್ಮಶಾಸ್ತ್ರಗಳನ್ನು ಅಲ್ಲ ಗಳೆಯುವ ದ್ರೋಹಿಯೆಂದು ಗೆಲಿಲಿಯೋನನ್ನೇ ಆರೋಪಿಸಿ ಕಾಡತೊಡಗಿದರು. ಮೂಢನಂಬಿಕೆಯ ಆ ಜನರ ಪೀಡೆಗೆ ಬೇಸತ್ತು ಗೆಲಿಲಿಯೊ, ಪೀಸಾ ನಗರವನ್ನು ಬಿಟ್ಟು ಫ್ಲಾರೆನ್ಸ್ ನಗರಕ್ಕೆ ಹೋಗಿ ನೆಲಸಬೇಕಾಯಿತು. ಆದರೆ ಅವನು ನಡೆಸಿದ ಪ್ರಯೋಗದ ಸುದ್ದಿಯು ಯುರೋಪದಲ್ಲೆಲ್ಲ ಹಬ್ಬಿತು. ವಿಚಾರವಂತರು ತಾವು ಪ್ರಯೋಗಮಾಡಿ ನೋಡಿ, ಗೆಲಿಲಿಯೋನ ತತ್ವಗಳನ್ನು ಒಪ್ಪಿಕೊಂಡರು, ಅವನ ಸಾಹಸ-ಜಾಣತನಗಳನ್ನು ಕೊಂಡಾಡಿದರು.

ಬಾಲ್ಯದಿಂದಲೂ ಗೆಲಿಲಿಯೋನಿಗೆ ನಕ್ಷತ್ರಗಳನ್ನು ನೋಡುವುದರಲ್ಲಿ ಬಹಳ ಆಸಕ್ತಿ. ಅದಕ್ಕಾಗಿ ಆ ಒಂದು ದೂರದರ್ಶಕಯಂತ್ರ (ದುರ್ಬೀನು) ವನ್ನು ತಯಾರಿಸಿದನು. ಅದರೊಳಗಿಂದ ಸೂರ್ಯ-ಚಂದ್ರರನ್ನು ಮತ್ತು ಇತರ ಗ್ರಹಗಳನ್ನು ನಿರೀಕ್ಷಿಸಿದನು. ಭೂಮಿಯಲ್ಲಿರುವಂತೆ ಚಂದ್ರನಲ್ಲಿಯೂ ಬೆಟ್ಟ ಬಯಲು, ಕೊಳ್ಳಗಳು- ಇರುವುದನ್ನು ಕಂಡನು. ಸೂರ್ಯನಲ್ಲಿಯೂ ಕಲೆಗಳು ಕಾಣಿಸಿದುವು. ಗೆಲಿಲಿಯೊ ಇದನ್ನು ಜನರಿಗೆ ಹೇಳಿದನು; ಅವರನ್ನು ಕರೆದು ತೊರಿಸಿದನು. ಆದರೆ ಹಳೆಯ ಸಂಪ್ರದಾಯದ ಆ ಜನರು ಸೂರ್ಯ-ಚಂದ್ರರಲ್ಲಿ ಈತನು ಕಲಂಕವನ್ನು ಕಲ್ಪಿಸುತ್ತಾನೆ; ಇವನೊಬ್ಬ ಧರ್ಮದ್ರೋಹಿ! ಎಂದು ಅವನನ್ನು ಹಳಿದರು; ದುರ್ಬೀನಿನಲ್ಲಿಯೆ ದೋಷವಿದೆಯೆಂದೂ ವಾದಿಸಿದರು, ಧರ್ಮಗುರುಗಳೂ ಕೋಪಗೊಂಡರು. ಗ್ರಹ-ತಾರೆಗಳನ್ನು ಯಂತ್ರದಿಂದ ಪರೀಕ್ಷಿಸಿ ನೋಡಲು ಯತ್ನಿಸುವುದು ಧರ್ಮಕ್ಕೆ ಸಲ್ಲದ ಪಾಪಕಾರ್ಯವೆಂದು ಅವರು ಘೋಷಿಸಿ, ಗೆಲಿಲಿಯೋನ ಯಂತ್ರವನ್ನು ಬಹಿಷ್ಕರಿಸಿದರು; ಆದರೆ ದಿನದಿನಕ್ಕೆ ಜನರಿಗೆ ಆ ಯಂತ್ರದಲ್ಲಿ ಆಸಕ್ತಿ ಹೆಚ್ಚುತ್ತ ಹೋಯಿತು. ಯುರೋಪದ ದೊಡ್ಡ ನಗರಗಳಲ್ಲಿಯ ಜನರು ಆ ಯಂತ್ರವನ್ನು ತರಿಸಿಕೊಂಡು ನೋಡಿದರು. ಅದನ್ನು ರಚಿಸಿದ ಗೆಲಿಲಿಯೋನನ್ನು ಗೌರವಿಸಿ ಸತ್ಕರಿಸಿದರು. ಇಂದಿಗೂ ಅದು ''ಗೆಲಿಲಿಯೋನ ದೂರದರ್ಶಕ ಯಂತ್ರ'' ಎಂಬ ಹೆಸರಿನಿಂದ ಬಳಕೆಯಲ್ಲಿದೆ.

ಇಂತಹದೇ ಇನ್ನೊಂದು ಸೋಜಿಗದ ಸಂಗತಿಗಾಗಿ ಗೆಲಿಲಿಯೊ ಬಹಳ ಕಷ್ಟಕ್ಕೀಡಾಗಬೇಕಾಯಿತು. ''ಸೂರ್ಯ ಹುಟ್ಟುತ್ತಾನೆ; ಭೂಮಿಯನ್ನು ಸುತ್ತಿ, ಮುಳುಗಿ ಮತ್ತೆ ಹುಟ್ಟುತ್ತಾನೆ'' ಎಂದು ಕ್ರೈಸ್ತ ಧರ್ಮಗ್ರಂಥ (ಬೈಬಲ್)ದಲ್ಲಿ ಹೇಳಿದೆ. ''ಅದು ತಪ್ಪು! ಸೂರ್ಯ ಹುಟ್ಟುವುದೂ ಇಲ್ಲ; ಮುಳುಗುವುದೂ ಇಲ್ಲ! ತೋರಿಕೆಗೆ ಹಾಗೆ ಕಂಡರೂ ನಿಜವಾಗಿ ತಿರುಗುವುದು ಭೂಮಿಯೇ!'' ಎಂದು ಗೆಲಿಲಿಯೊ ಹೇಳಿದನು. ಇದರಿಂದ ಧರ್ಮಗುರುಗಳು ಇನ್ನೂ ರೇಗಿದರು. ''ಭೂಮಿ ಚಲಿಸುತ್ತಿದೆಯೆಂದು ಪುನಃ ಹೇಳಕೂಡದು!'' ಎಂದು ಗೆಲಿಲಿಯೊನಿಗೆ ಕಟ್ಟಪ್ಪಣೆ ಮಾಡಿದರು.

ಗೆಲಿಲಿಯೊ ಹೆದರಲಿಲ್ಲ. ರೋಮ ಪಟ್ಟಣಕ್ಕೆ ಹೋಗಿ ಧರ್ಮಗುರುಗಳನ್ನು ಕಂಡನು. ತಾನು ನಾಸ್ತಿಕನಲ್ಲ; ಧರ್ಮದಲ್ಲಿಯೂ ಧರ್ಮಗ್ರಂಥದಲ್ಲಿಯೂ ತನಗೆ ನಂಬುಗೆ ಇದೆ; ಆದರೆ ವಿಜ್ಞಾನದ ಒರೆಗಲ್ಲಿಗೆ ನಿಲ್ಲಲಾರದ ಬೈಬಲಿನ ಕೆಲವು ಮಾತುಗಳನ್ನು ಮಾತ್ರ ತಾನು ಒಪ್ಪುವುದಿಲ್ಲವೆಂದು, ಅವನು ತನ್ನ ನಿಜವಾದ ಭೂಮಿಕೆಯನ್ನು ಮನಗಾಣಿಸಿಕೊಡಲು ಯತ್ನಿಸಿದನು. ಅದರಿಂದ ಪ್ರಯೋಜನವಾಗಲಿಲ್ಲ. ಆಗ ಗೆಲಿಲಿಯೊ ತನ್ನ ಸಿದ್ಧಾಂತಗಳನ್ನೂ ಅವುಗಳ ವಿಷಯವಾಗಿ

ನಡೆದ ಸಂಭಾಷಣೆಗಳನ್ನೂ ಪುಸ್ತಕರೂಪವಾಗಿ ಪ್ರಕಟಿಸಿದನು. ಇದರಿಂದ ಧರ್ಮಗುರುಗಳು ಸಂತಾಪಗೊಂಡರು; ಗೆಲಿಲಿಯೊ ಬೈಬಲಿಗೆ ದ್ರೋಹ ಬಗೆದನೆಂದು ಆರೋಪಹೊರಿಸಿ, ಅವನನ್ನು ನ್ಯಾಯವಿಚಾರಣೆಗೆ ಗುರಿಮಾಡಿದರು.

ನ್ಯಾಯಾಲಯವು ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿತು ಆದರೂ ಗೆಲಿಲಿಯೊ ಬಹುಕಾಲ ಕಾರಾಗೃಹದಲ್ಲಿ ಉಳಿಯಬೇಕಾಗಲಿಲ್ಲ. ದೇಶ-ಬಿಟ್ಟು, ಬೇರೆ ಕಡೆಗೆ ಹೋಗಿ ಇರಲು ಒಪ್ಪಿಕೊಂಡು ಬಿಡುಗಡೆ ಹೊಂದಿದನು.

ಕಾಲಾಂತರದಿಂದ ಮರಳಿ ಸ್ವದೇಶಕ್ಕೆ ಬರಲು ಗೆಲಿಲಿಯೊನಿಗೆ ಅಪ್ಪಣೆ ದೊರೆಯಿತು. ಅವನು ತನ್ನ ಊರಿಗೆ ಬಂದು ಮನೆಹಿಡಿದು ಕುಳಿತನು. ಅವನ ಬಾಳು ದುಃಖಮಯವಾಯಿತು. ಆರೋಗ್ಯವು ಕೆಟ್ಟಿತು. ದೇಹವು ಕುಗ್ಗಿಹೋಯಿತು. ಬಡತನವು ಹಿಂಡುತ್ತಿತ್ತು. ಆದರೂ ತಾನು ಸರಿಯೆಂದು ಕಂಡ ಸತ್ಯವನ್ನು ಕೈಬಿಡಡಲಿಲ್ಲ; ಹೊಸ ಶೋಧನಡೆಸುವುದನ್ನು ತ್ಯಜಿಸಲಿಲ್ಲ. ನಕ್ಷತ್ರಗಳನ್ನು ನೋಡಿ ಹೊಸ ವಿಷಯಗಳನ್ನು ಕಂಡುಹಿಡಿಯುತ್ತಲೇ ಇದ್ದನು. ದುರ್ದೈವದಿಂದ ಕ್ರಿ. ಶ. 1637ರಲ್ಲಿ ಅವನ ಕಣ್ಣುಗಳು ಕುರುಡಾಗಿ ಹೋದುವು ನಕ್ಷತ್ರಗಳನ್ನು ನೋಡುವ ಅವನ ಆಸೆ ಅಂದಿಗೆ ಅಳಿಸಿಹೋಯಿತು. ತಾನು ಕಂಡುಹಿಡಿದ ಹೊಸ ಪ್ರಪಂಚವನ್ನು ನೋಡುವ ಭಾಗ್ಯ ತನಗೆ ಇಲ್ಲವಾಯಿತು.

ಕಣ್ಣುಗಳು ಹೋದರೂ, ಗೆಲಿಲಿಯೊ ವಿಜ್ಞಾನದ ವಿಷಯಗಳನ್ನು ಕುರಿತು ವಿಚಾರಮಾಡುತ್ತಿದ್ದನು; ಸಂಶೋಧನೆಗಳನ್ನು ನಡೆಸಿ ಪ್ರಕಟಿಸುತ್ತಿದ್ದನು. ಸತ್ಯಕ್ಕಾಗಿ ಅನೇಕ ಕಷ್ಟಗಳನ್ನು ಅನುಭವಿಸಿದ ಅವನ ಸಾಹಸವನ್ನು ಕಂಡು, ಕಿರಿಯ ವಿಜ್ಞಾನಿಗಳು ಧೈರ್ಯವನ್ನು ತಂದುಕೊಂಡರು; ಹಳೆಯದನ್ನು ಪರೀಕ್ಷಿಸಿ ನೋಡಲು ಆರಂಭಿಸಿದರು. ಅವನ ಸಿದ್ಧಾಂತಗಳನ್ನು ಆಧಾರವಾಗಿಟ್ಟು ಕೊಂಡು ಹೊಸ ಪ್ರಯೋಗಗಳನ್ನು ನಡೆಸಲು ಸ್ಫೂರ್ತಿಪಡೆದರು.


ಅವಸಾನಕಾಲದವರೆಗೂ ಗೆಲಿಲಿಯೊ ಸಂಶೋಧನೆಗಳನ್ನು ನಡೆಸುತ್ತಲೇ ಇದ್ದನು. ಕ್ರಿ.ಶ. 1642ರಲ್ಲಿ ವಿಧಿವಶನಾದನು. ಅವನ ಸಾಹಸಕಾರ್ಯದಿಂದ ವಿಜ್ಞಾನದ ಬೆಳವಣಿಗೆಗೆ ಭದ್ರವಾದ ತಳಹದಿಯು ನಿರ್ಮಿತವಾಯಿತು. ಇಂದು ಎಲ್ಲ ದೇಶಗಳೂ ಅವನನ್ನು, ಜ್ಯೋತಿಷಶಾಸ್ತ್ರದ ಪಿತಾಮಹನೆಂದು ಗೌರವಿಸುತ್ತಿವೆ.

## ಶಬ್ದಗಳ ಅರ್ಥ

ಹೆದರದೆ – ಅಂಜದೆ, ದೀವಿಗೆ – ದೀಪ; ಪ್ರಮಾಣಗ್ರಂಥ – ಆಧಾರ ಗ್ರಂಥ; ನಾಸ್ತಿಕ – ದೇವರನ್ನು ನಂಬದವ, ಸ್ಫೂರ್ತಿ–ಹುಮ್ಮಸ್ಸು

## ಅಭ್ಯಾಸ

**ಕೃತಿ: 1 – ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ: 2 – ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಗೆಲಿಲಿಯೋನ ಬಾಲ್ಯದ ಹವ್ಯಾಸಗಳು ಯಾವುವು?

ಉತ್ತರ : ..........................................................................................................

..........................................................................................................................

2) ಗೆಲಿಲಿಯೊ ಪೀಸಾ ನಗರದ ಗೋಪುರದ ಬಳಿ ಯಾವ ಕೃತಿ ಮಾಡಿದನು?
ಉತ್ತರ : ..........................................................................................................
..........................................................................................................................

3) ಗೆಲಿಲಿಯೊ ರಚಿಸಿದ ಯಂತ್ರ ಯಾವುದು?
ಉತ್ತರ : ..........................................................................................................
..........................................................................................................................

4) ಬೈಬಲ್‌ನಲ್ಲಿ ಹೇಳಿದ ವಿಚಾರ ಯಾವುದು ?
ಉತ್ತರ : ..........................................................................................................
..........................................................................................................................

5) ಧರ್ಮಗುರುಗಳು ಸಂತಾಪಗೊಳ್ಳಲು ಕಾರಣವೇನು ?
ಉತ್ತರ : ..........................................................................................................
..........................................................................................................................

**ಕೃತಿ: 3 – ಬಿಟ್ಟಸ್ಥಳ ತುಂಬಿರಿ.**

1. ಗೆಲಿಲಿಯೊ ಇಟಲಿಯ ................ ಪೀಸಾನಗರದ ಶ್ರಿಮಂತ ಕುಟುಂಬದಲ್ಲಿ ಜನಿಸಿದನು.
2. ............................... ಕಲ್ಪನೆ ತಲೆದೋರಿ ಗಡಿಯಾರ ನಿರ್ಮಾಣವಾಗಲು ಅನುಕೂಲವಾಯಿತು.
3. ಬಾಲ್ಯದಿಂದಲೂ ಗೆಲಿಲಿಯೊನಿಗೆ ............................... ನೋಡುವುದರಲ್ಲಿ ಬಹಳ ಆಸಕ್ತಿ
4. ನಕ್ಷತ್ರಗಳನ್ನು ನೋಡುವ ಆಶೆ ಅಂದಿಗೆ ...............................
5. ಎಲ್ಲಾ ದೇಶಗಳೂ ಅವನನ್ನು ಜ್ಯೋತಿಷಶಾಸ್ತ್ರದ ............................... ನೆಂದು ಗೌರವಿಸುತ್ತಿವೆ.

**ಕೃತಿ: 4 – ಗುಂಪಿಗೆ ಸೇರದ ಶಬ್ದಗಳನ್ನು ಗುರುತಿಸಿರಿ.**

1) 1. ನ್ಯೂಟನ್ 2. ಮಾರ್ಕೊನಿ 3. ಗೆಲಿಲಿಯೊ 4. ಕುವೆಂಪು
ಉತ್ತರ ..........................................................................................................
2) 1. ಮಂಗಳ 2. ಬುಧ 3. ಗುರು 4. ಚಂದ್ರ
ಉತ್ತರ ..........................................................................................................

**ಕೃತಿ: 5 – ಕೆಳಗಿನ ವಾಕ್ಯಗಳಲ್ಲಿ ಗೆರೆ ಹೊಡೆದ ಶಬ್ದದ ವಿರುದ್ಧಾರ್ಥಕ ಶಬ್ದಗಳನ್ನು ಬಳಸಿ ಅರ್ಥಕೆಡದಂತೆ ವಾಕ್ಯ ರಚಿಸಿರಿ.**

1) ಗೆಲಿಲಿಯೊ ಒಳ್ಳೆಯ ಮಾತುಗಳನ್ನೇ ಹೇಳಿದನು.
ಉತ್ತರ : ..........................................................................................................
..........................................................................................................................

2) ರಾತ್ರಿಯಲ್ಲಿ ನಕ್ಷತ್ರಗಳು ಮಿನುಗುತ್ತವೆ.
ಉತ್ತರ : ..........................................................................................................
..........................................................................................................................

**ಕೃತಿ: 6 – ದೂರದರ್ಶಕ ಯಂತ್ರವನ್ನು ತಯಾರಿಸಲು ಪ್ರಯತ್ನಿಸಿರಿ.**





HU826X

# 9. ಪ್ರಜ್ಞಾವಂತ ಪ್ರಜೆ









ನಮ್ಮ ದೇಶದ ಜನತೆ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವುದು ದೇಶದ ಇಂದಿನ ಪ್ರಮುಖ ಅಗತ್ಯಗಳಲ್ಲೊಂದಾಗಿದೆ. ಆಳವಾದ ಸಾಮಾಜಿಕ ಪ್ರಜ್ಞೆ ಮತ್ತು ರಾಷ್ಟ್ರವು ಎದುರಿಸುತ್ತಿರುವ ಸಮಸ್ಯೆಗಳ ಬಗೆಗಿನ ಕಾಳಜಿಯಿಂದ ಮಾತ್ರ ಒಬ್ಬ ವ್ಯಕ್ತಿಯು ಅದರಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವುದು ಸಾಧ್ಯ. ಈ ಎರಡೂ ಲಕ್ಷಣಗಳು ಒಬ್ಬ ಉತ್ತಮ ಪ್ರಜೆಯ ಕುರುಹುಗಳಾಗಿವೆ.

ಆಧುನಿಕ ಸಮಾಜದಲ್ಲಿ ಪ್ರಜೆಯಾದವನು ತನ್ನ ಜವಾಬ್ದಾರಿಯ ಪರಿಕಲ್ಪನೆಯನ್ನು ತಿಳಿದುಕೊಳ್ಳಬೇಕು. ಕರ್ತವ್ಯ ಉತ್ತಮ ವರ್ತನೆ, ನಿಸ್ವಾರ್ಥತೆ ಮತ್ತು ಸಾಮುದಾಯಿಕ ಜೀವನದ ಜವಾಬ್ದಾರಿಗಳನ್ನು ಸ್ವೀಕರಿಸುವುದು ಮುಂತಾದ ವಾಸ್ತವತೆಗಳು ಪ್ರಜ್ಞಾವಂತ ಪ್ರಜೆಯ ಕಲ್ಪನೆಗೆ ಬುನಾದಿಯಾಗಿವೆ.

ಸಮಾಜದಲ್ಲಿ ಕಂಡುಬರುವ ಅನ್ಯಾಯ, ಹಿಂಸೆ, ಭ್ರಷ್ಟಾಚಾರ ಮುಂತಾದ ಪೀಡೆಗಳನ್ನು ನಿವಾರಿಸಲು ಹೆಚ್ಚು ಹೆಚ್ಚು ಜವಾಬ್ದಾರಿಯುತ ಪ್ರಜೆಗಳ ಅಗತ್ಯವಿದೆ. ದೈಹಿಕ ಪ್ರಬುದ್ಧತೆಯೊಂದಿಗೆ ಮಾನಸಿಕ ಪ್ರಬುದ್ಧತೆಯೂ ಜೊತೆಗೂಡಿರಬೇಕು. ಮಾನಸಿಕ ಪ್ರಬುದ್ಧತೆಯು ಸಾಮಾಜಿಕ ಜವಾಬ್ದಾರಿಯ ಭಾವನೆಯನ್ನೂ ಒಳಗೊಂಡಿದೆ. ನಮ್ಮಲ್ಲಿರುವ ಅಸಂಖ್ಯಾತ ಸಮಸ್ಯೆಗಳನ್ನು ಪರಿಹರಿಸಲು ಸಾಕಷ್ಟು ಕಾಲಬೇಕು. ನಾವು ಇದಕ್ಕಾಗಿ ಪರಿಶ್ರಮ ಹಾಗೂ ದಕ್ಷತೆಗಳಿಂದ ಕೆಲಸ ಮಾಡಬೇಕು. ಉತ್ಸಾಹದಿಂದ ಒಂದು ತಂಡವಾಗಿ ನಾವು ಕೆಲಸ ಮಾಡಿದರೆ ರಾಷ್ಟ್ರೀಯ ಅಭಿವೃದ್ಧಿಯ ಗುರಿಗಳನ್ನು ಸಾಧಿಸಬಹುದು. "ನೀನು ನಿನ್ನ ಕೆಲಸದಲ್ಲಿ ಸಂತೋಷವನ್ನು ಕಾಣದಿದ್ದರೆ ಸಂತೋಷವೆಂದರೇನೆಂದು ಎಂದಿಗೂ ಅರಿಯಲಾರೆ" ಎಂದು ಅಲ್ಬರ್ಟ್ ಹಬ್ಬರ್ಡ್ ಹೇಳುತ್ತಾನೆ. ಬೇಸರ, ದುರ್ಗುಣ ಮತ್ತು ದಾರಿದ್ರ್ಯ ಎಂಬ ಮೂರು ಪೀಡೆಗಳನ್ನು ಕೆಲಸವು ತೊಲಗಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ಪ್ರಜೆ ಎಂಬುವವನು ಜಾಗೃತ ಪ್ರಜೆ ಆಗಿರಲೇಬೇಕು. ಅದಕ್ಕೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳ ಬಗ್ಗೆ ಆಳವಾದ ತಿಳಿವಳಿಕೆ ಇರಬೇಕಾದ ಅಗತ್ಯವಿದೆ. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಶ್ರದ್ಧೆಯಿಂದ ಓದುವ ಮೂಲಕ ಇದನ್ನು ಪಡೆಯಬಹುದು. ರೇಡಿಯೋ ಮತ್ತು ದೂರದರ್ಶನಗಳೂ ಸಹ ಉತ್ತಮ ಮಾಹಿತಿಯ ಮೂಲಗಳಾಗಿವೆ.

ಸಾರ್ವಜನಿಕ ಸೇವೆ ಮತ್ತು ಮಾನವೀಯ ಕಾಳಜಿ ಎಂಬ ಎರಡು ಗುಣಗಳು ಪ್ರತಿಯೊಬ್ಬ ಉತ್ತಮ ಪ್ರಜೆಯಲ್ಲಿಯೂ ಸ್ವಯಂ ವ್ಯಕ್ತವಾಗಬೇಕು. ರಸ್ತೆಯಲ್ಲಿ ನರಳುತ್ತಿರುವ ವ್ಯಕ್ತಿಯನ್ನು ಕಂಡಾಗ ಸಹಜವಾಗಿಯೇ ನಿಮ್ಮ ಮನಸ್ಸಿನಲ್ಲಿ ಬರಬೇಕಾದ ತಕ್ಷಣದ ಪ್ರತಿಕ್ರಿಯೆ ನೋಡಿ, ''ನಿಮಗೇನು ತೊಂದರೆ? ನಾನು ಯಾವ ರೀತಿ ನಿಮಗೆ ನೆರವಾಗಬಲ್ಲೆ?'' ಅದು ಬಿಟ್ಟು ಅಂತಹ ಸಂದರ್ಭಗಳಲ್ಲಿ ಏನು ಸಂಬಂಧವಿಲ್ಲದಂತೆ, ಉದಾಸೀನತೆಯಿಂದ ನೀವು ಮುಂದೆ ಹೋದರೆ ನಿಮ್ಮಲ್ಲಿ ಪ್ರಜಾಪ್ರಜ್ಞೆಯ ಅಭಾವವಿದೆ ಎನ್ನಬೇಕಾಗುತ್ತದೆ. ''ನಾನು ತೊಂದರೆ ತೆಗೆದುಕೊಳ್ಳಲು ಸಿದ್ಧನಿರುವೆ ಮತ್ತು ನನ್ನ ಸಹಜೀವಿಗಳ ಸೇವೆಯಲ್ಲಿ ಏನೇ ಬಂದರೂ ಎದುರಿಸುತ್ತೇನೆ'' – ಮಾನವೀಯ ಪ್ರಚೋದನೆ, ಕರುಣೆಗಳು ಒಬ್ಬ ಒಳ್ಳೆಯ ಪ್ರಜೆಯಲ್ಲಿ ಕ್ರಿಯಾಶೀಲವಾಗಿ ಪ್ರಕಟಗೊಳ್ಳುವ ರೀತಿ ಇದು.

ಅಗತ್ಯವಿರುವ ಜನರಿಗೆ ಅರ್ಥಪೂರ್ಣವಾದ ಸಹಾಯವನ್ನು ಮಾಡುವ ಕಾರ್ಯವೇ ಸೇವೆ. ಸಹಾಯದ ಅಗತ್ಯವಿರುವ ಸನ್ನಿವೇಶಗಳನ್ನು ಸರಿಯಾಗಿ ಗ್ರಹಿಸಿದಾಗ ಮಾತ್ರ ಅರ್ಥಪೂರ್ಣ ಸೇವೆ ಸಾಧ್ಯ. ಯಾವ ಫಲವನ್ನೂ ಅಪೇಕ್ಷಿಸದೆ ನಿಸ್ವಾರ್ಥತೆಯಿಂದ ಸಹಾಯ ಮಾಡಬೇಕು. ಆಗ ಮಾತ್ರ ಆ ಸಹಾಯವು ಸೇವೆಯಾಗುವುದು. ಹಣ ಅಥವಾ ವಸ್ತುಗಳನ್ನು ಪ್ರತಿಫಲವಾಗಿ ಪಡೆಯುವ ಅಪೇಕ್ಷೆಯಿಂದ ಮಾಡಿದ ಸಹಾಯವು ನಮ್ಮ ಅಹಂಕಾರವನ್ನು ಪುಷ್ಟಿಗೊಳಿಸುತ್ತದೆ. ನಮ್ಮ ವ್ಯಕ್ತಿತ್ವದ ಬೆಳವಣಿಗೆಗೆ ಅದು ಯಾವ ಕೊಡುಗೆಯನ್ನೂ ನೀಡುವುದಿಲ್ಲ. ''ತ್ಯಾಗವಿಲ್ಲದ ಸೇವೆಯು ಭಕ್ತಿಯಿಲ್ಲದ ಪ್ರಾರ್ಥನೆಯಂತೆ'' ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಬೇರೆಯವರಿಗೆ ಒಳ್ಳೆಯದನ್ನು ಮಾಡುವುದು ಒಂದು ಕರ್ತವ್ಯವಲ್ಲ; ಅದೊಂದು ಆನಂದ. ಏಕೆಂದರೆ ಅದು ನಮ್ಮ ಸ್ವಾಸ್ಥ್ಯ ಮತ್ತು ಶಾಂತಿಯನ್ನು ವೃದ್ಧಿ ಮಾಡುವುದು.

ಬೇರೆಯವರಿಗೆ ಕೊಡಬಹುದಾದ ಅಮೂಲ್ಯವಾದ ಕೊಡುಗೆಗಳು ಕೇವಲ ಭೌತಿಕ ವಸ್ತುಗಳಾಗಿರಬೇಕಿಲ್ಲ. ಪ್ರೀತಿ, ಸ್ಫೂರ್ತಿ, ಕರುಣೆ, ಪ್ರೋತ್ಸಾಹ, ಕ್ಷಮೆ, ಉತ್ತಮ ಆಲೋಚನೆಗಳು ಮತ್ತು ಆದರ್ಶಗಳ ಕಾಣಿಕೆಯನ್ನು ನೀವು ನೀಡಬಹುದು. ಇತರರ ಕಷ್ಟಸಂಕಟಗಳಿಗೆ ನೀವು ಸಹಾನುಭೂತಿ ವ್ಯಕ್ತಪಡಿಸಬೇಕು. ಅವರ ದುಃಖವನ್ನು ಪರಿಹರಿಸಲು ಸರಿಯಾದ ಮಾರ್ಗಗಳನ್ನು ಪತ್ತೆ ಮಾಡಬೇಕು. ''ಯಾರು ಇತರರಿಗಾಗಿ ಜೀವಿಸುವರೋ ಅವರೇ ಬಾಳುವವರು, ಉಳಿದವರು ಕೇವಲ ಜೀವಚ್ಛವ'' ಎಂದರು ಸ್ವಾಮಿ ವಿವೇಕಾನಂದರು. ನೀವು ಸಂಪೂರ್ಣ ನಿಸ್ವಾರ್ಥಿಗಳಾಗಿರಬೇಕು. ನಿಮ್ಮ ಸಾಮಾಜಿಕ ಸೇವೆಯ ಹಿಂದೆ ವೈಯಕ್ತಿಕ ಲಾಭ ಅಥವಾ ಅಧಿಕಾರದ ಆಸೆಯಿರಬಾರದು.

ಒಳ್ಳೆಯ ಪ್ರಜೆಗಳಾಗಿ ನೀವು ನಿಮ್ಮ ನಗರ ಅಥವಾ ಹಳ್ಳಿಯ ಮೇಲೆ ಪ್ರೀತಿ ಬೆಳೆಸಿಕೊಳ್ಳಬೇಕು. ಅದನ್ನು ಬೇರೆ ಯಾವುದೇ ಸ್ಥಳಕ್ಕಿಂತಲೂ ಹೆಚ್ಚು ಸ್ವಚ್ಛ, ಆರೋಗ್ಯಕರ ಮತ್ತು ಸುಂದರವಾಗಿರುವಂತೆ ಮಾಡಲು ಪ್ರಯತ್ನಿಸಬೇಕು. ನಿಮ್ಮ ವಿರಾಮ ವೇಳೆಯಲ್ಲಿ ಸ್ವಲ್ಪ ಕಾಲವನ್ನು, ರಸ್ತೆಯಲ್ಲಿ ಬೇಜವಾಬ್ದಾರಿಯಿಂದ ಜನರು ಎಸೆದಿರುವ ಪ್ಲಾಸ್ಟಿಕ್ ಚೀಲಗಳು, ಕಾಗದದ ಚೂರುಗಳು, ಹಣ್ಣಿನ ಸಿಪ್ಪೆಗಳನ್ನು ಸಂಗ್ರಹಿಸಿ ಕಸದ ಡಬ್ಬಿಗೆ ಹಾಕಿದರೆ ಪರಿಸರ ಮತ್ತು ಸ್ಥಳದ ವಿಚಾರದಲ್ಲಿ ನಿಮಗೆ ಅಭಿಮಾನವಿದೆ ಎಂದರ್ಥ.

ಬಡಮಕ್ಕಳ ಶಿಕ್ಷಣಕ್ಕಾಗಿ ಸ್ವಲ್ಪ ಹಣವನ್ನು ಖರ್ಚು ಮಾಡುವಂತೆ ನಿಮ್ಮ ಸ್ನೇಹಿತರ ಮನವೊಲಿಸಲು ಯತ್ನಿಸಿದರೆ ಅಥವಾ ಶಿಸ್ತಿನಿಂದ ಜೀವಿಸುವಂತೆ ಪ್ರಭಾವ ಬೀರಿದರೆ ಅಥವಾ ಅವರ ನಡವಳಿಕೆಯನ್ನು ತಿದ್ದಿಕೊಳ್ಳುವಂತೆ ಮಾಡಿದರೆ ನಿಮ್ಮ ಪರಿಸರದ ಸಮಸ್ಯೆಗಳ ಬಗ್ಗೆ ನಿಮಗೆ ಸಾಕಷ್ಟು ಆಸಕ್ತಿಯಿದೆ ಎಂದರ್ಥ. ನಿಮ್ಮ ಮನೆಯ ಅಂಗಳ ಅಥವಾ ಹಿತ್ತಲಲ್ಲಿ ತೋಟಗಾರಿಕೆ ಮಾಡಿ ಆ ಸ್ಥಳವನ್ನು ಸುಂದರವಾಗುವಂತೆ ಹದಗೊಳಿಸಿದರೆ ನಿಮ್ಮ ಪರಿಸರವನ್ನು ಸೌಂದರ್ಯದಿಂದ ಸಮೃದ್ಧಗೊಳಿಸಲು ಕಾಣಿಕೆ ನೀಡಿದಂತಾಗುವುದು.

ಒಳ್ಳೆಯ ಪ್ರಜೆಗಳಾಗಿ ಇತರರ ಜೀವನವನ್ನು ಸಂತೋಷಕರವನ್ನಾಗಿ ಮಾಡಲು ನಾವು ಶ್ರಮಿಸಬೇಕು. ಜಗತ್ತಿನಿಂದ ನಮಗೆ ಅತ್ಯಗತ್ಯವಿರುವುದನ್ನು ಮಾತ್ರ ತೆಗೆದುಕೊಂಡು ನಮ್ಮ ಸಾಮರ್ಥ್ಯವಿರುವಷ್ಟೂ ಕೊಡುಗೆಗಳನ್ನು ಜಗತ್ತಿಗೆ ನೀಡಬೇಕು. ನಿಮ್ಮನ್ನು ವಿಶ್ವಕುಟುಂಬದ ಅಥವಾ ಸಮುದಾಯದ ಸದಸ್ಯರಾಗಿ ಭಾವಿಸಿ ಅದಕ್ಕನುಸಾರವಾಗಿ ವರ್ತಿಸಬೇಕು.

ಸ್ವಾವಲಂಬಿಗಳಾಗಿರಲು ವಿದೇಶಗಳ ಸಾಧನೆಗಳನ್ನು ಅಧ್ಯಯನ ಮಾಡಿ ಕಲಿಯಬೇಕು. ಐದು ವರ್ಷಕ್ಕೊಮ್ಮೆ ಚುನಾವಣೆಯಲ್ಲಿ ಮತದಾನ ಮಾಡುವುದರಲ್ಲಿ ನಮ್ಮ ಜವಾಬ್ದಾರಿಯು ಮುಗಿಯಲಿಲ್ಲ. ನಿಜವಾದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಚೇತನವೂ, ಮೌಲ್ಯವೂ ರಾಷ್ಟ್ರದಲ್ಲಿ ಪ್ರವೇಶಿಸಿದರೆ ಮಾತ್ರ ದೇಶವು ಬಲಶಾಲಿಯಾಗುವುದು.

## ಶಬ್ದಗಳ ಅರ್ಥ

ಕುರುಹು – ಗುರುತು;      ಆಧುನಿಕ – ಇಂದಿನ ;      ಜೀವಚ್ಛವ – ಇದ್ದೂ ಇಲ್ಲದಂತೆ;

## ಅಭ್ಯಾಸ

**ಕೃತಿ: 1   ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಪ್ರಜೆಯಾದವನ ಜವಾಬ್ದಾರಿಯ ಪರಿಕಲ್ಪನೆಗಳಾವವು?

ಉತ್ತರ : ..................................................................................................

..........................................................................................................

..........................................................................................................

2. ರಾಷ್ಟ್ರೀಯ ಅಭಿವೃದ್ಧಿಯ ಗುರಿಯನ್ನು ಯಾವಾಗ ಸಾಧಿಸಬಹುದು?

ಉತ್ತರ : ..................................................................................................

..........................................................................................................

..........................................................................................................

3. ಸೇವೆ ಎಂದರೇನು?

ಉತ್ತರ : ..................................................................................................

..........................................................................................................

..........................................................................................................


4. ಪರಿಸರದ ವಿಷಯದಲ್ಲಿ ನಾವು ಹೇಗಿರಬೇಕು?

ಉತ್ತರ : ..................................................................................................

..........................................................................................................

..........................................................................................................

**ಕೃತಿ: 2   ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



**ಕೃತಿ: 3 ರಸ್ತೆಯಲ್ಲಿ ನರಳುತ್ತಿರುವ ವ್ಯಕ್ತಿಯನ್ನು ಕಂಡಾಗ ನಿಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನು ಬರೆಯಿರಿ.**

**ಕೃತಿ: 4 ಬಿಟ್ಟ ಸ್ಥಳ ತುಂಬಿರಿ.**

1) ಆಧುನಿಕ ಸಮಾಜದಲ್ಲಿ ಪ್ರಜೆಯಾದವನು ತನ್ನ ............... ಪರಿಕಲ್ಪನೆಯನ್ನು ತಿಳಿದುಕೊಳ್ಳಬೇಕು.

2) ...................... ಸೇವೆಯು ಭಕ್ತಿಯಿಲ್ಲದ ಪ್ರಾರ್ಥನೆಯಂತೆ

3) ಸಾಮಾಜಿಕ ಸೇವೆಯಹಿಂದೆ...................... ಅಥವಾ......................ಇರಬಾರದು

4) ಒಳ್ಳೆಯ ಪ್ರಜೆಗಳಾಗಿ ಇತರರ ಜೀವನವನ್ನು ...........................ಮಾಡಲು ನಾವು ಶ್ರಮಿಸಬೇಕು.

5) ..................... ಗಳಾಗಿರಲು ವಿದೇಶಗಳ ಸಾಧನೆಗಳನ್ನು ಅಧ್ಯಯನಮಾಡಿ ಕಲಿಯಬೇಕು

**ಕೃತಿ: 5 ವೈಶಾಲಿಯ ಸಮಸ್ಯೆಗೆ ಪರಿಹಾರ ಹೇಳಿರಿ.**

ಉತ್ತರ

ನಾನು ಅರ್ಥಪೂರ್ಣ ಸೇವೆಯನ್ನು ಹೇಗೆ ಮಾಡಬಹುದು.

**ಕೃತಿ: 6 ಪ್ರವಾಹ ಪರಿಸ್ಥಿತಿ ನಿರ್ಮಾಣವಾಗುವ ಸಂದರ್ಭದಲ್ಲಿ ಪ್ರಜ್ಞಾವಂತ ಪ್ರಜೆಯಾಗಿ ನೀವೇನು ಮಾಡಬಲ್ಲಿರಿ. ಮನೋಗತವನ್ನು ವ್ಯಕ್ತಪಡಿಸಿರಿ.**

ಉತ್ತರ : ..................................................................................................................

..........................................................................................................................

..........................................................................................................................

**ಕೃತಿ: 7 ಪ್ರಜ್ಞಾವಂತ ಪ್ರಜೆಯಾಗಿ ಬೇಠಿಬಚಾವೊ ಉಪಕ್ರಮವನ್ನು ಹೇಗೆ ಪ್ರಸಾರ ಮಾಡಬಲ್ಲಿ ಎಂಬುದನ್ನು 10 ಸಾಲುಗಳಲ್ಲಿ ಬರೆಯಿರಿ.**

ಉತ್ತರ : ..................................................................................................................

..........................................................................................................................

..........................................................................................................................

**ಕೃತಿ: 8 ಕೆಳಗಿನ ಅಂಶಗಳ ಆಧಾರದಿಂದ ಕಥೆ ಪೂರ್ಣ ಮಾಡಿರಿ.**


ಒಂದು ಕಾಡು..... ಕೊಳದಲ್ಲಿ ಆಮೆ ಚಿಗರೆ ಇಲಿ ಗೆಳೆಯರು..... ಬೇಟೆಗಾರ ಆಮೆಯನ್ನು ಹಿಡಿಯುವುದು......... ಗೋಣಿಚೀಲದಲ್ಲಿ ಹಾಕುವುದು.......... ಗೆಳೆಯರು. ಆಮೆಯನ್ನು ಉಳಿಸಲು ಉಪಾಯ.................ಚಿಗರೆಯು ಬೇಡನ ಮುಂದೆ ಮುಂದೆ ಓಡುವುದು.................... ಬೇಟೆಗಾರ ಆಮೆಯನ್ನು ಅಲ್ಲಿಯೇ ಬಿಟ್ಟು ಬೆನ್ನುಹತ್ತುವನು. ಇತ್ತ ಇಲಿ ಗೋಣಿಚೀಲ ಕತ್ತರಿಸುವಿಕೆ......... ಆಮೆಯನ್ನು ಮುಕ್ತಗೊಳಿಸುವುದು ಆಮೆ ಕೊಳಸೇರುವುದು.............. ಚಿಗರೆ ಓಡಿಹೋಗುವುದು.................. ಬೇಟೆಗಾರ ನಿರಾಶೆ ಗೆಳೆಯರಾಗಿ ಕೂಡಿ ಬಾಳುವಿಕೆ.





MUGX8K

# 10. ರೆಡ್ ಕ್ರಾಸ್ ಸಂಸ್ಥೆ



ಕ್ರಿ. ಶ. 1859ನೆ ಇಸವಿಯ ಜೂನ್ ತಿಂಗಳಿನ ಒಂದು ಮುಂಜಾನೆನೋಟ ಇಟಲಿಯ 'ಸೊಲ್‌ಫೆರಿನೋದ' ಪ್ರಾಂತ್ಯಕ್ಕೆ ಅದೊಂದು ಕರಾಳ ದಿನ, ಉದಿಸಿ ಬಂದ ಬಂದ ಸೂರ್ಯನು ಸೋಲ್‌ಫೆರಿನೋದ ನೆಲವನ್ನೇನೊ ಬೆಳಗಿದನು. ಆದರೆ ಅಲ್ಲಿರುವವರ ಮನವನ್ನು ಬೆಳಗಿಸಲಿಲ್ಲ. ಆ ಜನರ ಹೃದಯದಲ್ಲಿ ದುಃಖದ ಗಾಢಾಂಧಕಾರ ಕವಿದಿತ್ತು. ಅಸಹನೀಯ ವಾದ ದುರಂತ ಚಿತ್ರವು ಅವರ ಚಿತ್ತ ಭಿತ್ತಿಯಲ್ಲಿ ಮನೆ ಮಾಡಿತ್ತು.

ಈ ಕಠೋರ ದುಃಖದಲ್ಲಿ ಭಾಗಿಯಾದವರಲ್ಲಿ, ಹೆನ್ರಿಡ್ಯೂನಾನ್ ಒಬ್ಬನು ಅವನು ರಾತ್ರಿಯಿಡೀ ನಿದ್ರೆ ಮಾಡಿರಲಿಲ್ಲ. ಯುದ್ಧ ಭೂಮಿಯ ನಾರಕ ದೃಶ್ಯವು ಅವನ ಕಣ್ಣಂಚಿನಲ್ಲಿ ಸುಳಿದಾಡತ್ತಿತ್ತು. ಆಸ್ಟ್ರಿಯಾದವರಿಗೂ ಫ್ರೆಂಚ್ ಹಾಗೂ ಇಟಲಿಯವರಿಗೂ ಹಿಂದಿನ ದಿನ ಆಯುದ್ಧ ಭೂಮಿಯಲ್ಲಿ ಭೀಕರ ಯುದ್ಧ ನಡೆದಿತ್ತು.

ಕದನದಲ್ಲಿ ಸಾವಿರಾರು ಜನರು ಅಸು ನೀಗಿದ್ದರು. ಅವರ ಕಳೇಬರಗಳು ಅಲ್ಲಿ ರಾಶಿಯಾಗಿ ಬಿದ್ದಿದ್ದವು ಕಳೇಬರಗಳ ನಡುವೆ ಬಿದ್ದುಕೊಂಡು ನರಳುತ್ತಿರುವವರ ಸಂಖ್ಯೆ ಅದಕ್ಕಿಂತಲೂ ಅಧಿಕ. ಕೆಲವರು ಸಾವಿನ ದುಃಸ್ವಪ್ನದಲ್ಲಿ ಸಂಕಟ ಪಡುತ್ತಿದ್ದರೆ ಕೆಲವರು ಬದುಕಿನ ಸುಂದರ ದಿನಗಳಿಗಾಗಿ ಹಂಬಲಿಸುತ್ತಿದ್ದರು. ಸುಮಾರು ನಲ್ವತ್ತು ಸಾವಿರಕ್ಕೂ ಮಿಕ್ಕಿದ ಗಾಯಾಳುಗಳು ಅಲ್ಲಿ ಬಿದ್ದಿದ್ದರರು. ಅವರ ಕಣ್ಣುಗಳು ಯಾರನ್ನೊ ನಿರೀಕ್ಷಿಸುತ್ತಿದ್ದವು. ಅವರ ಬಾಯಿಗಳು ಏನನ್ನೋ ಬಯಸುತ್ತಿದ್ದುವು.

ಬಾಳಿನ ಅಸಹಾಯಕ ಸ್ಥಿತಿಯಲ್ಲಿ ತೋಳಲಾಡುತ್ತಿದ್ದ ಬಂಧುಗಳ ಆಕಾಂಕ್ಷೆಯನ್ನು ಡ್ಯೂನಾನ್ ಅರಿತನು. ಅವರ ಹೃದಯದ ಒಳಹೊಕ್ಕು ಅವರ ದುಃಖದ ಆಳವನ್ನು ಅವನು ಇಣಿಕಿ ನೋಡಿದನು. ಓಹ್! ಎಂತಹ ಭೀಕರ ಗಳಿಗೆಗಳು.....!

ಹೆನ್ರಿ ಡ್ಯೂನಾನ್ ಬರಿಯ ಯೋಚನೆಯಲ್ಲಿ ಮುಳುಗಿರಲಿಲ್ಲ. ಅವನ ಮನಸ್ಸು ಯಾವುದೋ ಒಂದು ಯೋಜನೆಯನ್ನು ಮೇಲುಕಾಡುತ್ತಿತ್ತು, ಬೆಳಕು ಹರಿಯುತ್ತಲೆ ಅವನು ನೆರೆಹೊರೆಯ ಅನೇಕರನ್ನು ಸಂಧಿಸಿದನು. ಮುಖ್ಯವಾಗಿ ಕೆಲವು ಬ್ರಿಟಿಷ್ ಪ್ರವಾಸಿಗಳನ್ನೂ, ಒಬ್ಬ ಇಟಲಿಯ ಗುರುವನ್ನೂ, ಮೂವರು ಆಸ್ಟ್ರಿಯದ ವೈದ್ಯರನ್ನೂ ಒಟ್ಟುಗೂಡಿಸಿ ಸ್ವಯಂಸೇವಕ ತಂಡವೊಂದನ್ನು ಸಿದ್ಧಗೊಳಿಸಿದನು ಗಾಯಗೊಂಡವರ ಶುಶ್ರೂಷೆಗೆ ಬೇಕಾದ ಸಾಮಾಗ್ರಿಗಳನ್ನು ಸಂಗ್ರಹಿಸಿದನು. ಬಟ್ಟೆಯ ಪಟ್ಟಿಗಳನ್ನು ಔಷಧಿಗಳು ಅಹಾರ ಪಾನೀಯಗಳು ಹಾಗೂ ಇನ್ನಿತರ ಅವಶ್ಯಕ ವಸ್ತುಗಳನ್ನೂ ಹೊತ್ತು ಕೊಂಡು ಸ್ವಯಂ ಸೇವಕ ದಳದೊಂದಿಗೆ ರಣಾಂಗಣಕ್ಕೆ ಧಾವಿಸಿದನು.

ಸ್ವಯಂಸೇವಕರು ಗಾಯಾಳುಗಳಿಗೆ ಮದ್ದನ್ನು ಹಚ್ಚಿ ಬಟ್ಟೆಯ ಪಟ್ಟಿಗಳನ್ನು ಸುತ್ತಿದರು. ಬಾಯಾರಿದವರಿಗೆ ಕುಡಿಯಲು ಪಾನೀಯವನ್ನು ಒದಗಿಸಿದರು. ಹಸಿದವರಿಗೆ ಆಹಾರವನ್ನು ತಿನ್ನಿಸಿದರು. ನೋವಿನಿಂದ ನರಳುತ್ತಿದ್ದವರಿಗೆ ತಕ್ಕ ಔಷಧಿಯನ್ನು ಕುಡಿಸಿದರು. ಸ್ಮೃತಿಯಿಲ್ಲದವರಿಗೆ ಸಮುಚಿತವಾದ ಶುಶ್ರೂಷೆ ನೀಡಿ ಅವರು ಚೇತರಿಸುವಂತೆ ಮಾಡಿದರು. ತಮ್ಮ ಕಣ್ಣ ಮುಂದೆ ಆರ್ತರಾಗಿ ಬಿದ್ದವರು ಆಸ್ಟ್ರಿಯದವರೋ ಫ್ರೆಂಚರೋ ಎಂಬ ವಿಮರ್ಶೆಯನ್ನು ಮಾಡದೆ ಅವರನ್ನು ಮಾನವರಂತೆ ಕಂಡರು. ಸಾವಿನ ದವಡೆಯಲ್ಲಿ ಸಿಕ್ಕಿದವರನ್ನು ಶತ್ರುಮಿತ್ರರೆಂಬ ಭೇದವನ್ನಿಡದೆ ಸಹೋದರರಂತೆ ಉಪಚರಿಸಿದರು, ಅವರ ಚಿಕಿತ್ಸೆ ನೂರಾರು ಜನರಿಗೆ ಜೀವದಾನ ಮಾಡಿತು. ಸಾವಿರಾರು ಮಂದಿ ಹೆನ್ರಿಡ್ಯೂನಾನನ ಉಪಕಾರವನ್ನು ಸ್ಮರಿಸಿದರು.

ಅಂದು ರೂಪಿಸಿದ ಈ ಸಂಘಟನೆಯನ್ನು ಡ್ಯೂನಾನ್ ಕೈಬಿಡಲಿಲ್ಲ. ಪರಿಶ್ರಮದ ಸಫಲತೆಯು ಅವನ ಬಾಳಿನ ಪಥವನ್ನೆ ಬದಲಿಸಿತು ಎಲ್ಲ ಊರಲ್ಲೂ ಇಂಥದೊಂದು ಹೆಗ್ಗುರಿ ಎಂದು ಅವನು ಸಾರಿದನು. ಅಂದಿನಿಂದ ಶಾಶ್ವತವಾದ ಸ್ವಯಂಸೇವಕದಳವೊಂದನ್ನು ಅವನು ಸಂಘಟಿಸಿದನು. ಅಪತ್ತಿನಲ್ಲಿ ಸಿಲುಕಿದವರು ಎಂಥವರೇ ಇರಲಿ. ಅವರಿಗೆ ಶುಶ್ರೂಷೆ ನೀಡುವುದು ಆ ದಳದ ಲಕ್ಷ್ಯವಾಗಿತ್ತು. ಹೀಗೆ ಸೋಲ್ ಫೆರಿನೋದ ಸಮರ ಭೂಮಿಯಲ್ಲಿ ಡ್ಯೂನಾನನು ಭಾವೀ ರೆಡ್‌ಕ್ರಾಸ್ ಸಂಸ್ಥೆಯ ಮೂಲಭೂತ ತತ್ವಗಳಿಗೆ ಅಸ್ತಿವಾರ ಹಾಕಿದನು ಎಂದು ಹೇಳಬಹುದು. ಅದೇ ವರ್ಷ ಅವನು ತನ್ನೆಲ್ಲ ಅನುಭವಗಳನ್ನೂ ದಾರುಣ ಸ್ಮರಣೆಗಳನ್ನೂ ಒಟ್ಟುಗೂಡಿಸಿ 'ದಿ ಮೆಮರಿ ಆಫ್ ಸೋಲ್‌ಫೆರಿನೋ' ಎಂಬ ಗ್ರಂಥವನು ಪ್ರಕಟಿಸಿದನು

ಡ್ಯೂನಾನನ ಈ ಗ್ರಂಥವು ವಿಶ್ವದ ಅನೇಕ ಬುದ್ಧಿ ಜೀವಿಗಳ ಮೇಲೆ ಪ್ರಭಾವವನ್ನು ಬೀರಿತು. ಅದರ ಫಲವಾಗಿ ನಾಲ್ಕು ವರ್ಷಗಳ ಬಳಿಕ ಹದಿನಾರು ರಾಷ್ಟ್ರಗಳ ಪ್ರಾಂತದಿಂದ ಜೀನೆವಾದಲ್ಲೊಂದು ಸಮ್ಮೇಳನ ನಡೆಯಿತು. ಸಮ್ಮೇಳನದಲ್ಲಿ ಯುದ್ಧಪೀಡಿತರಾದ ಹಾಗೂ ಅಸಹಾಯರಾದ ಸೈನಿಕರ ಯೋಗಕ್ಷೇಮವನ್ನು ಚರ್ಚಿಸಲಾಯಿತು. ಇದರ ಫಲವಾಗಿ ಎಲ್ಲ ರಾಷ್ಟ್ರಗಳಲ್ಲೂ ಆರ್ತರ ಶುಶ್ರೂಷೆಗಾಗಿ ಸಮರ್ಥವಾದ. ಸ್ವಯಂಸೇವಕರದಳವನ್ನು ನಿರ್ಮಿಸಬೇಕೆಂಬ ನಿರ್ಣಯ ಕೈಗೊಳ್ಳಲಾಯಿತು. ಈ ಸ್ವಯಂಸೇವಕರದಳವೇ ''ರೆಡ್ ಕ್ರಾಸ್ ಸಂಸ್ಥೆ'' ಎಂಬ ಹೆಸರನ್ನು ಹೊಂದಿತು.

ರೆಡ್‌ಕ್ರಾಸ್ ಸಂಸ್ಥೆಯ ಅಂತಾರಾಷ್ಟ್ರೀಯ ಕಾರ್ಯಾಲಯ ಜಿನೇವಾದಲ್ಲಿದೆ. ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯು ಯಾವುದೇ ರೀತಿ ಯೂಷ್ಟ್ರೀಯ, ಜಾತೀಯ ಆರ್ಥಿಕ ಹಾಗೂ ರಾಜಕೀಯ ಭೇದಭಾವವಿಲ್ಲದೆ ಯುದ್ಧ ಸಂತ್ರಸ್ತರಾದ ಸೈನಿಕರಿಗೆ ಆವಶ್ಯಕವಾದ ಸಹಾಯವನ್ನು ನೀಡುವ ತತ್ವಗಳನ್ನೊಳಗೊಂಡಿದೆ.

ರೆಡ್‌ಕ್ರಾಸಿನ ರಾಷ್ಟ್ರೀಯ ಸಂಸ್ಥೆಗಳು ಆಯಾ ರಾಷ್ಟ್ರದ ಸ್ವಂತ ಆಡಳಿತೆಗೆ ಒಳಪಟ್ಟಿರುತ್ತವೆ. ಅವು ಸಂಯುಕ್ತ ರೆಡ್‌ಕ್ರಾಸ್ ಸಂಘದ ಸದಸ್ಯ ಸಂಸ್ಥೆಗಳೆಂದು ಪರಿಗಣಿಸಲ್ಪಡುತ್ತವೆ. ರೆಡ್ ಕ್ರಾಸ್ ಸಂಸ್ಥೆಯ ಕಾರ್ಯಕಲಾಪಗಳು ಸಮರಕಾಲಕ್ಕೆ ಮಾತ್ರ ಸೀಮಿತವಾದವುಗಳಲ್ಲ. ಅವು ಶಾಂತಿಕಾಲದ ದಿನಗಳಲ್ಲೂ ಜನೋಪಯೋಗಿಯಾಗಿವೆ. ಭೂಕಂಪ, ಬೆಂಕಿಯ ಅನಾಹುತ, ನೆರೆಯ ಉಪಟಳ, ಸಾಂಕ್ರಾಮಿಕ ರೋಗಗಳ ಹಾವಳಿ ಮುಂತಾದ ಸಂಕಷ್ಟದ ಸನ್ನಿವೇಶಗಳಲ್ಲಿ ರೆಡ್‌ಕ್ರಾಸ್ ಸಂಸ್ಥೆಯು ಮಾನವ ಸಮುದಾಯದ ಸೇವೆಗಾಗಿ ಸರ್ವದಾ ಸಿದ್ಧವಿರುತ್ತದೆ. ಆದರೆ ಅದರ ನಿಯಮ ವಿಧಾನಗಳು ಮಾತ್ರ ಆಯಾ ರಾಷ್ಟ್ರದ ಸೌಕರ್ಯಗಳಿಗೆ ಅನುಗುಣವಾಗಿ ಬೇರೆ ಬೇರೆ ರೀತಿಯಲ್ಲಿರಬಹುದು.

1917ರಲ್ಲಿ ಈ ಸಂಸ್ಥೆಯ ಎಳೆಯರ ಶಾಖೆಯು ಸ್ಥಾಪಿತವಾಯಿತು. ಚಿಕ್ಕ ಮಕ್ಕಳಲ್ಲಿ ಪರಸ್ಪರ ಸಹಕಾರ, ಸೇವಾ ಮನೋಧರ್ಮ ಮತ್ತು ಶಾಂತಿ ಸೌಹಾರ್ದಗಳನ್ನು ಬೆಳಸುವುದೇ ಈ ಶಾಖೆಯ ಉದ್ದೇಶ. ನಮ್ಮ ದೇಶದಲ್ಲಿ ರೆಡ್‌ಕ್ರಾಸ್ ಸಂಸ್ಥೆಯು ಆಸ್ತಿತ್ವಕ್ಕೆ ಬಂದುದು 1920ರಲ್ಲಿ.

ರೆಡ್‌ಕ್ರಾಸ್ ಎಂಬುದು ಒಂದು ಸಂಕೇತ, ರೆಡ್‌ಕ್ರಾಸ್ ಎಂದರೆ ಕೆಂಪು ಶಿಲುಬೆಯೆಂದರ್ಥ. ಪಟ್ಟಣಗಳಲ್ಲಿ ಗಂಟೆ ಬಾರಿಸುತ್ತ. ಅತ್ತಿಂದಿತ್ತ ಓಡಾಡುವ ಅಂಬ್ಯುಲೆನ್ಸ್ ವಾಹನದ ಹೊರಮೈಯಲ್ಲಿ ಈ ಸಂಕೇತವಿರುತ್ತದೆ. ರೆಡ್‌ಕ್ರಾಸ್ ಸಂಸ್ಥೆಗೆ ಈ ಸಂಕೇತವನ್ನು ಆಯ್ಕೆ ಮಾಡಲು ಕಾರಣವಿದೆ.

ಇದು ಆರಂಭವಾದುದು ಸ್ವಿಜರ್ ಲೇಂಡಿನಲ್ಲಾದುದರಿಂದ ಆ ದೇಶಕ್ಕೆ ಗೌರವಸೂಚಕವಾಗಿ ಅಲ್ಲಿನ ಧ್ವಜದ ಚಿಹ್ನೆಯನ್ನೇ ಸ್ವಲ್ಪ ವ್ಯತ್ಯಾಸಗೊಳಿಸಿ ಈ ಸಂಸ್ಥೆಗೆ ಆಯ್ದು ಕೊಳ್ಳಲಾಗಿದೆ. ಅಲ್ಲಿನ ಧ್ವಜದ ಸಂಕೇತವು ಕೆಂಪು ಹಿನ್ನೆಲೆಯಲ್ಲಿರುವ ಬಿಳಿ ಶಿಲುಬೆ, ರೆಡ್‌ಕ್ರಾಸ್‌ನ ಗುರುತು ಬಿಳಿಯ ಹಿನ್ನೆಲೆಯಲ್ಲಿ ಕೆಂಪು ಶಿಲುಬೇ ಇಷ್ಟೆ ವ್ಯತ್ಯಾಸ.

ಕೆಲವು ಮುಸ್ಲಿಂ ದೇಶಗಳಲ್ಲಿ ರೆಡ್‌ಕ್ರಾಸ್‌ನ ಗುರುತು ಕೆಂಬಣ್ಣದ ಬಾಲಚಂದ್ರಾಕೃತಿಯಲ್ಲಿದೆ. ಇರಾನಿನಲ್ಲಿ ಬಿಳಿಯ ಬಣ್ಣದ ಮೇಲೆ ಕೆಂಪು ಸಿಂಹ ಮತ್ತು ಸೂರ್ಯನ ಚಿತ್ರವನ್ನು ಚಿತ್ರಿಸುತ್ತಾರೆ. ರಷ್ಯಾದಲ್ಲಿ ಕೆಂಪು ಶಿಲುಬೆಯನ್ನೂ ಕೆಂಪು ಬಾಲಚಂದ್ರಾಕೃತಿ ಎರಡನ್ನೂ ಬಳಸುತ್ತಾರೆ.

ಇಂತಹ ವಿಶ್ವವ್ಯಾಪಿಯಾದ ಸೇವಾ ಸಂಸ್ಥೆಯೊಂದನ್ನು ಹುಟ್ಟುಹಾಕಿದ ಹೆನ್ರಿಡ್ಯೂನಾನನ ಸ್ಮರಣೆಗಾಗಿ ಅವನು ಹುಟ್ಟಿದ ದಿನವಾದ ಮೇ 8ನೇ ತಾರೀಕನ್ನು ನಾವು ಜಾಗತಿಕ ರೆಡ್‌ಕ್ರಾಸ್ ದಿನವೆಂದು ಆಚರಿಸುತ್ತೇವೆ.

ಇಂದು ರೆಡ್‌ಕ್ರಾಸ್ ಸಂಸ್ಥೆಯು ಜಾಗತಿಕ ಸಂಸ್ಥೆಯಾಗಿದ್ದು ದೇಶ, ಭಾಷೆ, ಜಾತಿ, ಶತ್ರು, ಮಿತ್ರರೆಂಬ ತಾರತಮ್ಯಕ್ಕೆ ಒಳಗಾಗಿರದೆ ಮಾನವ ಸಮುದಾಯದ ಕಲ್ಯಾಣವನ್ನು ಆದರ್ಶವಾಗಿಟ್ಟುಕೊಂಡು ಆರ್ತರ, ಗಾಯಾಳುಗಳ ಮತ್ತು ಸಂತ್ರಸ್ತರ ಸೇವೆಗಾಗಿ ದುಡಿದು ತನ್ನ ಸಂಕೇತಕ್ಕೆ ಅನುಗುಣವಾಗಿ ''ಸೇವೆಗಾಗಿ ತ್ಯಾಗ'' ಎಂಬುದನ್ನು ಕಾರ್ಯತಃ ತೋರಿಸುತ್ತದೆ.

## ಶಬ್ದಗಳ ಅರ್ಥ

ಕಠೋರ – ದಯೆಯಿಲ್ಲದ; ಕಳೇಬರ – ಶವ; ಅಸುನೀಗು – ಮರಣಹೊಂದು; ಶುಶ್ರೂಷೆ – ರೋಗಿಗಳ ಉಪಚಾರ; ಆಸ್ತಿವಾರು – ಭದ್ರಬುನಾದಿ; ದಾರುಣ – ಭಯಂಕರ; ಸಮರ – ಯುದ್ಧ; ನೆರೆ – ಪ್ರವಾಹ; ತಾರತಮ್ಯ – ಬೇಧ

## ಅಭ್ಯಾಸ

**ಕೃತಿ: 1) ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ.**

ರೆಡ್‌ಕ್ರಾಸ್ ಸಂಸ್ಥೆಯು ಸಹಾಯ ಮಾಡುವ ಸಂದರ್ಭಗಳು

**ಕೃತಿ: 2) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) 1859ನೇ ಇಸವಿಯಲ್ಲಿ ಸೋಲ್ ಫೆರಿನೋ ಪ್ರಾಂತದಲ್ಲಿ ಯಾವ ಅನಾಹುತವಾಗಿತ್ತು.

ಉತ್ತರ ..........................................................................................................

2) ಹೆನ್ರಿಡ್ಯೂನಾನ್‌ನ ಹೃದಯ ಕರಗಿಸಿದ ಸಂಗತಿಗಳು ಯಾವುದು?

ಉತ್ತರ ..........................................................................................................

3) ಹೆನ್ರಿಡ್ಯೂನಾನ್ ರಚಿಸಿದ ಸ್ವಯಂ ಸೇವಕರಲ್ಲಿ ಯಾರು ಯಾರು ಇದ್ದರು ?

ಉತ್ತರ ..........................................................................................................

4) ಜಿನೇವಾ ಸಮ್ಮೇಳನದಲ್ಲಿ ಯಾವ ನಿರ್ಣಯ ಕೈಕೊಳ್ಳಲಾಯಿತು?

ಉತ್ತರ ..........................................................................................................

5) ರೆಡ್‌ಕ್ರಾಸ್ ಸಂಸ್ಥೆಯ ಧ್ಯೇಯವನ್ನು ಸ್ಪಷ್ಟ ಪಡಿಸಿರಿ.

ಉತ್ತರ ..........................................................................................................

**ಕೃತಿ: 3 – ಕೆಳಗಿನ ಚಿತ್ರವನ್ನು ನೋಡಿರಿ ಯೋಗ್ಯವಾದ ಉತ್ತರ ಬರೆಯಿರಿ.**

1) ಯೋಚನೆ ಮಾಡುತ್ತಿರುವ ವಿದ್ಯಾರ್ಥಿಯ ಚಿತ್ರ



2) ಜಾಗತಿಕ ರೆಡ್‌ಕ್ರಾಸ್ ದಿನವನ್ನು ಮೇ 8 ರಂದೇ ಏಕೆ ಆಚರಿಸುತ್ತಾರೆ.


**ಕೃತಿ: 4 – ಸೋಲ್ ಫೆರಿನೊ ಯುದ್ಧಭೂಮಿಯ ಕರಾಳದೃಶ್ಯವನ್ನು ಕಲ್ಪಿಸಿಕೊಂಡು ನಿಮ್ಮ ಅಭಿಪ್ರಾಯವನ್ನು ಬರೆಯಿರಿ**

ಉತ್ತರ ..............................................................................................................

..............................................................................................................


..............................................................................................................

**ಕೃತಿ: 5 – ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**





**ಕೃತಿ: 6 – ಧಾರವಾಹಿ ಚಲನಚಿತ್ರ ಅಥವಾ ಅಂತರ್ಜಾಲದಲ್ಲಿ ಯುದ್ಧ ಸನ್ನಿವೇಶಗಳನ್ನು ವೀಕ್ಷಿಸಿ. ಆದರ ಸಾಧಕ ಬಾಧಕಗಳ ಕುರಿತು ಗೆಳೆಯರೊಂದಿಗೆ ಸಂಭಾಷಣೆ ನಡೆಸಿರಿ.**

**ಕೃತಿ: 7 – ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ: 8 – ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



**ಕೃತಿ: 9 – ಕೆಳಗಿನ ಶಬ್ದಗಳ ಸಹಾಯಪಡೆದು ಅರ್ಥ ಪೂರ್ಣವಾಕ್ಯ ತಯಾರಿಸಿರಿ.**

ಅಂತರರಾಷ್ಟ್ರೀಯ ಶುಶ್ರೂಷೆ ......................................................................................................

ನಿರ್ಧಾರ ................................................................................................................................

ತಾರತಮ್ಯ ...............................................................................................................................

**ಕೃತಿ: 10 – ರೆಡ್‌ಕ್ರಾಸ್ ಸಂಸ್ಥೆಯ ಬಗ್ಗೆ ಸ್ವಅಭಿಪ್ರಾಯವನ್ನು ಹೇಳಿರಿ.**

ಉತ್ತರ ....................................................................................................................................

..............................................................................................................................................

..............................................................................................................................................


**ಕೃತಿ: 11 – ಶಿಕ್ಷಕರಿಂದ, ಪಾಲಕರಿಂದ ಅಥವಾ ಅಂತರ್ಜಾಲದ ಸಹಾಯವನ್ನು ಪಡೆದುಕೊಂಡು ಸುಧಾಳ ಅನುಮಾನವನ್ನು ದೂರಗೊಳಿಸಿರಿ.**






# 11. ಗಂಭೀರೆ

–ಶಿವಕೋಟ್ಯಾಚಾರ್ಯ



**ಕರ್ತೃ ಮತ್ತು ಕೃತಿ:** ಇಲ್ಲಿನ ಕಥಾಭಾಗವನ್ನು ಶಿವಕೋಟ್ಯಾಚಾರ್ಯನ 'ವಡ್ಡಾ ರಾಧನೆ' ಯಿಂದ ತೆಗೆದುಕೊಂಡಿದೆ. ಆದಿಕವಿ ಪಂಪನಿಗಿಂತ ಪೂರ್ವದಲ್ಲಿಯೆ ಸುಮಾರು ಕ್ರಿ. ಶ. 920– 930ರಲ್ಲಿ ಈ ಕಾವ್ಯ ಹುಟ್ಟಿರಬಹುದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ವಡ್ಡಾರಾಧನೆ– ವೃದ್ಧಾರಾಧನೆ– ಹಿರಿಯರ ಪೂಜೆ ಎಂಬರ್ಥದ ಈ ಗ್ರಂಥ ಪ್ರಾಚೀನ ಜೈನಮಹಾತ್ಮರುಗಳ ಜೀವನವನ್ನು ನಿರೂಪಿಸುವ ಹತ್ತೊಂಬತ್ತು ಕಥೆಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮೊದಲನೆಯದು 'ಸುಕುಮಾರಾಸ್ವಾಮಿ'ಯ ಕಥೆ, ಸುಕುಮಾರಸ್ವಾಮಿಯು ತನ್ನ ಹಿಂದಿನ ಜನ್ಮದಲ್ಲಿ ನಾಗಶ್ರೀಯೆಂಬ ಹೆಣ್ಣಾಗಿ ಹುಟ್ಟಿ ತನ್ನ ತಂದೆಯೊಡನೆ ತಾನು ಸೂರ್ಯಮಿತ್ರಾಚಾರ್ಯರಿಂದ ಪಡೆದ ವ್ರತಗಳನ್ನು ಹಿಂದಿರುಗಿಸಲು ಹೋಗುತ್ತಿರುವಾಗ ದಾರಿಯಲ್ಲಿ ರಾಜಭಟರು ಒಬ್ಬನನ್ನು ಹೆಡೆಮುರಿಕಟ್ಟಿ ಎಳೆದುಕೊಂಡು ಹೋಗುತ್ತಿರಲು, ಅದನ್ನು ಕಂಡು ಆಕೆ ತನ್ನತಂದೆಯನ್ನು ಕುರಿತು 'ಹೀಗೇಕೆ ಎಳೆದುಕೊಂಡು ಹೋಗುತ್ತಿದ್ದಾರೆ?' ಎಂದು ಕೇಳಲು, ತಂದೆಯು ತಳಾರ ನನ್ನು ಕೇಳಿ ತಿಳಿದುಕೊಂಡು ಮಗಳಿಗೆ ಈ ಕಥೆಯನ್ನು ಹೇಳಿದನು.

ಹರಿಪುರಿಯೆಂಬ ಪೊಟಲೊಳ್ ಗಂಭೀರೆ ಯೆಂಬೊಳೊರ್ವಳ್ ಬಿರ್ದ್ದಿಯಾಕೆಯ ವಂಗಳ್ ಹರಿಣಿ ಯೆಂಬೊಳಾಕೆಯಂ ಜಯಂತಮೆಂಬ ಪೊಟಲೊಳ ವಸುದತ್ತನೆಂಬ ಪರದಂಗೆ ಕೊಟ್ಟೊಡಾಕೆಗೆ ಗರ್ಭಮಾಗಿ ಮೋದಗೆಯ ಮೇಗೆ ಬಯಕೆಯಾದೊಡೆ ತಾಯ್ ಪಲವುಂ ತೆಱದ ಲಡ್ಡುಗೆಗಳ್ ಮಂಡಗೆಗಳುಂ ಮೊದಲಾಗೊಡೆಯ ಪಲವುಂ ಭಕ್ಷ್ಯ ರೂಪಂಗಳುಮಂ ಕೊಂಡು ಗಂಭೀರೆಯೆಂಬ ಬಿರ್ದ್ದಿ ಹರಿಪುರದಿಂ ಪೋಱಮಟ್ಟು ಮಗಳಿದ್ದೊರ್ಗ್ಗೆ ಪೋಪಳನ್ನೆಗವೆಡೆಯೊಳಿಣ್ಬರ್ ಕಳ್ಳರಂ ಕಂಡವರೊಳಗೊರ್ವನಂ ಪಡಿದಟಿತ್ತನ್ನಮಗಂ ನಿನ್ನನೆ ಪೋಲ್ಕುಂ ಪನ್ನೆರಟ್ಬರಿಸಂ ಪೋದೊನೆತ್ತ ಪೋದೊನೆಂದಱೆಯೆನಾತನಂ ಕಾಣದಿರುಳುಂ ಪಗಲುಂ ನೆನೆದಟ್ಟು ಕಣ್ಗಳ್ ಬಾತಿರ್ಪುವೆಂದೆನಗೆ ಆತಂ ಬಂದಂತಿರೆ

ನಿನ್ನಂ ಕಂಡು ಸಂತಸಮಾಯ್ತು ಮಗನೆ ನೀಮೆಲ್ಲಂ ಬನ್ನಿಂ ಪೋಪಂಸಾರೆಯೂರಂ ಮಿಂದುಂಡುಟ್ಟು ವಿಶ್ರಮಿಸಿ ನಾಳೆ ಪೋಪಿರೆಂದೊಡಗೊಂಡು ಪೋಗಿ ಮಗಳ ಮನೆಯನೆಯ್ದಿ ಅವರ್ಗೆಲ್ಲಂ ನೀರನಿಡಿಸಿ ತಲೆಯಂ ಪೊಸಿಸಿಯೊಲ್ಲಣಿಗೆಯನುಡಿಸಿ ತಲೆಯೊಳ್ ಕಱೆಯಂ ಪೊಯ್ದಾಗಳ್ ಬಿರ್ದಿ ಮನೆಯ ಮೇಗೇಱೆ ಕಳ್ಳರೆಂದು ಪೊಯ್ಯಲಿಟ್ಟಾಗಳನಿಬರುಂ ತ್ರಸ್ತಾಭಿ ಭೂತರಾಗಿ ಪಟ್ಟನೆ ಪಾಱೆಯೊಡಿ ಕೊಟ್ಟೊಳ್ಳಿತೆಮ್ಮಂ ಬಿರ್ದಿ ಛಿದ್ರಿಸಿದಳೆಂದು ಪಗೆಸ್ಟಾ ಆೆರ್ದರಿತ್ತ ಬಿರ್ದಿಯುಂ ನೆಟ್ಟನಿಂದಿರುಳ್ ಕಳ್ಳರ್ ಬರ್ಪರೆಂದಱೆದು ಕೂರಿತಪ್ಪ ಬಾಳಂ ಪಡಿದಿರ್ದಳನ್ನೆಗ ಮಿರುಳ್ ಕಳ್ಳರ್ ವಂದಾಕೆಯ ಲುಂದಿದ ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಲೊಳಾ ಬಾಳನಡ್ಡಮಿಟ್ಟು ಪಿಡಿದಿರ್ದ್ದು ಪುಗುವ ಕಳ್ಳನ ಮೂಗನರಿದೊಡವಂ ಪೊಱಮಟ್ಟು ತನಗೆ ಪುಗಲ್ ಪಾಂಗಿಲ್ಲ ನೀಂ ಪುಗೆಂದು ಪೆಱನೊರ್ವನಂ ಪುಗಿಸಿದೊಡಾತನ ಮೂಗುಮಂ ಕೊಱೆದೊಡಾತನಂ ಪೆಱನೊರ್ವನಂ ಪುಗಿಸೆ ಸೂಱುಸೂಯೊಳೆ ಪೊಕ್ಕೊಡನಿಬರ ಮೂಗುಮಂ ಕೊಱೆದಿಕ್ಕಿದೊಡನಿಬರಂ ಮೂಗರಿಯೆಪಟ್ಟು ಪೊಱಮಟ್ಟು ಪೋಗಿಯೊರ್ವನಿಂದ್ರಜಾಲಿಗನ ಮನೆಯೊಳ್ ಕನ್ನಮಿಕ್ಕಿ ಪುಡುಕೆಯಂ ತೆಗೆದು ಪೊತ್ತುಪೋಗಿ ಪೊಱಪೊಱಲೊಳ್ ಶ್ಮಶಾನ.

ದೊಳಿಱೆಪಿ ಕಂಱೆಯಂ ಕಳ್ದು ತಂದಱುವರ್ ಕಳ್ಳರುಂ ಮಱಲುಂದಿದರೊರ್ವನಾ ಕುಱೆಯಂ ಕೊಂದು ಜಾವಮಿರ್ದು ಮಸಣದ ಕಿಚ್ಚಿನೊಳ್ ಪಿಶಿತಮಂ ಮಾಡುತ್ತಿರ್ದ್ದು ಪುಡುಕೆಯಂ ತೆಱೆದು ನೋ?ನನ್ನೆಗಮದಯೊಳಗಿರ್ದ ಇಂದ್ರಜಾಲಿಗರ ಪಾಪೆಗಳುಂ ಸೀರೆಗಳುಂ ಝುಣಂಬಮುಂ ಕೊಂಡೊಂದು ಪ್ರತಿಮುಖಮಂ ಕೊಂಡು ತನ್ನ ಮುಖದೊಳಿಟ್ಟು ಪುಲಿಯ ಝುಣಂಬಮು ತೊಟ್ಟು ಶ್ಮಶಾನದೊಳುರಿವ ಕಿಚ್ಚಿನ ಪಕ್ಕದೆ ನಿಂದಿರ್ದನನ್ನೆಗಮೆಳ್ಳಿತ್ತು ಕಂಡಱುವರುಂ ಕಳ್ಳರುಂ ಬೇತಾಳನೆಂದಂಜಿ ಪ್ರಾಣಭಯದಿಂದೋಡಿ ಕೆಟ್ಟರಾತನುಮವರೋಡುವುದಂ ಕಂಡು ಪಿಶಿತಮಂ ಕೊಂಡು ಬಱೆಯಂ ತಗುಳೆ ಎನಿತೆನಿತಾತನಂ ಕಾಣ್ಬರನಿತನಿತನೆ ಬೇತಾಳಂ ಬಱೆಯಂ ತಗುಳ್ದನೆಂದೋಡೆ ಪ್ರತಿಮುಖಮುಮಂ ಝುಣಂಬಮುಮಂ ಕಳೆದೀಡಾಡಿ ತನ್ನ ಪೆಸರಂ ಪೇಱ್ದೆವರಂ ಮಾಣಿಸಿಯೊಡಗೊಡಿ ತನ್ನ ಮಾಡಿದ ಪಿಶಿತಮನವರ್ಗ್ಗೆಲ್ಲಂ ಪರ್ಚ್ಚಗೊಟ್ಟು ಮನಿಬರುಮೊಂದಾಗಿ ಪೋಪನ್ನೆಗಂ

ಇತ್ತ ಗಂಭೀರೆಯೆಂಬ ಬಿರ್ದಿ ಬೈಗಿರುಳಿನೊಂದು ಜಾವಮುಂಟೆನೆ ಎಟ್ದು ಪೊಟಿಲಂ ಪೊಱಮಟ್ಟು ತನ್ನೊರ್ಗ್ಗೆವೋಪಳ್ ನೆರಂಬೆಱದಂಜಿ ವಂದಾಲದ ಮರನನೇಱೆರ್ದಳನ್ನೆಗಮಾ ಕಳ್ಳುರಾಕೆಯೇಱೆರ್ದ್ದಮರಕ್ಕೆ ವಂದವರೊಳೊರ್ವಂ ಬಟ್ಟೆಯೊಳ್ ಬರ್ಪ ಜನಮಂ ನೋಡಲ್ವೇಡಿ ಮರದ ತುತ್ತತುದಿಯನೇಱೆ ನೊಱ್ಪನ್ನೆಗಂ ಮರದ ಮೇಗಿರ್ದ ವೃದ್ಧಸ್ತ್ರೀಯಂ ಕಂಡು ನೀನಾರ್ಗೆಂದಾತಂ ಬೆಸಗೊಂಡೊಡಾಕೆಯಾನೀ ಮರದೊಳಿರ್ಪ್ಪ ಯಕ್ಷದೇವತೆಯೆಂದೊಡಾತ ನೆನಗೆ ಪೆಂಡತಿಯಪ್ಪಾ ಎಂದು ಬೆಸಗೊಂಡೊಡೊಂದು ಪಾಂಗಿನೊಳ್ಳಪ್ಪೆನೀ ಪಿಶಿತದ ಖಂಡಮು? ನಾಲಗೆಯಿಂ ಪಡಿದೆನ್ನ ಬಯೊಳಿಡುವೊಡೆ ನಿನಗಾಂ ಪೆಂಡತಿಯಪ್ಪೆನೆಂದು ನುಡಿದೊಡಾತನಂ ನಾಲಗೆಯಿಂದಂ ಪಿಶಿತದ ಖಂಡಮಂ ಬಾಯೊಳಿಡೆ ನಾಲಗೆಯಂ ಪಱೆಯೆ ಕಚ್ಚಿದೊಡವಂ ಪುಯ್ಯಲಿಟ್ಟಂಜಿ ಬಿಱೆ ಆನಿಬರುಂ ಭಯದಿಂದೋಡೆ ವೃದ್ಧ ಸ್ತ್ರೀಯೆಂದಳ ಎನಗೆ ನಿಮ್ಮ ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮಂ ತಂದೀ ಪೊಟಲೊಳಿಟ್ಟು ಪೋಪೊಡೆ ಬಾಮ್ಪಿರಲ್ಲದಾಗಳ ಸತ್ತಿರ್ ನಿಮ್ಮೆಲ್ಲರುಮಂ ತಿಂದಪ್ಪೆನೆಂದೊಡಂಜಿ ಕಳ್ಳರಂತೆಗೆಯ್ವೆ ಮೆಂದೊಡಂಬಟ್ಟು ಕಳ್ತಲ್ಲಿಯೆಲ್ಲ ಮೆಂಟನೆಯ ಭಾಗಮಂ ಮರದ ಪೊಳಲೊಳಿಟುಟ ದಿವಸಕ್ಕಂ ಪೋಪರಾವೃದ್ಧ ಸ್ತ್ರೀಯುಂ ತನ್ನೊರಿಂದಂ ಬಂದಂ ಕಸವರಮಂ ಕೊಂಡು ಪೋಕುಂ.

## ಕಠಿಣಪದಗಳ ಅರ್ಥ:

ಪೊಱಲ್- ಪಟ್ಟಣ. ಯೆಂಬೊಳ್-ಎಂಬುವವಳು. ಬಿರ್ದ್ದಿ-ಮುದುಕಿ. ಪರದ-ವ್ಯಾಪಾರಿ. ಮೋದಗೆ ಒಂದು ಬಗೆಯ ಭಕ್ಷ್ಯ; ಕಡುಬು. ಮಂಡಗೆ-ಒಂದು ವಿಧವಾದ ಭಕ್ಷ್ಯ. ಮೊದಲಾಗೊಡೆಯ-ಮುಂತಾದ. ಪೊಱಮಡು-ಹೊರಡು. ಅನ್ನೆಗಂ-ಅಷ್ಟರಲ್ಲಿ.ಎಡೆಯೊಳ್ -ಮಾರ್ಗಮಧ್ಯದಲ್ಲಿ. ಎಣ್ಬರ್-ಎಂಟುಜನ ('ಎಂಟು' ಎಂಬುದಕ್ಕೆ 'ಎಣ್' ಎಂಬ ಆದೇಶ ಬಂದು. ಆದಕ್ಕೆ 'ಬರ್' ಎಂಬ ಬಹುವಚನ ಪ್ರತ್ಯಯ ಬಂದಿದೆ.)ಅಱ್ತು-ಅತ್ತು. ಪೊಲ್ಯುಂ-ಹೋಲುತ್ತಾನೆ. ಪನ್ನೆರಟ್ಬರಿಸಂ-ಹನ್ನೆರಡು ವರುಷ (ಬರಿಸ-ದ್ಭ) ಪೋದಂ -ಹೋದನು. ಬಾತಿರ್ಪ್ಪವು-ಊದಿಕೊಂಡಿವೆ. ಸಾರೆ ಯೂರಂ -ಸಾರೆ+ಊರಂ (ಯ.ಆ.ಸಂ) ಸಮೀಪದ ಊರನ್ನು. ಮಿಂದು -ಸ್ನಾನಮಾಡಿ (ಮೀ-ಧಾತಂ). ಇಡಿಸಿ-ಕೊಡಿಸಿ. ತಲೆಯಂ ಪೂಸಿ -ಎಣ್ಣೆ ಮಜ್ಜನ ಮಾಡಿಸಿ. ಒಲ್ಲಣಿಗೆ-ಧೋತ್ರ. ಪುಯ್ಯಲಿಡು - ಕೊಗಿಕೊಳ್ಳುವುದು. ಅನಿಬರ್-ಅಷ್ಟು ಜನ. ತ್ರಸ್ತಾಭಿಭೂತ- ಹೆದರಿಕೆಯಿಂದ ಅಪಮಾನಿತರಾಗಿ. ಪಟ್ಟನೆ-ಕೊಡಲೇ. ಪಾಱೆ +ಓಡಿ-ಓಡಿಯೋಗಿ. ಪಗೆಸಾರಿರ್ದರ್-ದ್ವೇಷಸಾಧಿಸುವುದಾಗಿ ನಿಶ್ಚಯಿಸಿದರು. ಛಿದ್ರಿಸು - ಮೋಸಮಾಡು. ನೆಟ್ಟನೆ-ನೇರವಾಗಿ. ಇಂದಿರುಳ್-ಇಂದಿನ+ಇರುಳ್-ಈ ರಾತ್ರಿ. ಕೊರಿತ್ತು-ಹರಿತವಾದ. ಬಾಳ್-ಕತ್ತಿ. ಲುಂದಿದ-ಮಲಗಿದ. ಪುಗುವ-ಪ್ರವೇಶಿಸುವ. ಅರಿ-ಕತ್ತರಿಸು. ಪಾಂಗು-ರೀತಿ; ಆವಕಾಶ. ಕೊಱ³ -ಕತ್ತರಿಸು. ಸೂಱ್-ಸರದಿ. ಮೂಗರಿಯೆಪಟ್ಟು-ಮೂಗುಕತ್ತರಿಸಿ ಹೋಗಿ. ಇಂದ್ರಜಾಲಿಗ-ಮಾಂತ್ರಿಕ. ಪುಡುಕೆ-ಪೆಟ್ಟಿಗೆ. ಪೊಱವೊಳಲ್. ಪೊಳಲ-ಪೊರಗೆ-ಊರಹೊರಗೆ. ಇೞುಪು-ಕೆಳಕ್ಕೆ ಇಳಿಸು. ಕಳ್ದು-ಕದ್ದು. ಅಱುವರ್-ಆರುಜನ. ಮಱಲುಂದು-ಮೈಮರೆತು ಮಲಗು. ಜಾವಮಿರು-ಕಾಯ್ದುಕೊಂಡಿರು. ಮಸಣ-ಶ್ಮಶಾನ. (ತ್ಸ). ಕಿಚ್ಚು-ಬೆಂಕಿ. ಪಿಶಿತಮಂ ಮಾಡು- ಮಾಂಸ ಬೇಯಿಸು. ನೋೞ್ಪ-ನೋಡುವ. ಪಾಪೆ-ಬೊಂಬೆ. ಝುಣಂಬ- ಚರ್ಮದಿಂದ ಮಾಡಿದ ರವಕೆ. ಪ್ರತಿಮುಖ-ಮುಖವಾಡ. ಎೞ್ಚತ್ತು-ಎಚ್ಚರಗೊಂಡು. ಬೞೆಯಿಂ ತಗುಳೆ-ಹಿಂದೆ ಅಟ್ಟಿಸಿಕೊಂಡು ಹೋಗುಲು. ಎನಿತೆನಿತು-ಎಷ್ಟು ಎಷ್ಟು. ಅನಿತನಿತು-ಅಷ್ಟು ಅಷ್ಟು. ಈಡಾಡು-ಬಿಸಾಡು. ಪೆಸರು-ಹೆಸರು, ಮಾಣಿಸು-ನಿಲ್ಲಿಸು; ತಡೆಗಟ್ಟು. ಪರ್ಚಿ-ಹಂಚು. ಬೈಗಿಲುಳ್ -ಮುಂಜಾನೆ, ಜಾವ (ದ್ಭ)- ಯಾಮ; ಗಳಿಗೆ. ನೆರಂಬೆರದೆ-ನೆರಂ+ಪೆರದೆ; ಸಹಾಯವನ್ನು ಪಡೆಯದೆ (ಸಹಾಯಕರಿಲ್ಲದೆ). ಎೞ್ದು-ಎದ್ದು. ವಂದಲಾದ-ವಂದು+ಆಲದ (ಸ್ವ. ಲೋ.ಸಂ) ವಂದು-ಒಂದು ಬಟ್ಟೆ-ದಾರಿ. ಬರ್ಪ-ಬರುವ. ನೋಡಲ್ವೇಡಿ-ನೊಡ+ಬೇಡಿ (ವಕಾರಾದೇಶ ಸಂಧಿ) ನೋಡಲು ಬಯಸಿ. ತುತ್ತತುದಿ-ತುದಿತುದಿ; ಅತ್ಯಂತ ಕೊನೆ. ನೀನಾರ್ಗೆ-ನೀನು ಯಾರವಳು. ಪೆಂಡತಿಯಪ್ಪಾ-ಹೆಂಡತಿಯಾಗುವಿಯಾ. ಪಾಂಗು-ರೀತಿ. ಖಂಡ-ತುಂಡು. ಪರಿ-ಹರಿ; ಕತ್ತರಿಸು. ಕಳ್ವಲ್ಲಿ-ಕದಿಯುವ ಕಡೆ. ಪೊಟಿಲ್-ಮರದ ಪೊಟರೆ. ಬಾಳ್ವರ್-ಬದುಕುವಿರಿ. ದಿವಸಕ್ಕಂ-ಪ್ರತಿದಿವಸವೂ. ಕಸವರ-ಚಿನ್ನ; ಐಶ್ವರ್ಯ, ಪೋಕುಂ-ಹೋಗುತ್ತಿದ್ದಳು.

## ಅಭ್ಯಾಸ

**ಕೃತಿ: 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಪ್ರಶ್ನೆ 1. ಮುದುಕಿಯು ಕಳ್ಳರನ್ನು ಕಂಡಾಗ ಎಲ್ಲಿಗೆ ಹೊರಟಿದ್ದಳು? ಏಕೆ ಹೊರಟಿದ್ದಳು?
ಕಳ್ಳರಿಂದ ತಪ್ಪಿಸಿಕೊಳ್ಳಲು ಅವಳು ಮಾಡಿದ ಉಪಾಯವೇನು?

ಉತ್ತರ .......................................................................................................................

ಪ್ರಶ್ನೆ 2. ಮನೆಗೆ ಕನ್ನವಿಟ್ಟ ಕಳ್ಳರನ್ನು ಬಿರ್ದ್ದಿಯು ಹೇಗೆ ಶಿಕ್ಷಿಸಿದಳು?

ಉತ್ತರ .......................................................................................................................

ಪ್ರಶ್ನೆ 3. ಮುದುಕಿಯು ಆಲದ ಮರವನ್ನೇಕೆ ಏರಿದಳು?

ಉತ್ತರ .......................................................................................................................

ಪ್ರಶ್ನೆ 4. ತನ್ನನ್ನು ಮದುವೆಯಾಗು ಎಂದು ಕಳ್ಳನಿಂದ ಮುದುಕಿಯು ಹೇಗೆ ಪಾರಾದಳು?

ಉತ್ತರ .......................................................................................................................

ಪ್ರಶ್ನೆ 5. ಈ ಕಥೆಯಿಂದ ತಿಳಿದುಬರುವ ನೀತಿಯೇನು?

ಉತ್ತರ .......................................................................................................................

**ಕೃತಿ: 2) ಕೆಳಗಿನ ಶಬ್ದಗಳನ್ನು ಹೊಸಗನ್ನಡದಲ್ಲಿ ಬರೆಯಿರಿ.**

1. ಪರದ =
2. ಪಾಂಗಿಲ =
3. ಪೊಱಮಡು =
4. ಪಾಪೆ =

**ಕೃತಿ: 3) ಕೆಳಗಿನ ಪ್ರತಿ ಅಕ್ಷರಗಳಿಂದ ಒಂದು ಹೊಸ ಶಬ್ದವನ್ನು ಬರೆಯಿರಿ.**

ಸಿಂಹಾಸನ: 1) ಸಿಂ.......................... 2) ಹಾ..........................

ಸ.......................... 2) ನ..........................

**ಕೃತಿ: 4)** ಅ) ಇವು ಯಾವ ವಿಭಕ್ತಿಗಳಲ್ಲಿವೆ ತಿಳಿಸಿರಿ

ಆ) ಪೊಱಲೊಳ್, ಹರಿಪುರದಿಂ, ಕಲೆಯಂ, ಕಳ್ಳನ, ಪರದಂಗೆ, ಮರಕ್ಕೆ,

ಬ) ಈ ಕಥೆಯನ್ನು ನಿಮ್ಮ ಸ್ವಂತಮಾತಿನಲ್ಲಿ ಬರೆಯಿರಿ.

..........................................................................................................

..........................................................................................................

..........................................................................................................

..........................................................................................................

..........................................................................................................

ಕ) ಈ ಮಾತುಗಳನ್ನು ವ್ಯಾಕಗಳಲ್ಲಿ ಪ್ರಯೋಗಿಸಿರಿ

ಪೊಱಮಡು, ಸೋಳ್, ಪೊಱದಿಕ್ಕು, ಮಱಲುಂದು, ತುತ್ತತುದಿ. ಪಾಂಗು, ಒಡಂಬಡು, ಕಸವರ.




ಪದ್ಯ ವಿಭಾಗ

# 1. ಒಲುಮೆ

– ಆರ್. ಎನ್. ಜಯಗೋಪಾಲ

**ಕವಿ ಪರಿಚಯ :** ಆರ್ ಎನ್ ಜಯಗೋಪಾಲ್ ಇವರು ಕನ್ನಡದ ಸಿನೇಮಾ ರಂಗದ ಪ್ರಸಿದ್ಧ ಕವಿಗಳು. ಅನೇಕ ಚಲನಚಿತ್ರಗಳಿಗೆ ಗೀತೆಗಳನ್ನು ಬರೆದಿದ್ದಾರೆ. ಐತಿಹಾಸಿಕ ಮತ್ತು ಪೌರಾಣಿಕ, ಸಾಮಾಜಿಕ ಕುರಿತು ಅನೇಕ ಗೀತೆಗಳು. ಸಿನೇಮಾ ರಂಗದಲ್ಲಿ ತೆರೆಕಂಡಿವೆ. ಅದರಂತೆ ಸಾಕಷ್ಟು ಭಾವಗೀತೆಗಳನ್ನು ರಚಿಸಿದ್ದಾರೆ. ಅನೇಕ ಚಿತ್ರಪಟಗಳಿಗೆ ಸಂಭಾಷಣೆಗಳನ್ನು ಬರೆದಿದ್ದಾರೆ.

ಪ್ರಸ್ತುತ ಕವನದಲ್ಲಿ ನಾನಾ ರೀತೆಯಲ್ಲಿ ದೇವನಲ್ಲಿ ಬೇಡಿಕೊಂಡಿದ್ದಾರೆ.

ನಿನ್ನೊಲುಮೆ ನಮಗಿರಲಿ ತಂದೆ ।
ಕೈ ಹಿಡಿದು ನೀ ನಡೆಸು ಮುಂದೆ ॥
– ನಿನ್ನೊಲುಮೆ ನಮಗಿರಲಿ ತಂದೆ..... ॥ ಪ ॥

ತಾನುರಿದು ಜಗಕೆಲ್ಲ, ಜ್ಯೋತಿಯನು ನೀಡುವ ।
ದೀಪದೊಲು ನೀನೆಮ್ಮ, ಅನುಗೊಳಿಸು ತಂದೆ ॥–
ಕಾನನದ ಸುಮವೊಂದು ಸೌರಭವ ತಾ ಸೂಸಿ ।
ಸಫಲತೆಯ ಪಡೆವಂತೆ, ಮಾಡೆಮ್ಮ ತಂದೆ ॥
ಸಿರಿಯು ಸಂಪದ ಬೇಡ ।
ಯಾವ ವೈಭವ ಬೇಡ ॥
ನಿನ್ನ ಕರುಣೆಯು ಒಂದೇ ।
ಸಾಕೆಮಗೆ ತಂದೆ ॥
– ನಿನ್ನೊಲುಮೆ...... ॥1॥

ನಿನ್ನ ಈ ಮಕ್ಕಳನು, ಪ್ರೇಮದಲಿ ನೀ ನೋಡು।
ಈ ಮನೆಯು ಎಂದೆಂದು ನಗುವಂತೆ ನೀ ಮಾಡು
ನಂಬಿದರೆ ಭಯವಿಲ್ಲ, ನಂಬದಿರೆ ಬಾಳಿಲ್ಲ ।
ಅಂಬಿಗನೆ ನೀ ನಡೆಸು, ಈ ಬಾಳ ನೌಕೆ ॥
ಯಾವ ನೋವೇ ಬರಲಿ । ಎದೆಗುಂದದಿರಲಿ ॥
ಸತ್ಯ ಮಾರ್ಗದೆ ನಡೆವ । ಶಕ್ತಿ ಕೊಡು ತಂದೆ ॥
– ನಿನ್ನೊಲುಮೆ.... ॥2॥

## ಶಬ್ದಗಳ ಅರ್ಥ

ಕಾನನ – ಕಾಡು;   ಕುಸುಮ – ಹೂವು;   ಸೌರಭ – ಸುಗಂಧ;

## ಅಭ್ಯಾಸ

**ಕೃತಿ -1   ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ನಮ್ಮ ಬದುಕು ಯಾವರೀತಿ ಆಗಬೇಕೆಂದು ಕವಿ ಪ್ರಾರ್ಥಿಸುತ್ತಾನೆ?

   ..........................................................................................................

2. 'ಏನನ್ನು' ಕೊಡು ಎಂದು ಕವಿ ಬೇಡಿಕೊಳ್ಳುತ್ತಾನೆ?

   ..........................................................................................................

3. ಈ ಮನೆಯ ಹೇಗಿರಬೇಕು?

   ..........................................................................................................

4. ನಾವು ಎಂತಹ ಮಾರ್ಗದಲ್ಲಿ ನಡೆಯಬೇಕು.

   ..........................................................................................................

**ಕೃತಿ -2 ಬಿಟ್ಟಸ್ಥಳ ತುಂಬಿರಿ.**

1. .............. ನಮಗಿರಲಿ ತಂದೆ
2. ಕಾನನದ ಕುಸುಮವೊಂದು........... ತಾ ಸೂಸಿ.
3. ಸಫಲತೆಯ ................. ಮಾಡೆಮ್ಮ ತಂದೆ
4. ಯಾವ ನೋವೇ ಬರಲಿ...................

**ಕೃತಿ -3 ವಾಕ್ಯದಲ್ಲಿ ಉಪಯೋಗಿಸಿರಿ.**

ಅಂಬಿಗ ..........................................................................................................

ಸೌರಭ ..........................................................................................................

ಸಂಪದ ..........................................................................................................

ಕರುಣೆ ..........................................................................................................

**ಕೃತಿ -4 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**




**ಕೃತಿ -5 ಪ್ರಾಚೀನಕಾಲದಲ್ಲಿ ಬಳಸುತ್ತಿದ್ದ ಬೆಳಕು ಕೊಡುವ ಸಾಧನಗಳ ಚಿತ್ರ ಬರೆಯಿರಿ.**


●●●

MV9KDI



# 2. ಆಷಾಢಮಾಸ ಬಂದೀತವ್ವ

**- ಜನಪದರು**



**ಕವಿ ಪರಿಚಯ :** ಜಾನಪದ ಸಾಹಿತ್ಯವು ಗ್ರಾಮೀಣ ಭಾಗದ ಜನರ ಸೃಷ್ಟಿಯಾಗಿದೆ. ಜನರಿಂದ ಜನರಿಗೆ ಸಂಪ್ರದಾಯ ರೂಪದಲ್ಲಿ ಮೂಡಿಬಂದಿರುವ ಸಾಹಿತ್ಯ ಇದಾಗಿದೆ. ಪ್ರಚಾರ ಬಯಸದೆ ಇರುವ ಸಾಹಿತ್ಯವಿದು, ಅವರ ಬದುಕಿನ ಸಂಗತಿಗಳು ಜೀವನಾನುಭವಗಳು ಜನಪದಲ್ಲಿ ಹಾಡಾಗುತ್ತದೆ. ಕ್ರಿಯಾತ್ಮಕ ರಚನೆಗಳಾದ ಜನಪದ ತ್ರಿಪದಿಗಳು ಗ್ರಾಮೀಣ ಜನಾಂಗದ ಜೀವನಕ್ಕೆ ಹಿಡಿದ ಕೈಗನ್ನಡಿಗಳಾಗಿವೆ. ಹೆಣ್ಣಿಗೆ ತವರೆಂದರೆ ಸ್ವರ್ಗಕ್ಕಿತಲೂ ಮಿಗಿಲು ತನ್ನ ಕಷ್ಟಕ್ಕೆ ಒದಗುವ ತವರೆಂದರೆ ಗರತಿಗೆ ತುಂಬಾ ಅಭಿಮಾನ ಹಬ್ಬ ಹರಿದಿನಗಳಿಗೆ ತವರಿಗೆ ಹೋಗುವದನ್ನು ಹೆಮ್ಮೆಯಿಂದ ಗರತಿಯು ಈ ಪದ್ಯದಲ್ಲಿ ವ್ಯಕ್ತಗೊಳಿಸಿರುವಳು.

ಆಷಾಢಮಾಸ ಬಂದೀತವ್ವ
ತೌರಿಂದ ಅಣ್ಣಾ ಬರಲಿಲ್ಲ
ಎಷ್ಟು ನೆನೆಯಾಲೀ ಅಣ್ಣಾನ ದಾರಿಯ
ಸುವ್ವನಾರೀ ಸುವ್ವೋನಾರಿ ॥

ಅರಕೆರೆ ಬನ್ನೂರು ಅದೆ ನನ್ನ ತವರೂರು
ಸರಕಾನೆ ಎದ್ದು ಬರುತೀಯೆ । ಅಣ್ಣಯ್ಯ
ಸರಿ ಕಾಣೋ ನಿನ್ನ ದೊರೆತಾನ ॥

ಕೆಂದೆತ್ತು ಕೈಯಲ್ಲಿ ಕೆಂಪಂಗಿ ಮೈಯಲಿ
ಚಿನ್ನದ ಬಾವಲಿಯ ತಕ್ಕೊಂಡು । ಬರುತಾನೆ
ಅಣ್ಣಯ್ಯ ತಂಗೀಯ ಕರೆಯೋಕೆ ॥

ತವರೂರು ದಾರೀಲಿ ತೆಗೆಸಣ್ಣ ಬಾವಿಯ
ಅಕ್ಕತಂಗೀರು ತಿರುಗಾಡೋ । ದಾರೀಲಿ
ತೆಗೆಸಣ್ಣ ಕಲ್ಯಾಣದ ಬಾವೀಯ ॥

ತೌರೂರು ದಾರೀಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೆಯಷ್ಟು ಮರಳಿಲ್ಲ । ದಾರೀಲಿ
ಬಿಸಿಲಿನ ಬೇಗೆಯು ಸುಡಲಿಲ್ಲ ॥

## ಶಬ್ದಗಳ ಅರ್ಥ

ತವರು = ತಾಯಿಯ ಮನೆ; ಸರಕಾನೆ = ಬೇಗನೆ; ಬಾವಲಿ = ಕಿವಿಯ ಒಂದು ಆಭರಣ; ಬೇಗೆ = ಸುಡುವಿಕೆ


## ಅಭ್ಯಾಸ

**ಕೃತಿ 1) I. ಬಿಟ್ಟ ಹೋದ ಹಿಂದೂ ತಿಂಗಳುಗಳನ್ನು ಬರೆಯಿರಿ.**

| | | | |
|---|---|---|---|
| | | | ಆಷಾಡ |
| | ಭಾದ್ರಪದ | | |
| | | | |

**II . ಕೆಳಗಿನ ಚೌಕಟ್ಟಿನಲ್ಲಿ ನಾಲ್ಕು ಗ್ರಾಮ್ಯ ಶಬ್ದಗಳನ್ನು ಬರೆಯಿರಿ.**

ಗ್ರಾಮ್ಯ ಶಬ್ದಗಳು



**III. ತವರುಮನೆಗೆ ತನ್ನನ್ನು ಅಣ್ಣನು ಹೇಗೆ ಕರೆಯಲು ಬರುವನೆಂದು ಹೇಳುವಳು ?**

..........................................................................................................

..........................................................................................................

**ಕೃತಿ 2) I. ಪದ್ಯದಲ್ಲಿ ಬಂದಿರುವ ಊರುಗಳು**

..........................................................................................................

..........................................................................................................

**II. ತವರೂರ ದಾರಿಯು ಹೇಗೆ ಇರಬೇಕು ಎಂಬುದು ಜಾನಪದ ಹೆಣ್ಣಿನ ಮಾತುಗಳಿಂದ ವ್ಯಕ್ತಗೊಳಿಸಿರಿ.**

..........................................................................................................


..........................................................................................................

**III. ನಿಮ್ಮ ''ತಾಯಿ''ಯ ಕುರಿತು 8 ರಿಂದ 10 ವಾಕ್ಯಗಳಲ್ಲಿ ನಿನ್ನ ಮಾತುಗಳಲ್ಲಿ ಬರೆಯಿರಿ.**

..........................................................................................................

..........................................................................................................

ಕೃತಿ 3) I ನಿಮ್ಮ ಕುಟುಂಬದಲ್ಲಿ ಬರುವ ವ್ಯಕ್ತಿಗಳು




I. ಕೆಳಗಿನ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಸರಕಾನೆ .......................................................................................................

ಕೆಂದೆತ್ತ .......................................................................................................

ತಿರುಗಾಡೋ .......................................................................................................

ತಕ್ಕೊಂಡು.......................................................................................................

II.ನಿಮ್ಮ ಶಾಲಿಯಲ್ಲಿ ಏರ್ಪಡಿಸಿದ ವಿಜ್ಞಾನ ಪ್ರದರ್ಶನದ ಕುರಿತು ನಿಮ್ಮ ಅಣ್ಣನಿಗೆ ಒಂದು ಪತ್ರ ಬರೆಯಿರಿ.

.......................................................................................................

.......................................................................................................

III. ನಿಮಗೆ ಗೊತ್ತಿರುವ ಯಾವುದಾದರೂ ಎರಡು ಜಾನಪದ ತ್ರಿಪದಿಗಳನ್ನು ಬರೆಯಿರಿ.

.......................................................................................................

.......................................................................................................



MVIGF6



# 3. ರಾಷ್ಟ್ರಧ್ವಜ

**- ಗಂಗಪ್ಪ ವಾಲಿ**

**ಕವಿ ಪರಿಚಯ:** ಗಂಗಪ್ಪ ವಾಲಿಯವರ, ಕಲ್ಯಾಣ ಕ್ರಾಂತಿಯಿಂದ ಈ ಕವನವನ್ನು ತೆಗೆದು ಕೊಂಡಿದೆ. ಶ್ರೀ ವಾಲಿಯವರು ಹುಬ್ಬಳ್ಳಿಯವರು. ಹುಟ್ಟು ಕವಿಗಳು. ನಿಸರ್ಗದ ದೃಶ್ಯಗಳಂತೆ, ಸಮಾಜದಲ್ಲಿಯ ಆಗು ಹೋಗುಗಳೂ ಅವರ ಕವನಗಳನ್ನು ಆವರಿಸಿವೆ. ಕೆಲವೊಂದು ಮಹತ್ವದ ಸಂದರ್ಭಗಳಲ್ಲಿ ಅವರಿಂದ ರಚಿತವಾದ ಕವಿತೆಗಳಲ್ಲಿ ಕಲ್ಪನೆಭಾಷೆಗಳ ಬೆಡಗು ಕೂಡಿಕೊಂಡು ಬಂದಿದೆ ನೀವು ಓದುವ 'ರಾಷ್ಟ್ರಧ್ವಜ ಹಾರುತಿದೆ' ಎಂಬ ಕವನದಲ್ಲಿ ಕವಿಗಳ ರಾಷ್ಟ್ರಪ್ರೇಮವೂ ಉಕ್ಕಿದೆ ಜೊತೆಗೆ ಸ್ವತಂತ್ರ ಭಾರತವು ತನ್ನೆದುರು ಯಾವ ಗುರಿಗಳನ್ನಿಟ್ಟು ಕೊಳ್ಳಬೇಕೆಂಬುದರ ಮಾರ್ಮಿಕವಾದ ನಿರೂಪಣೆಯೂ ಬಂದಿದೆ. ರಾಷ್ಟ್ರಧ್ವಜದ ಸಂಕೇತಗಳನ್ನು ಅವರು ಸೂಕ್ಷ್ಮವಾಗಿ ತೋರಿಸಿರುವರು.

ಎತ್ತರದಲ್ಲಿ ಬಿತ್ತರದಲ್ಲಿ
ರಾಷ್ಟ್ರಧ್ವಜ ಹಾರುತಿದೆ;
ಅತ್ಯುತ್ತಮ ಮಾನವತೆಯ
ತತ್ವಂಗಳ ಸಾರುತಿದೆ.

ಅರುಣಿಮೆಯೇ ಕಾರುಣ್ಯವು;
ಶುಭ್ರತೆಯೇ ಪಾವಿತ್ರ್ಯ;
ಮರಕತವೇ ವೈಫಲ್ಯವು;
ಚಕ್ರವೇ ಪ್ರಗತಿಯ ಚಿತ್ರ.

ತೆರೆದೊಗೆದಿರಿ ಹೊರದಾಸ್ಯದ
ಬರಿ ಮಂಜಿನ ಮುಸುಕನ್ನು;
ಹರಿದೊಗೆಯಿರಿ ಒಳದಾಸ್ಯದ
ಪ್ರಗ್ರಹಗಳ ನೀವಿನ್ನು

ಜನಮನದಲಿ ತಿಳಿವಳಿಕೆಯ
ಕಳೆವೆಳಗನು ಮೂಡಿಸಿರಿ
ಮನೆಮನೆಯೊಳು ಸಂತೃಪ್ತಿಯ
ಸಂಗೀತವ ಹಾಡಿಸಿರಿ

ಹರಿದೋಡುವ ಹಿರಿಹೊಳೆಗಳು
ನೀರುಣಿಸಲಿ ನೆಲಗಳಿಗೆ
ಕೊರತೆಗಳನು ಸರಿಗೊಳಿಪುದೆ
ಗುರಿಯಾಗಲಿ ಫಲಗಳಿಗೆ

ಭಾರತವಿದು ವಿಜ್ಞಾನದ
ಸುಜ್ಞಾನದ ಶಿಖರವನು
ಏರಲಿ; ತಾಂ ತೋರಲಿ ಧರೆ-
ಗಾದರ್ಶದ ಮುಕುರವನು.

ಚೆಲುವೊಲವಿನ ಸಂಸ್ಕೃತಿಯನು
ನಡೆನುಡಿಯೊಳು ಬೆಳೆಯಿಸಿರಿ;
ನಲಿನಲಿವೊಲು ಬದುಕನು ಬಗೆ
ಬಗೆಯೊಳು ಹೊಳೆಹೊಳೆಯಿಸಿರಿ.

ಪ್ರತಿ ವ್ಯಕ್ತಿಯ ಗುಣಶಕ್ತಿಯ
ವಿಕಸನವೇ ಸ್ವಾತಂತ್ರ್ಯ;
ನಿಶ್ಚಿಂತೆಯ ನಿರ್ಭೀತಿಯ
ಜೀವನವೇ ಸುಖಸೂತ್ರ



## ಶಬ್ದಗಳ ಅರ್ಥ

ಬಿತ್ತರ = ವಿಸ್ತಾರ, ಅರುಣ-ಸೂರ್ಯ, ಮರಕತೆ - ಹಸಿರು, ಪಾವಿತ್ರ್ಯ-ಪವಿತ್ರ

## ಅಭ್ಯಾಸ

**ಕೃತಿ-1 ಕೆಳಗಿನ ಅಂಶಗಳನ್ನು ಹೊಂದಿಸಿ ಬರೆಯಿರಿ.**

| | | |
|---|---|---|
| 1) ಮರಕತವೇ | | ಅ) ಕಾರುಣ್ಯವು |
| 2) ಶುಭ್ರತೆಯೆ | | ಬ) ಪ್ರಗತಿಯಚಿತ್ರ |
| 3) ಅರುಣಿಮೆಯೇ | | ಕ) ಪಾವಿತ್ರ್ಯ |
| 4) ಚಕ್ರವೇ | | ಡ) ವೈಫಲ್ಯವು |

**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಕವಿಯು ಏನನ್ನು ಹರಿದೊಗೆಯಿರಿ ಎಂದು ಹೇಳುತ್ತಾನೆ?

..........................................................................................

..........................................................................................

2) ಕವಿಯು ಮನೆಮನೆಯೊಳು ಯಾವ ಸಂಗೀತವನ್ನು ಹಾಡಲು ಹೇಳುವನು?

..........................................................................................

..........................................................................................

3) ಭಾರತವು ಯಾವ ಶಿಖರವನ್ನು ಏರಲೆಂದು ಕವಿ ಬಯಸುತ್ತಾನೆ?

..........................................................................................

..........................................................................................

4) ನಾವು ನಮ್ಮ ಸಂಸ್ಕೃತಿಯನ್ನು ಹೇಗೆ ಬೆಳೆಸಬೇಕು?

..........................................................................................

..........................................................................................

5) ನಮ್ಮ ರಾಷ್ಟ್ರಧ್ವಜವು ಏನನ್ನು ಸಾರುತಿದೆ?

..........................................................................................

..........................................................................................

**ಕೃತಿ 3) ಕವಿಯು ಯಾವುದನ್ನು ಸ್ವಾತಂತ್ರ್ಯವೆಂದು ಕರೆಯುತ್ತಾರೆ? ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.**

**ಕೃತಿ 4) ಕೆಳಗಿನ ಅಂಶಗಳ ಕುರಿತಾದ ಹೆಸರುಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ತುಂಬಿರಿ.**


| ರಾಷ್ಟ್ರಧ್ವಜ | ರಾಷ್ಟ್ರೀಯ ಪ್ರಾಣಿ | ರಾಷ್ಟ್ರಪಕ್ಷಿ | ರಾಷ್ಟ್ರೀಯ ಹೂವು | ರಾಷ್ಟ್ರಗೀತೆ |
|---|---|---|---|---|
| ................ | ................ | ................ | ................ | ................ |



# 4. ಯುದ್ಧ ಬಂತು ಮನೆಯವರೆಗೆ

**- ದ. ರಾ. ಬೇಂದ್ರೆ**

(ಈ ಪದ್ಯವನ್ನು ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಬರೆದ 'ಸೂರ್ಯಪಾನ' ಎಂಬಕವನ ಸಂಕಲನದಿಂದ ಆರಿಸಲಾಗಿದೆ. ಇವರ ಕಾವ್ಯನಾಮ ಅಂಬಿಕಾತನಯ ದತ್ತ. ಅಖಿಲ ಕರ್ನಾಟಕದಲ್ಲಿ ವಿಖ್ಯಾತರಾದ ಕವಿಗಳಿವರು. ಬೇಂದ್ರೆಯವರ 'ಅರಳು ಮರಳು' ಎಂಬ ಕವನ ಸಂಕಲನವು ಭಾರತ ಸರಕಾರದ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಗಳಿಸಿದೆ. ಮೈಸೂರು ವಿಶ್ವವಿದ್ಯಾಲಯವು ಇವರಿಗೆ ಡಾಕ್ಟರೇಟ ಪದವಿಯನ್ನು ಕೊಟ್ಟು ಗೌರವಿಸಿದೆ. ಇವರು ರಚಿಸಿದ 'ನಾಕು ತಂತಿ' ಎಂಬ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಜತೆಗೂಡಿ ಬಾಳಿ, ನೀತಿವಂತರಾಗಿ ಸಾಗಿ, ಕರ್ಮನಿರತರಾಗಿ, ಮುಂಬಂದು ತಾಯಿ ನೆಲದ ಸೇವೆಯನ್ನು ಮಾಡಬೇಕೆಂದು ಕವಿಗಳು ಈ ಪದ್ಯದ ಮೂಲಕ ಸಂದೇಶ ನೀಡಿದ್ದಾರೆ.)



ಯುದ್ದ ಬಂತು ಮನೆಯ ವರೆಗೆ
ಬನ್ನಿ ಒಂದಾಗಿರಿ.
ಒಳಜಗಳವ ಕ್ಷಣವೆ ನಿಲಿಸಿ
ನಮ್ಮ ಜನವ ಒಲಿದು ಒಲಿಸಿ
ತಾಯಿ ನೆಲಕೆ ಸೇವೆ ಸಲಿಸಿ
ನಿಮ್ಮ ಹಗೆಯ ತಾಗಿರಿ.

ನರ ಮನುಷ್ಯ ಒಂದೆ ಜಾತಿ
ಎಲ್ಲ ಜನಕೆ ಒಂದೆ ನೀತಿ
ಹಾಡಿರಿ ನವಕರ್ಮಗೀತಿ

ಹಾಡಿ ಮುಂದೆ ಸಾಗಿರಿ
ನೋವ ಕಂಡು ನೋಯಿರಿ
ಕೊಲೆಯಿಂದಲು ಕಾಯಿರಿ
ಅಮೃತರಾಗಿ ಸಾಯಿರಿ.

ಯಾರ ಮಕ್ಕಳೇನು ಒಂದು
ಎಲ್ಲ ಹೆಣ್ಣು ನಮಗೆ ಬಂಧು
ಇಲ್ಲಿ ಇಲ್ಲ ನಂದು ನಿಂದು
ಬಗೆದು ಇದನು ತೂಗಿರಿ

**- ದ ರಾ. ಬೇಂದ್ರೆ**

## ಅಭ್ಯಾಸ

**ಕೃತಿ 1 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ನಾವು ಏನನ್ನು ನಿಲ್ಲಿಸಬೇಕು?

..........................................................................................................

..........................................................................................................

ಆ) ಯಾವ ಗೀತೆಯನ್ನು ಕವಿ ಹಾಡೆಂದು ಹೇಳುತ್ತಾನೆ?

..........................................................................................................

..........................................................................................................

ಕ) ನಾವು ಏನನ್ನು ಕಂಡು ನೋಯಬೇಕು?

..........................................................................................................

..........................................................................................................

ಡ) ನಮ್ಮ ಬಂಧುಗಳು ಯಾರು?

..........................................................................................................

..........................................................................................................

**ಕೃತಿ 2: ಕೆಳಗಿನ ಪದಗಳಿಗೆ ಎರಡೆರಡು ಅಂತ್ಯಾಕ್ಷರಿ ಪದಗಳನ್ನು ಕವಿತೆಯಿಂದ ಆಯ್ದು ಬರೆಯಿರಿ.**

| | | |
|---|---|---|
| ನಿಲಿಸೆ – | | |
| ಜಾತಿ – | | |
| ಸಾಗಿರಿ – | | |
| ಒಂದು – | | |

**ಕೃತಿ –3 ಈ ಕವಿತೆಯ ಸಾರವನ್ನು ನಿನ್ನ ಮಾತುಗಳಲ್ಲಿ ಬರೆಯಿರಿ.**

..........................................................................................................

..........................................................................................................

..........................................................................................................

..........................................................................................................

**ಕೃತಿ 4: ಕೆಳಗಿನ ಪದಗಳಿಗೆ ತತ್ಸಮ-ತದ್ಭವ ಬರೆಯಿರಿ.**

ಯುದ್ಧ –

ಕ್ಷಣ –

ಅಮೃತ –

MH28IG


# 5. ಮನೆಯೇ ಗುಡಿಯಮ್ಮ

– ಚಿ. ಉದಯಶಂಕರ

**ಕವಿ ಪರಿಚಯ :** ಚಿ. ಉದಯಶಂಕರ ಇವರು ಚಿತ್ರ ರಂಗದಲ್ಲಿ ಹೆಸರಾಂತ ಕವಿಗಳು. ಇವರು ಬರೆದ ಅನೇಕ ಗೀತೆಗಳು ಪ್ರಸಿದ್ಧ ವಾಗಿವೆ. ಇವರು ಕವಿಯೂ ಹೌದು ಕಲಾಕಾರರು ಹೌದು. ಅನೇಕ ಚಿತ್ರಗಳಲ್ಲಿ ನಟಿಸಿದ್ದಾರೆ. ಇವರು ನಿಜವಾಗಿಯೂ ಹುಟ್ಟು ಕವಿಗಳೆ. ಇವರ ಜಿಹ್ವೆಯ ಮೇಲೆ ಸರಸ್ವತಿಯು ಸದಾ ಕುಣಿಯುತ್ತಾಳೆ ಎಲ್ಲ ಪ್ರಕಾರದ ಸಾಹಿತ್ಯದಲ್ಲಿ ಇವರು ಕವಿತೆಯನ್ನು ಬರೆದಿದ್ದಾರೆ ನೂರಾರು ಚಲನಚಿತ್ರಗಳಿಗೆ ಸಂಭಾಷಣೆ ಮತ್ತು ಗೀತೆಗಳನ್ನು ಬರೆದಿದ್ದಾರೆ. ಪ್ರಸ್ತುತ ಕವಿತೆಯಲ್ಲಿ ಮನೆಯೇ ಒಂದು ದೇವಾಲಯವು ಅದರಲ್ಲಿ ಪತಿಯೇ ದೇವರೆಂದು, ಮತ್ತು ಮಾಡುವ ಪ್ರತಿಯೊಂದು ಸೇವೆಯು ನಿನಗಾಗಿರಲಿ ಎಂದು ವರ್ಣಿಸಲಾಗಿದೆ.

ಮನೆಯೇ ಗುಡಿಯಮ್ಮ
ಪತಿಯೇ ದೇವರಮ್ಮ
ದೇವರ ಮುಂದೆ
ಕಿರುನಗೆಯೆಂಬ
ಜ್ಯೋತಿಯ ಬೆಳಗಮ್ಮ ॥ಮನೆಯೇ॥
ಸೇವೆಯೇ ನಿನ್ನ ಉಸಿರಾಗಿರಲಿ
ತ್ಯಾಗವೆ ಬಾಳಿನ ಪಲ್ಲವಿಯಾಗಲಿ
ಈ ಸಂಸಾರವೆ ಸುಖ ಸಾಗರವು
ಎನಿಸುವ ಭಾಗ್ಯವು ನಿನದಾಗಿರಲಿ ॥ಮನೆಯೇ॥
ಹಾಡುವ ಕೊರಳು ಕೋಗಿಲೆಗಾಯ್ತು
ಆಡುವ ಅಂದ ನವಿಲಿನದಾಯ್ತು
ಯಾರಿಗೆ ಏನನು ಕೊಡುವನೋ ಅವನು
ಅದನ್ನೇ ಹರುಷದಿ ಸ್ವೀಕರಿಸಮ್ಮಾ ॥ಮನೆಯೇ॥

**ಚಿ. ಉದಯಶಂಕರ**



## ಅಭ್ಯಾಸ

**ಕೃತಿ 1 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಯಾರನ್ನು ದೇವರೆಂದು ಸಂಬೋಧಿಸಲಾಗಿದೆ?

..........................................................................................................................

..........................................................................................................................

2) ಯಾವ ಜ್ಯೋತಿಯನ್ನು ಬೆಳಗಬೇಕು?

..........................................................................................................................

..........................................................................................................................

3) ಬಾಳಿನ ಪಲ್ಲವಿ ಯಾವುದಾಗಿರಬೇಕು?

..........................................................................................................................

..........................................................................................................................

4) ಯಾವ ಭಾಗ್ಯ ನಿನ್ನದಾಗಿರಬೇಕು?

..........................................................................................................................

..........................................................................................................................

5) ಯಾವುದನ್ನು ಹರುಷದಿಂದ ಸ್ವೀಕರಿಸಬೇಕು?

..........................................................................................................................

..........................................................................................................................

**ಕೃತಿ 2 ಬಿಟ್ಟ ಸ್ಥಳತುಂಬಿರಿ.**

1) ಮನೆಯೆ ..........
2) ............ ನಿನ್ನ ಉಸಿರಾಗಿರಲಿ
3) ಹಾಡುವ ............ ಕೋಗಿಲೆಗಾಯ್ತು
4) ಆಡುವ ಅಂದ ............

**ಕೃತಿ 3 ಗುಂಪಿಗೆ ಸೇರದ ಪದವನ್ನು ಹುಡುಕಿ ಬರೆಯಿರಿ.**

1) ಕೋಗಿಲೆ 2) ಕಾಗೆ 3) ಗಿಳಿ 4) ಬಾತುಕೋಳಿ ..........................................................
1) ತಂದೆ 2) ತಾಯಿ 3) ಅಣ್ಣ 4) ಪತಿ ..........................................................
1) ಮನೆ 2) ಅರಮನೆ 3) ಗೂಡು 4) ಗುಡಿಸಲು ..........................................................

**ಕೃತಿ – 4 ನಿಮ್ಮ ಊರದೇವರ ಜಾತ್ರೆಯ ನೋಟವನ್ನು ಕಲ್ಪಿಸಿಕೊಂಡು ವರದಿ ಬರೆಯಿರಿ.**

**ಕೃತಿ – 5 ಕೆಳಗಿನ ವಾಕ್ಯಗಳಲ್ಲಿ ಗೆರೆಹೊಡೆದ ಶಬ್ದದ ವಿರುದ್ಧಾರ್ಥಕ ಶಬ್ದವನ್ನು ಬಳಸಿ ಅರ್ಥಕೆಡದಂತೆ ಪುನಃ ಬರೆಯಿರಿ.**

1) ಸಂಸಾರವು **ಸುಖಿ** ಯಾಗಿರಲಿ
2) ದಿನವಿಡಿ **ಸಂತೋಷ**ದಿಂದರಬೇಕು.

**ಕೃತಿ –5 ಕೆಳಗಿನ ಗಾದೆಮಾತುಗಳನ್ನು ಪೂರ್ಣಗೊಳಿಸಿರಿ.**

1) ಹೆಣ್ಣೊಂದು ಕಲಿತರೆ..........
2) ............... ಜನನಿತಾನೆ-ಮೊದಲ ಗುರುವು.

**ಕೃತಿ 6 ಪದ್ಯದಲ್ಲಿರುವ ಚಿತ್ರವನ್ನು ನೋಡಿ 10 ಸಾಲು ಬರೆಯಿರಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................



# 6. ಸಲ್ಲದು

– ಸರೋಜನಿ ಭದ್ರಾಪೂರ





**ಕವಿ ಪರಿಚಯ :** ಕವಿ ಪರಿಚಯ– ಶ್ರೀಮತಿ ಸರೋಜನಿ ಬಧ್ರಾಪೂರರವರು ಕನ್ನಡ ಪ್ರೇಮಿಗಳು, ಕನ್ನಡ ತಾಯಿಯ ಸೇವೆಗಾಗಿ ಸದಾ ಶ್ರಮಿಸುತ್ತಿರುವವರು. ಇವರ ಅನೇಕ ಕತೆ, ಕವನ, ಲೇಖನಗಳು ಕನ್ನಡ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಈ ಕವನದಲ್ಲಿ ಮಹಾನ್ ಸ್ತ್ರೀಯರ ಸಾಹಸವನ್ನು ತೋರಿಸುವ ವರ್ಣನೆ ಮೂಡಿಬಂದಿದೆ ಇತ್ತೀಚಗೆ ಬ್ರೂಣಹತ್ಯೆಯು ಹೆಚ್ಚಾಗಿ ನಡೆಯುತ್ತಿದೆ. ಅದನ್ನು ತಡೆಯುವ ಕೂಗು ಈ ಕವನದಲ್ಲಿ ಎದ್ದು ಕಾಣುತ್ತದೆ.





12ನೆಯ ಶತಮಾನದಲ್ಲಿಯೇ ಸ್ವಾತಂತ್ರ್ಯದ ಕಹಳೆ ಊದಿದ  
ಅಕ್ಕಮಹಾದೇವಿಯು ಪ್ರಥಮ ಹೆಣ್ಣು  
ಮೊಗಲ ಸೈನ್ಯವನ್ನು ಗಂಡೆದೆಯಿಂದ ಸೋಲಿಸಿದ  
ಕೆಳದಿ ರಾಣಿ ಚೆನ್ನಮ್ಮನು ಹೆಣ್ಣು  
ಬ್ರಿಟಿಷರ ವಿರುದ್ಧ ಹೋರಾಡಿ ಥ್ಯಾಕರೆಯ ರುಂಡವನ್ನು ಚೆಂಡಾಡಿದ  
ಕಿತ್ತೂರ ರಾಣಿ ಚೆನ್ನಮ್ಮ ಹೆಣ್ಣು  
ಭಾರತದ ಇತಿಹಾಸದಲ್ಲಿ ಪ್ರಪ್ರಥಮ ಹೆಣ್ಣು ಮಕ್ಕಳ ಸೈನ್ಯವನ್ನು ಕಟ್ಟಿದ  
ಬೆಳವಡಿ ಮಲ್ಲಮ್ಮ ಹೆಣ್ಣು  
15 ವರ್ಷಗಳ ಕಾಲ ದೇಶವನ್ನು ಸುಭದ್ರವಾಗಿ ಆಳಿದ  
ಪ್ರಿಯದರ್ಶಿನಿ ಇಂದಿರಾಗಾಂಧಿ ಹೆಣ್ಣು  
ಕರ್ತವ್ಯ ನಿಷ್ಠೆಯಿಂದ ಕಾರ್ಯದಕ್ಷತೆ ವಹಿಸಿದ  
ಪೋಲಿಸ ಅಧಿಕಾರಿ ಕಿರಣಬೇಡಿ ಹೆಣ್ಣು  
ದೇಶ ಸೇವೆಯೇ ಈಶ ಸೇವೆಯೆಂದು  
ಮಮತೆಯ ಸೇವೆ ಸಲ್ಲಿಸಿದ ಮದರ ತೆರೆಸಾ ಹೆಣ್ಣು  
ಹೆದರದೇ ಹಿಮ್ಮೆಟ್ಟಿದ ಪುರುಷನ ಹೆಗಲಿಗೆ ಹೆಗಲಚ್ಚಿ  
ಗಗನಯಾತ್ರೆ ಮಾಡಿ ಅಮರಳಾದ  
ಕಲ್ಪನಾ ಚಾವಲಾ ಹೆಣ್ಣು  
ಕ್ರೀಡೆಗಳಲ್ಲಿ ನಮ್ಮ ದೇಶಕ್ಕೆ ಚಿನ್ನದ ಬೆಳ್ಳಿಯ ಪದಕಗಳನ್ನು  
ತಂದುಕೊಟ್ಟ ಸಿಂಧು, ಸಾಕ್ಷಿ ಹೆಣ್ಣು  
ಗರ್ಭದಲ್ಲಿಯೇ ಹತ್ಯೆಗೊಳ್ಳುವ ಹೆಣ್ಣಿಗೆಲ್ಲಿದೆ ಸ್ವಾತಂತ್ರ್ಯ  
ಹೆಣ್ಣು ಭ್ರೂಣ ಹತ್ಯೆ ಮಾಡಬೇಡಿ  
ಯಾವ ಭ್ರೂಣದಲ್ಲಿ ಅಕ್ಕಮಹಾದೇವಿ ಮದರ ತೆರೆಸ್ಸಾ  
ಅಡಗಿರುವವರೋ ಗೊತ್ತಿಲ್ಲ  
ಯಾರ ಭ್ರೂಣದಲ್ಲಿ ರಾಣಿ ಚೆನ್ನಮ್ಮ ಬೆಳವಡಿ ಮಲ್ಲಮ್ಮ  
ಮತ್ತೆ ಜನಿಸುವರೋ ಗೊತ್ತಿಲ್ಲ  
ಇನ್ನಾರ ಹೊಟ್ಟೆಯಲ್ಲಿ ಕಲ್ಪನಾ ಚಾವಲಾ,  
ಸಿಂಧು ಮರುಜನ್ಮ ಪಡೆಯವರೋ  
ಗೊತ್ತಿಲ್ಲ ಹೆಣ್ಣು ಭ್ರೂಣಕ್ಕೂ ಜನ್ಮಿಸಲು  
ಸ್ವಾತಂತ್ರ್ಯ ಕೊಡಿ ಅವಳಿಗೂ ಬಾಳಿ  
ಬದುಕುವ ಹಕ್ಕು ನೀಡಿ ಹೆಣ್ಣು ಭ್ರೂಣ  
ಹತ್ಯೆ ಸಲ್ಲದು ಎಂದಿಗೂ ಸಲ್ಲದು.





**ಸರೋಜನಿ ಭದ್ರಾಪೂರ**

## ಶಬ್ದಗಳ ಅರ್ಥ

ರುಂಡ - ಕುತ್ತಿಗೆ; ಮಮತೆ- ಪ್ರೀತಿ, ಹೆದರದೆ - ಅಂಜದೆ; ಗರ್ಭ-ಹೊಟ್ಟೆ..

## ಅಭ್ಯಾಸ

**ಕೃತಿ - 1 ಕೆಳಗಿನ ಸಂಗತಿಗಳನ್ನು ಹೊಂದಿಸಿರಿ**

ಕಲ್ಪನಾಚಾವಲಾ

ಸಿಂಧು ಸಾಕ್ಷಿ

ಇಂದಿರಾಗಾಂಧಿ

ಕಿರಣ ಬೇಡಿ

ವೀರ ಮಹಿಳೆ

ಕಿತ್ತೂರ ಚೆನ್ನಮ್ಮ

ಪ್ರಿಯದರ್ಶಿನಿ

ಕ್ರೀಡಾಪಟು

ಗಗನಯಾತ್ರಿ

ಪೋಲೀಸ್ ಅಧಿಕಾರಿ

**ಕೃತಿ 2 ಕೆಳಗಿನ ಗಾದೆಮಾತುಗಳನ್ನು ಪೂರ್ಣಮಾಡಿರಿ.**

1) ತೊಟ್ಟಿಲು ತೂಗುವ ಕೈ ......................................

2) ನಾರಿ ......................................

3) ಹೆಣ್ಣು ......................................

4) ಸ್ತ್ರೀ ಶಿಕ್ಷಣ ......................................

**ಕೃತಿ 3 ಕೊಟ್ಟ ಅಕ್ಷರದಿಂದ ಶಬ್ದಗಳನ್ನು ತಯಾರಿಸಿರಿ.**

1) ಕಿ ......................................

2) ಪ್ರಿ ......................................

3) ಅ ......................................

4) ರ ......................................

**ಕೃತಿ 4 ಕವಿತೆಯಲ್ಲಿಯ ಹೆಣ್ಣು ಮಕ್ಕಳ ಸಾಧನೆಗಳನ್ನು ಕುರಿತು ಶಾಲೆಯಲ್ಲಿ ಆಶುಭಾಷಣ ಸ್ಪರ್ಧೆಯನ್ನು ಏರ್ಪಡಿಸಿರಿ.**


**ಕೃತಿ 5 ಕಿತ್ತೂರು ಚೆನ್ನಮ್ಮ ಮತ್ತು ಥ್ಯಾಕರೆಯ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ವರ್ಗದಲ್ಲಿ ಅಭಿನಯಿಸಿರಿ.**

**ಕೃತಿ 6 ಕಲ್ಪನಾ ಚಾವ್ಲಾಳ ಜೀವನ- ಸಾಧನೆಗಳನ್ನು ಕುರಿತು ಮಾಹಿತಿ ಸಂಗ್ರಹಿಸಿರಿ.**

MHJZLR

# 7. ಆಧ್ಯಾತ್ಮ ಶಿಖರ

– ಶಿವಾನಂದ ಕಲಗೊಂಡ



**ಕವಿ ಪರಿಚಯ :** ಶಿವಾನಂದ ಕಲಗೊಂಡ ಇವರು ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಕನ್ನಡದ ಅಪಾರವಾದ ಅನುಭಾವಿಗಳಾಗಿದ್ದ ಕಲಗೊಂಡಅವರು ಕೆಲವು ಕವಿತೆಗಳನ್ನು ರಚಿಸಿದ್ದಾರೆ ಈ ಪದ್ಯವನ್ನು ''ವಿಜಯ ಸಿರಿ'' ಎಂಬ ಸಂಪಾದಿತ ಕವನ ಸಂಕಲನದಿಂದ ತೆಗೆದುಕೊಳ್ಳಲಾಗಿದೆ.

ಪ್ರಸ್ತುತ ಕವಿತೆಯಲ್ಲಿ ಅಕ್ಕಮಹಾದೇವಿಯ ಜೀವನ ಪರಿಚಯವನ್ನು ನಿರೂಪಿಸಿದ್ದಾರೆ.

ಉಡುತಡಿ ಎಂಬ ಊರು ಕೊಟ್ಟಿತು ನೋಡಿರಿ
ಜಗಕೊಂದು ಅಧ್ಯಾತ್ಮದ ಅದ್ಭುತ ಉಡುಗೊರೆ
ಅದುವೆ ಶರಣೆ ಅಕ್ಕ ಮಹಾದೇವಿ
ಅಕ್ಕನೆಂದರೂ ಅವಳು ಸಾಧನೆಯ ಮಹಾತಾಯಿ

ಕನ್ನಡ ಭಾಷೆಯ ಮೊದಲ ಕವಿಯಿತ್ರಿ
ಕಿರಿಯಳಾದರೂ ಹಿರಿಯ ಸಾಧನೆಗೈದ ಮಹಾಧಾತ್ರಿ
ಲೌಕಿಕದ ಜಂಜಡದಲ್ಲಿ ಸಿಲುಕಿ ತೊಳಲುವ ಜನರ
ಕಣ್ಣು ತೆರೆಸುತ ಜ್ಞಾನ ನೀಡಿದ ಮಹಾ ಮಂತ್ರಗಾತಿ

ಜೀವನದ ಕಷ್ಟಗಳ ಎದುರಿಸಿದ ಅಕ್ಕ
ತೆಯ್ದು ಚಂದನದ ಹಾಗೆ ಕಂಪುಸೂಸಿದ ತಾಯಿ
ಅನುಭವ ಮಂಟಪದಿ ಅಲ್ಲಮರ ಪ್ರಶ್ನೆಗಳ
ಅಂಜದೇ ಉತ್ತರಿಸಿ ಜ್ಞಾನನಿಧಿ ಎಂಬುದನು ತೋರಿಸಿದ ತಾಯಿ

ಅರಮನೆಯ ತೊರೆದು ಅಧ್ಯಾತ್ಮ ಶಿಖರವೇರಿದ ಅಕ್ಕ
ಬೆಟ್ಟದ ಮೇಲಿದ್ದರೂ ಮೃಗಗಳಿಗೆ ಅಂಜದಾ ತಾಯಿ
ವಿಶ್ವಗುರು ಬಸವಣ್ಣನಾ ಕೃಪೆಯನ್ನು ಪಡೆದು
ಕಲ್ಯಾಣದಲಿ ಅನುಭವ ಶಿಖರವೇರಿದ ತಾಯಿ

ಹರನೇ ಗಂಡನಾಗಬೇಕೆಂಬ ಹಂಬಲದಿ
ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವ
ಚೆನ್ನಮಲ್ಲಿಕಾರ್ಜುನನು ಒಲಿದು ಪಡೆದ ಜಗನ್ಮಾತೆ
ಕದಳಿಯ ಬನದಲ್ಲಿ ಅಮರತ್ವ ಪಡೆದ ಮಹಾಮಾತೆ

ನೀನೊಂದು ಜಗಕಂಡ ಆಧ್ಯಾತ್ಮ ನಯನ
ನಾವೆಲ್ಲ ಸಲಿಸುವೆವು ಭಕ್ತಿಯ ನಮನ

**ಶಿವಾನಂದ ಕಲಗೊಂಡ**

## ಅಭ್ಯಾಸ

**ಕೃತಿ- 1 ಕೆಳಗಿನ ಪ್ರಶ್ನೆಗಳಿಗೆ ಉತ್ತರಬರೆಯಿರಿ.**

1) ಉಡುತಡಿ ಎಂಬ ಊರು ಏನನ್ನು ಕೊಟ್ಟಿದೆ?

ಉತ್ತರ : ....................................................................................................................

....................................................................................................................................

2) ಕನ್ನಡ ಭಾಷೆಯ ಮೊದಲ ಕವಯಿತ್ರಿ ಯಾರು?

ಉತ್ತರ : ....................................................................................................................

....................................................................................................................................

3) ಅನುಭವ ಮಂಟಪದಲ್ಲಿ ಏನನ್ನು ಎತ್ತಿ ತೋರಿಸಿದರು?

ಉತ್ತರ : ....................................................................................................................

....................................................................................................................................

4) ಯಾವ ರೀತಿ ಅನುಭವದ ಶಿಖರವನ್ನು ಏರಿದರು?

ಉತ್ತರ : ....................................................................................................................

....................................................................................................................................

5) ಮಹಾದೇವಿ ಅಮರತ್ವವನ್ನು ಎಲ್ಲಿ ಪಡೆದರು?

ಉತ್ತರ : ....................................................................................................................

....................................................................................................................................

**ಕೃತಿ-2 ಕವಿತೆಯ ಬಿಟ್ಟ ಸಾಲುಗಳನ್ನು ತುಂಬಿರಿ.**


ಅರಮನೆಯ ತೊರೆದು.........

...............................


...............................

................ತೋರಿಸಿದಡಾಯಿ.

**ಕೃತಿ-3 ಕೆಳಗಿನ ಜಾಲಾಕೃತಿಯನ್ನು ಬಿಡಿಸಿರಿ.**



**ಕೃತಿ-4 ಕೆಳಗಿನ ಜಾಲಾಕೃತಿಯನ್ನು ಶಿಕ್ಷಕರಿಂದ/ಪಾಲಕರಿಂದ/ಅಂತರ್ಜಾಲದ ಸಹಾಯದಿಂದ ಬಿಡಿಸಿರಿ.**




**ಕೃತಿ-5 ನಿಮ್ಮ ಶಾಲೆಯಲ್ಲಿ ವಚನಗಾಯನ ಸ್ಪರ್ಧೆಯನ್ನು ಏರ್ಪಡಿಸಿರಿ.**


MHTVNE

# 8. ಉದರ ವೈರಾಗ್ಯ

**- ಪುರಂದರದಾಸರು**

**ಕವಿ ಪರಿಚಯ :** ಪುರಂದರದಾಸ (ಸು. 1550): ಇವರು ಶ್ರೇಷ್ಠ ಭಕ್ತಕವಿ. ವಿಷ್ಣುಭಕ್ತಿಯ ಅನೇಕ ಮುಖಗಳನ್ನು ಕೀರ್ತನೆಗಳ ಮೂಲಕ ಮನದಟ್ಟಾಗುವಂತೆ ಬಣ್ಣಿಸಿದ್ದಾರೆ, ಕರ್ನಾಟಕ ಸಂಗೀತ ಪರಂಪರೆಗೆ ಇವರ ಕೊಡುಗೆ ಗಮನಾರ್ಹವಾಗಿದೆ. ಇವರನ್ನು 'ಕರ್ನಾಟಕ ಸಂಗೀತದ ಪಿತಾಮಹ' ಎಂದು ಕರೆಯುತ್ತಾರೆ. ಅಸಂಖ್ಯ ಕೀರ್ತನೆಗಳಲ್ಲದೆ. ಉಗಾಭೋಗ, ಸುಳಾದಿ ಮುಂ. ಬೇರೆ ಸಾಹಿತ್ಯ ಪ್ರಕಾರಗಳಲ್ಲಿಯೂ ಇವರು ಕೃಷಿ ಮಾಡಿದ್ದಾರೆ. ಇವರ ಕೃತಿಗಳ ಅಂಕಿತ ''ಪುರಂದರ ವಿಠಲ''.

ನಾಮಸ್ಮರಣೆಗೆ ಭಕ್ತಿಯ ವಿಧಾನದಲ್ಲಿ ವಿಶೇಷವಾದ ಸ್ಥಾನವಿದೆ. ಶ್ರೀಹರಿಯ ನಾಮವೆಂಬುದು ಕಲ್ಲುಸಕ್ಕರೆಯಂತೆ ಸವಿಯೂ ಆರೋಗ್ಯಕರವೂ ಆದುದು; ಇದಕ್ಕೆಂದು ಹಣ ವೆಚ್ಚ ಮಾಡಬೇಕಿಲ್ಲ. ಈ ಸುಲಭೋಪಾಯವನ್ನು ನಿಷ್ಠೆಯಿಂದ ನಡೆಸಿದರೆ ಮನಕ್ಕೆ ಸಮಾಧಾನವುಂಟು. ಈ ಆಶಯವನ್ನು ಪ್ರಸ್ತುತ ಕೀರ್ತನೆಯು ಪ್ರಕಟಗೊಳಿಸಿದೆ. ಇದನ್ನು 'ಪುರಂದರದಾಸರ ಕೃತಿಶತಕಗಳು' ಎಂಬ ಗ್ರಂಥದಿಂದ ಆಯ್ಕೆ ಮಾಡಿದೆ.



ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ ॥ ಪ ॥

ಉದಯಕಾಲದಲೆದ್ದು ಗಡಗಡ
ನಡುಗುತ ।
ನದಿಯೊಳು ಮಿಂದೆವೆಂದು
ಹೇಳುತಲಿ ।
ಮದ ಮತ್ಸರ ಮೋಹ ಒಳಗೆ
ತುಂಬಿಟ್ಟುಕೊಂಡು।
ಬದಿಯಲಿದ್ದವರಿಗಾಶ್ಚರ್ಯ ತೋರುವುದು.

ಕಂಚುಗಾರರಾ ಅಂಗಡಿಯಂದದಿ ।
ಕಂಚು ಹಿತ್ತಾಳೆಯ ಪ್ರತಿಮೆಯ ನೆರಹಿ ।
ಮಿಂಚಲೆನುತೆ ಬಹು ಜೋತಿಗಳನೆ ಹಚ್ಚಿ ।
ವಂಚನೆಯಲಿ ಘನಪೂಜೆ ಮಾಡುವುದು.

ಕರದೊಳು ಜಪಮಣಿ ಬಾಯೊಳು ಮಂತ್ರವು ।
ಅರಿವೆಯ ಮುಸುಕನು ಮೋರಗೆ ಹಾಕಿ ।
ಪರಸತಿ ಪರಧನಕಾಗಿ ಚಿಂತಿಸುತೆ ।
ಪರಮ ವೈರಾಗ್ಯದ ಮೂರ್ತಿಯೆನಿಸುವುದು.

ಬೂಟಿಕತನದಲ್ಲಿ ಬಹಳ ಬಕುತಿ ಮಾಡಿ।
ನೋಟಕೆ ಇವನಿಗೆ ಸರಿಯಿಲ್ಲೆನಿಸಿ।
ನಾಟಕ ಸ್ತ್ರೀಯಂತೆ ಬಯಲ ಡಂಬವ ತೋರೆ।
ಊಟದ ಮಾರ್ಗದ ಜ್ಞಾನವಿದಲ್ಲದೆ.

ನಾನು ಎಂಬುದ ಬಿಟ್ಟು ಜ್ಞಾನಿಗಳೊಡಗೂಡಿ।
ಏನೆಲ್ಲಕೆ ದೇವಪ್ರೇರಣೆಯೆಂದು।
ಧ್ಯಾನಿಸಿ ಮೌನದಿ ಪುರಂದರವಿಠಲನ।
ಕಾಣದೆ ಮಾಡಿದ ಕಾರ್ಯಗಳೆಲ್ಲವು.

- ಪುರಂದರದಾಸರು

## ಶಬ್ದಗಳ ಅರ್ಥ

ಉದರ- ಹೊಟ್ಟೆ; ವೈರಾಗ್ಯ - ವಿರಕ್ತಿ; ಮದ - ಸೊಕ್ಕು; ಕಂಚುಗಾರ- ಕಂಚಿನ ಪಾತ್ರೆ ಮಾಡುವವ; ಡಂಬು-ಸೋಗು;

## ಅಭ್ಯಾಸ

**ಕೃತಿ-1 ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಉದಯಕಾಲದಲೆದ್ದು ಏನುಮಾಡುತ್ತಾರೆ?

.............................................................................................................................

.............................................................................................................................

2) ಮನದೊಳಗೆ ಏನು ತುಂಬಿಟ್ಟು ಕೊಂಡಿರುತ್ತಾರೆ?

.............................................................................................................................

.............................................................................................................................

3) ಘನ ಪೂಜೆಯನ್ನು ಹೇಗೆ ಮಾಡುತ್ತಾರೆ?

.............................................................................................................................

.............................................................................................................................

4) ವೈರಾಗ್ಯದ ಮೂರ್ತಿ ಎನಿಸಿಕೊಳ್ಳಲು ಏನು ಮಾಡುವರು?

.............................................................................................................................

.............................................................................................................................

5) ಯಾವರೀತಿ ಬದುಕಬೇಕೆಂದು ಕವಿ ಹೇಳುತ್ತಾರೆ?

.............................................................................................................................

.............................................................................................................................

**ಕೃತಿ-2 ಬಿಟ್ಟಸ್ಥಳ ತುಂಬಿರಿ.**

1) ..................... ನಲಿ ಲೇಶ ಭಕುತಿಯಿಲ್ಲ
2) ನದಿಯೊಳು ..................... ಹೇಳುತಲಿ
3) ಮಿಂಚಲೆನುತೆ ಬಹು ..................... ಹಚ್ಚಿ.
4) ಕರದೊಳು ಜಪಮಣಿ ಬಾಯೊಳು ..................
5) .............. ಬಹು ಬಕುತಿ ಮಾಡಿ.

**ಕೃತಿ -3 ಗುಂಪಿಗೆ ಸೇರದ ಶಬ್ದವನ್ನು ಗುರುತಿಸಿರಿ.**

| | | | |
|---|---|---|---|
| 1 ಬಾವಿ | 2. ಹಳ್ಳ | 3. ಹೊಳೆ | 4. ಕಾಲುವೆ |
| 2 ಕಟ್ಟಿಗೆ | 2. ಹಿತ್ತಾಳೆ | 3. ಕಂಚು | 4. ತಾಮ್ರ |

**ಕೃತಿ - 4 ವಾಕ್ಯದಲ್ಲಿ ಉಪಯೋಗಿಸಿರಿ.**


ಪರನಾರಿ ..........................................................................................................

ಬಕುತಿ ..............................................................................................................

ಜ್ಯೋತಿ ..............................................................................................................

**ಕೃತಿ - 5 ನಿಮ್ಮ ಪರಿಸರದಲ್ಲಿ ನಡೆಯುತ್ತಿರುವ ಮೂಢನಂಬಿಕೆ ಆಚರಣೆ ಕುರಿತು**
ಪಾಲಕರಿಂದ/ಶಿಕ್ಷಕರಿಂದ ಕೇಳಿ ಚಿಕ್ಕ ಟಿಪ್ಪಣಿ ಬರೆಯಿರಿ

**ಕೃತಿ - 6 ಪಾಲಕರಿಂದ/ಶಿಕ್ಷಕರಿಂದ/ ಅಂತರ್ಜಾಲದ ಬಳಕೆಯಿಂದ ಕೀರ್ತನಕಾರರ ಹೆಸರುಗಳನ್ನು ಬರೆಯಿರಿ.**







MX3RQ2

# 9. ಚಲಿತಮಾದುದು ಚಿತ್ತಂ

**- ನಾಗಚಂದ್ರ**

**ಕವಿ ಪರಿಚಯ :** ನಾಗಚಂದ್ರ ಕವಿ ಸುಮಾರು ಕ್ರಿ.ಶ.1100 ರಲ್ಲಿ ಇದ್ದನೆಂದೂ, ಬಿಜಾಪುರವು ಆತನ ಸ್ಥಳವೆಂದೂ ತಿಳಿದು ಬಂದಿದೆ. ಈತನು 'ಮಲ್ಲಿನಾಥಪುರಾಣ' ಎಂಬ ಹೆಸರಿನಿಂದ ಹತ್ತೊಂಬತ್ತನೆಯ ತೀರ್ಥಂಕರನ ಪುಣ್ಯಕಥೆಯನ್ನೂ, 'ರಾಮಚಂದ್ರಚರಿತಪುರಾಣ' ಎಂಬ ಜೈನರಾಮಾಯಣವನ್ನೂ ಬರೆದಿದ್ದಾನೆ. ಕ್ರಿ. ಶ. ಒಂದನೆಯ ಶತಮಾನದಲ್ಲಿದ್ದ ವಿಮಲಸೂರಿಯೆಂಬ ಕವಿಯು ಬರೆದ 'ಪಉಮಚರಿಯ' ಎಂಬ ಪ್ರಾಕೃತಗ್ರಂಥವೂ, ಎರಡನೆಯ ಶತಮಾನದಲ್ಲಿದ್ದ ರವಿಶೇಣನೆಂಬ ಕವಿ ಬರೆದ 'ಪದ್ಮ ಪುರಾಣ' ವೆಂಬ ಸಂಸ್ಕೃತಗ್ರಂಥವೂ 'ರಾಮಚಂದ್ರಚರಿತಪುರಾಣ' ಕ್ಕೆ ಆಕರಗಳೆಂದು ವಿದ್ವಾಂಸರು ಹೇಳುತ್ತಾರೆ. ಈ ಗ್ರಂಥವನ್ನು 'ಪಂಪರಾಮಾಯಣ' ವೆಂದೂ. ಕವಿಯನ್ನು 'ಅಭಿನವಪಂಪ'ನೆಂದೂ. ಜನಪ್ರಿಯವಾಗಿ ಕರೆಯುವ ರೂಢಿ ಬಂದಿದೆ.

ಪಂಪರಾಮಾಯಣವು ವಾಲ್ಮೀಕಿ ರಾಮಾಯಣದಿಂದ ಅನೇಕ ವಿಚಾರಗಳಲ್ಲಿ ಭಿನ್ನವಾಗಿದೆ. ಇಲ್ಲಿ ಯಜ್ಞ ಯಾಗಾದಿಗಳ ಮತ್ತು ಋಷಿಗಳ ಪ್ರಸಕ್ತಿಯಿಲ್ಲ. ಹನುಮಂತ ಸುಗ್ರೀವಾದಿಗಳ್ಳು ವಾನರರಲ್ಲ. ವಾನರಧ್ವಜರು; ರಾವಣಾದಿಗಳು ರಾಕ್ಷಸರಲ್ಲ. ಖೇಚರರು; ಇಲ್ಲಿನ ಹನುಮಂತ ಸಂಸಾರಿ; ಇಲ್ಲಿ ವಾಲಿಯ ವಧೆಯಿಲ್ಲ; ಮಂಥರೆಯ ಕಥೆಯಿಲ್ಲ. ಈ ಎಲ್ಲಾ ವ್ಯತ್ಯಾಸಗಳಿಗಿಂತ ಇಲ್ಲಿನ ರಾವಣನ ಪಾತ್ರಸೃಷ್ಟಿ ವಾಲ್ಮೀಕಿ ರಾಮಾಯಣದಿಂದ ಸಂಪೂರ್ಣ ಭಿನ್ನವಾಗಿದೆ. ಆತನಿಗಿರುವುದು ಹತ್ತು ತಲೆಯಲ್ಲ. ಒಂದೇ ತಲೆ; ಕನ್ನಡಿಯಲ್ಲಿ ಹತ್ತು ತಲೆಗಳು ಪ್ರತಿಬಿಂಬಿಸಿದುದರಿಂದ ಆತನು ದಶಶಿರನೆನಿಸಿದ್ದಾನೆ. ಆತನು ಪರಾಂಗನಾವಿರತಿವ್ರತವನ್ನು ಕೈಕೊಂಡಿರುವ ಮಹಾನುಭಾವ. ಭೂತ ಭವಿಷ್ಯತ್ ವರ್ತಮಾನಗಳನ್ನು ಅರಿತ ಅವಲೋಕಿನೀ ವಿದ್ಯೆ ಆತನ ಕಿಂಕರನಾಗಿದೆ. ಅಂತಹ ಪುಣ್ಯ ಪುರುಷ ದುರದೃಷ್ಟದಿಂದ ಸೀತೆಯನ್ನು ಕಂಡಾಗ ಚಲಿತಚಿತ್ತನಾಗುತ್ತಾನೆ. ಆ ಸಂದರ್ಭವನ್ನು ಇಲ್ಲಿನ ಪಠ್ಯಭಾಗದ ನಾಲ್ಕು ಪದ್ಯಗಳು ಚಿತ್ರಿಸುತ್ತಿವೆ.



ವಚನ ॥ ಆ ಸಮಯದೊಳ್ ದಶಾಸ್ಯನೊಂದು ತಣ್ಬುೞಿಲ ತಾಣದೊಳ್
ಬಱಿಸಿಡಿಲು ಬಱಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ
ಕೆಲದೊಳಿರ್ದ ಸೀತೆಯಂ ಕಂಡು

ಕಂದ ॥ ಬಲೆ ದೃಷ್ಟಿಗೆ ವಜ್ರದ
ಸಂಕಲೆಹೃದಯಕ್ಕೆನಿಪ ರೂಪವತಿ ಜಾನಕಿ ಕ।
ಣ್ಬೊಲದೊಳಿರೆ ಪದ್ಮ ಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ॥1॥

ಕಂದ ॥ ತಳತಳಸಿ ಪೊಳೆಯೆ ಸೀತೆಯ
ಚಳನಯನಂ ಖಚರಚಕ್ರವರ್ತಿಯ ಚಿತ್ತಂ ।
ಕೊಳದೊಳಗೆಳವಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾಕ್ಷಣದೊಳ್ ॥2॥

ಮ॥ ವಿ॥ ವಿಹಿತಾಚಾರಮನನ್ವ ಯಾಗತಗುಣಪ್ರಖ್ಯಾತಿಯಂ ದೃಷ್ಟನಿ
ಗ್ರಹಶಿಷ್ಟಪರಿಪಾಲನ ಕ್ಷಮೆಯಂ ಕಯ್ಗಾಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ॥3॥

ಕಂದ ॥ ಅವಿವೇಕಿ ದಶಮುಖಂ ದೃ-
ಷ್ಟಿವಿಷಾಹಿಯಂ ಪೆಡೆಯ ಮಣಿಶಲಾಕೆಗೆ
ಕಯ್ ನೀಡುವ ಗಾಂಪನಂತೆ
ರಘುವಿರವಧೂ ಜನಕಜೆಗೆ
ಮನದೊಳಳಿಪಂ ತಂದಂ ॥4॥

- ನಾಗಚಂದ್ರ

## ಕಠಿಣಪದಗಳ ಅರ್ಥ:

ದಶಾಸ್ಯ-ದಶ+ಅಸ್ಯ (ಸ. ದೀ. ಸಂ.) - ಹತ್ತು ಮುಖವುಳ್ಳವನು; ರಾವಣ. ತಣ್ಬೆಯಿಲ್-ತಂಪಾದ + ಪುಱಿಲ್-ತಣ್ಣನೆಯ ಮರಳು. ತಾಣ- ಸ್ಥಾನ (ತ್ಸ). ಬಱಿ-ವಿಡಿದು-ಹಿಂಬಾಲಿಸಿ. ಕುಡುಮಿಂಚು-ಕೊಂಕಾದ ಮಿಂಚು. ಕೆಲದೊಳಿರ್ದ-ಸಮೀಪದಲ್ಲಿದ್ದ. ಬಲಭದ್ರ-ಪರಾಕ್ರಮದಿಂದ ಮಂಗಳಕರನಾದವನು (ಶ್ರೀರಾಮ).

ಸೀತೆಯನ್ನು ಕಾಣಲೆಂದು ಬಂದ ರಾವಣನು. ತಂಪಾದ ಮರಳಿನ ಮೇಲೆ, ಬರಸಿಡಿಲನ್ನು ಅನುಸರಿಸಿ ಹೊಳೆಯುವ ಕೊಂಕಾದ ಮಿಂಚಿನಂತೆ, ಶ್ರೀರಾಮನ ಪಕ್ಕದಲ್ಲಿದ್ದ ಸೀತೆಯನ್ನು ಕಂಡನು. ಇಲ್ಲಿ ಶ್ರೀರಾಮನನ್ನು ಬರಸಿಡಿಲಿಗೂ, ಸೀತೆಯನ್ನು ಕುಡಿಮಿಂಚಿಗೂ ಹೋಲಿಸಿರುವುದು ಶ್ರೀರಾಮನ ಪರಾಕ್ರಮಕ್ಕೂ, ಸೀತೆಯ ಸೌಂದರ್ಯಕ್ಕೂ ಅತ್ಯಂತ ಉಚಿತವಾಗಿದೆ.

ಪದ್ಯ1. ಸಂಕಲೆ-ಬಂಧನ; ಬೇಡಿ. ಶೃಖಲಾ (ತ್ಸ). ಕಣ್ಬೊಲ- ಕಣ್+ಪೊಲ ದೃಷ್ಟಿಪಥ. ಜಲಬಿಂದು-ನೀರಿನ ಗುಳ್ಳೆ. ಪದ್ಮಪತ್ರ-ಕಮಲದ ಎಲೆ. ಚಲಿತಮಾದುದು-ಚಂಚಲವಾಯಿತು.

ಜಾನಕಿಯ ರೂಪಾತಿಶಯವನ್ನು ವರ್ಣಿಸುತ್ತಾ ಕವಿಯು ಇಲ್ಲಿ ಅವಳ ಸೌಂದರ್ಯವು ನೋಟಕ್ಕೆ ಬಲೆಯಂತ್ತಿತ್ತು (ನೋಟವನ್ನು ಸೀತೆಯಲ್ಲಿಯೇ ನೆಲೆಯಾಗಿ ನಿಲ್ಲಿಸುತ್ತಿತ್ತು); ಅವಳ ರೂಪವು ಹೃದಯಕ್ಕೆ ವಜ್ರದ ಸಂಕೋಲೆಯಂತಿತ್ತು. (ಹೃದಯವು ಚಲಿಸದೆ ಆಕೆಯಲ್ಲಿಯೇ ಅನುರಕ್ತವಾಗಿರುವಂತೆ ಇತ್ತು) ಎಂದು ಹೇಳಿದ್ದಾನೆ. ಅವಳನ್ನು ಕಂಡ ರಾವಣನ ಮನಸ್ಸು ತಾವರೆಯ ಎಲೆಯ ಮೇಲಿನ ನೀರಿನ ಹನಿಯಂತೆ ಚಂಚಲವಾಯಿತು ಎಂದು ಹೇಳುತ್ತಾನೆ. ಇಲ್ಲಿ ಕವಿಯ ವರ್ಣನಾವೈಖರಿಯು ಅತ್ಯಂತ ಮನೋಹರವಾಗಿದೆ. ಹೃದಯಕ್ಕೆ ಸಂಕೋಲೆ, ಅದರಲ್ಲಿಯೂ ವಜ್ರದ ಸಂಕೋಲೆಯೆಂದು ಹೇಳಿರುವುದೂ. ದೃಷ್ಟಿಗೆ ಬಲೆಯಂತೆ ಎಂದು ಹೇಳಿರುವುದೂ ಸೊಗಸಾದ ಉಪಮಾನಗಳು.

ಪದ್ಯ 2. ಚಳನಯನ-ಚಂಚಲವಾದ ಕಣ್ಣು; ಹೊಳೆಯುವ ಕಣ್ಣು, ಖಚರ ಚಕ್ರವರ್ತಿ- ಗಂಧರ್ವರಾಜನಾದ ರಾವಣ. ಎಳವಾಳೆ-ಎಳೆಯ+ಬಾಳೆ (ಇಲ್ಲಿ ಬಕಾರಕ್ಕೆ ವಕಾರಾದೇಶವಾಗಿರುವುದನ್ನು ಗಮನಿಸಿ)-ಎಳೆಯ ಮೀನಂಗಳು, ತೆಱಂಬೊಳೆ-ವಿಶೇಷವಾಗಿ ಹೊಳೆಯುವುದು. ಕಲಂಕು-ಕಲಕು. ಕದಡು-ಬಗ್ಗಡವಾಗು.

ಸೀತೆಯ ಕಣ್ಣಿನ ಹೊಳಪು ರಾವಣನ ಹೃದಯವನ್ನು ಅಲ್ಲೋಲಕಲ್ಲೋಲವಾಗಿ ಮಾಡಿತು ಅವನ ಮನಸ್ಸು ಕೊಳದೊಳಗೆ ಬಳ ಬಳ ಈಜಾಡುವ ಎಳೆಯ ಮೀನುಗಳಂತೆ ಚಂಚಲ ವಾಯಿತು.

ಪದ್ಯ 3. ವಿಹಿತ-ಉಚಿತ, ಅನ್ವಯಾಗತ-ವಂಶಪರಂಪರೆಯಾಗಿ ಬಂದ. ಕ್ಷಮೆ-ತಾಳ್ಮೆ. ಕೈಗಾಯ್-ರಕ್ಷಿಸು. ಅನ್ಯಾಂಗನಾಸ್ಪೃಹೆ-ಪರಸ್ತ್ರೀಯಲ್ಲಿ ಆಸೆ. ವಿಸ್ಮಯಾವಹಮಲ್ತು - ಆಶ್ಚರ್ಯವಲ್ಲ. ಅಬ್ಧಿ-ಸಮುದ್ರ. ಮರ್ಯಾದೆ-ಎಲ್ಲೆ.

ರಾವಣನು ಸ್ವಾಭಾವಿಕವಾಗಿ ಸತ್ಪುರುಷನ ಲಕ್ಷಣವನ್ನು ಹೊಂದಿದ್ದನು. ಅವನು ಪರಾಂಗನಾವಿರತಿವ್ರತವನ್ನು ಕೈಗೊಂಡಿದ್ದವನು. ಆದರೂ ಸೀತೆಯ ಸೌಂದರ್ಯದಿಂದ ಅವನು ತಪ್ಪು ಹಾದಿಯನ್ನು ತುಳಿದುದನ್ನು ಇಲ್ಲಿ ವರ್ಣಿಸಲಾಗಿದೆ. ಅವನು ಸದಾಚಾರವನ್ನೂ, ತನ್ನ ವಂಶಾನುಗತವಾಗಿ ಬಂದ ಸದ್ಗುಣದ ಕೀರ್ತಿಯನ್ನೂ. ದುಷ್ಟರನ್ನು ಶಿಕ್ಷಿಸಿ. ಶಿಷ್ಟರನ್ನು ರಕ್ಷಿಸುವ ತನ್ನ ಕ್ಷಮಾಗುಣವನ್ನೂ ಬಿಟ್ಟು ಪರಸ್ತ್ರಿಯಲ್ಲಿ ಮೋಹಗೊಂಡವನಾದನು. ಇದು ಆ ಸಂದರ್ಭದ ಪ್ರಭಾವ. ಸಮುದ್ರವು ರಾತ್ರಿಯಾಗುತ್ತಲೆ ಉಬ್ಬಿ ತನ್ನ ದಡವನ್ನು ಮೀರಿ ಹರಿಯುತ್ತದೆ. ಅದರಂತೆ ಲಂಕೇಶ್ವರನಾದ ರಾವಣನೂ ಸೀತೆಯ ಮೋಹದಿಂದ ತನ್ನ ಸ್ವಾಭಾವಿಕವಾದ ಮರ್ಯಾದೆಯನ್ನು ಮೀರಿದನು. ಇಲ್ಲಿ ರಾವಣನನ್ನು ಸಾಗರಕ್ಕೆ ಹೋಲಿಸುವುದು ಅವನ ಮಹತ್ತನ್ನು ಸೂಚಿಸುತ್ತದೆ. ಸಾಗರವೂ ಎಲ್ಲೆ ಮೀರುವಂತೆ ಮಹಾಪುರುಷನಾದ ರಾವಣನಂ ತನ್ನ ಸದ್ಗುಣಗಳ ಎಲ್ಲೆಯನ್ನು ಮೀರಿದನು. (ಅರ್ಥಾಂತರನ್ಯಾಸಾಲಂಕಾರ).

ಪದ್ಯ 4. ದೃಷ್ಟಿವಿಷಾಹಿ- ತನ್ನ ದೃಷ್ಟಿಯಿಂದಲೇ ವಿಷವನ್ನು ವ್ಯಾಪಿಸುವಂತೆ ಮಾಡುವ ಹಾವು. ಪೆಡೆ-ಹೆಡೆ. ಮಣಿಶಲಾಕೆ-ರತ್ನದಂಡ. ಗಾಂಪ-ದಡ್ಡ. ರಘುವೀರ ವಧೂ- ಶ್ರೀರಾಮನ ಹೆಂಡತಿ; ಸೀತೆ. ಆಳಿಪು -ದುರಾಸೆ.

ಕೇವಲ ದೃಷ್ಟಿಯಿಂದಲೇ ವಿಷದ ವ್ಯಾಪನೆಯಾಗುವ ಹಾವಿನ ಹೆಡೆಯಲ್ಲಿರುವ ರತ್ನಕ್ಕೆ ಆಸೆಪಟ್ಟು, ಅದಕ್ಕೆ ಕೈಹಾಕುವ ದಡ್ಡನಂತೆ ಅವಿವೇಕಿಯಾದ ರಾವಣನು ರಘುವೀರನ ಮಡದಿಯಾದ ಜಾನಕಿಯಲ್ಲಿ ಮೋಹಗೊಂಡನು. ಶ್ರೀರಾಮನು ದೃಷ್ಟಿವಿಷಾಹಿಯಿದ್ದಂತೆ; ಸೀತೆ ಆ ವಿಷಾಹಿಯ ಹೆಡೆಯಲ್ಲಿರುವ ಮಣಿಶಲಾಕೆಯಂತೆ. ಅವಳನ್ನು ಬಯಸುವುದು ಶುದ್ಧ ಅವಿವೇಕತನ.

## ಅಭ್ಯಾಸ

**ಕೃತಿ-1 ಈ ಕೆಳಗಿನ ಪದಗಳಿಗೆ ಹೊಸಗನ್ನಡದ ರೂಪ ಬರೆಯಿರಿ.**

1) ಚಲಿತಮಾದುದು
2) ಚಳನಯನ
3) ಅಬ್ಧಿ
4) ಅಳಿವು


**ಕೃತಿ-2 ಈ ಕೆಳಗಿನ ಅಲಂಕಾರಗಳನ್ನು ಗುರುತಿಸಿ ಬರೆಯಿರಿ.**

1) ಬಱಸಿಡಿಲು ಬಱಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು.
2) ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ.
3) ವಿಷಾಹಿಯ ಪಡೆಯ ಮಣಿಶಲಾಕೆಗೆ ಕೈನೀಡುವ ಗಾಂಪನಂತೆ.

**ಕೃತಿ-3 ಈ ಕೆಳಗಿನ ಪದಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ.**

**ದಶಾಸ್ಯ, ಕುಡುಮಿಂಚು, ಎಳವಾಳೆ, ದಶಮುಖ**

**ಕೃತಿ-4 ಈ ಪದ್ಯದಲ್ಲಿ ಬಂದ ಹೆಸರು ಬರೆಯಿರಿ.**



ಕೃತಿ-5 1. ಖಚರ ಚಕ್ರವರ್ತಿಯ ಚಿತ್ತವು ಚಲಿತವಾದುದು ಹೇಗೆ

2. ಜಾನಕಿಯ ರೂಪಸಂಪತ್ತು ಹೇಗಿತ್ತೆಂದು ಕವಿ ವರ್ಣಿಸಿದ್ದಾನೆ?

.................................................................................................

.................................................................................................

3. ರಾವಣನ ಹೃದಯವು ಕಲಂಕಿದುದನ್ನು ಕವಿ ಹೇಗೆ ವರ್ಣಿಸಿದ್ದಾನೆ?

.................................................................................................

.................................................................................................

4. ರಘುವೀರನ ವಧುವಾದ ಜನಕಜೆಯಲ್ಲಿ ಮೋಹಗೊಂಡುದು ಏಕೆ ಮೂಢತನ

.................................................................................................

.................................................................................................

ಕೃತಿ-6 ಈ ಪದ್ಯವನ್ನು ಸರಳಾನುವಾದ ಮಾಡಿ ಬರೆಯಿರಿ.

ಕೃತಿ-7 ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

1. ''ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ''

.................................................................................................

.................................................................................................

2. ''ಆಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ ?''

.................................................................................................

.................................................................................................

3. ''ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕೈನೀಡುವ ಗಾಂಪನಂತೆ''

.................................................................................................

.................................................................................................

4. ''ಕೊಳದೊಳಗೆಳವಾಳೆ ತೆಱಂಬೊಳೆವಂತೆ''

.................................................................................

.................................................................................

# 1. ಲೇಖನ ಚಿಹ್ನೆಗಳು

## ವ್ಯಾಕರಣ ವಿಭಾಗ

ಬರೆವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಮುಖ್ಯವಾದುದು. ಲೇಖನ ಚಿಹ್ನೆಗಳಿಲ್ಲದ ಬರೆವಣಿಗೆ ಸ್ಪಷ್ಟಾರ್ಥವನ್ನು ಕೊಡದೆ ತೊಡಕುಗಳಿಗೆ ಕಾರಣವಾಗುವುದುಂಟು. ಹಾಗಾಗಿ ಲೇಖನ ಚಿಹ್ನೆಗಳು ಅತ್ಯಂತ ಅಗತ್ಯ. ಇಲ್ಲಿ ಕೊಟ್ಟಿರುವ ವಿವರಗಳನ್ನು ಗಮನಿಸಿ.

**ಪೂರ್ಣ ವಿರಾಮ** : (.) ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು.

ಉದಾ :- ವಿದ್ಯಾರ್ಥಿಗಳು ಪದ್ಯವನ್ನು ಹಾಡುತ್ತಾರೆ.

**ಅರ್ಧ ವಿರಾಮ** : (;) ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಆಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ :- ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ** : (,) ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

ಉದಾ :- ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ** : (?) ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

ಉದಾ :-ದಾಶರಥಿ ಯಾರು?

**ಭಾವಸೂಚಕ** : (!) ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ :- ಅಯ್ಯೋ! ಹೀಗಾಗಬಾರದಿತ್ತು!

**ಉದ್ಧರಣ ಚಿಹ್ನೆ** : (“ ”) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ :- “ಶಿಕ್ಷಣವು ಕೇಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು” ಎಂದು ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದರು.

**ವಾಕ್ಯವೇಷ್ಟನ ಚಿಹ್ನೆ** : (‘ ’) ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ :- ಕನ್ನಡ ಭಾಷೆಯಲ್ಲಿ ‘ಇಂಗ್ಲೀಷ್’, ‘ಪರ್ಷಿಯನ್’, ‘ಪೋರ್ಚ್‌ಗೀಸ್’, ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ** : () ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ :- ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ** : (:) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ :- **ಪಂಚಮಹಾವಾದ್ಯಗಳು:** ತಾಳ, ಹಳಗ, ಗಂಟೆ, ಮೌರಿ, ಸನಾದಿ.

## ● ವಿಭಕ್ತಿ ಪ್ರತ್ಯಯಗಳು ●

ನಾಮ ಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆಬೇರೆ ಅರ್ಥ ಉಂಟುಮಾಡುವ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯ ಎಂದು ಹೆಸರು. ಪ್ರಕೃತಿಗೆ ಸ್ವತಂತ್ರವಾದ ಅರ್ಥವಿದೆ. ಆದರೆ ಪ್ರತ್ಯಯ ಸಾಮಾನ್ಯವಾಗಿ ಸ್ವತಂತ್ರವಾದ ಅರ್ಥವಿರುವದಿಲ್ಲ. ಅದು ಪ್ರಕೃತಿಯ ಜೊತೆಗೆ ಸೇರಿದಾಗ ಮಾತ್ರ ಅರ್ಥವನ್ನು ಪಡೆದುಕೊಳ್ಳುತ್ತದೆ.

| | ವಿಭಕ್ತಿಯ ಹೆಸರು | ವಿಭಕ್ತಿ ಪ್ರತ್ಯಯ | ಉದಾ: |
|---|---|---|---|
| 1. | ಪ್ರಥಮಾ | ಉ | ಮರ + ಉ = ಮರವು |
| 2. | ದ್ವಿತೀಯಾ | ಅನ್ನು | ಮರ + ಅನ್ನು = ಮರವನ್ನು |
| 3. | ತೃತೀಯಾ | ಇಂದ | ಮರ + ಇಂದ = ಮರದಿಂದ |
| 4. | ಚತುರ್ಥೀ | ಗೆ, ಇಗೆ, ಕೆ, ಅಕ್ಕೆ | ಮರ + ಕ್ಕೆ = ಮರಕ್ಕೆ |
| 5. | ಪಂಚಮಿ | ದೆಸೆಯಿಂದ | ಮರ + ದೆಸೆಯಿಂದ = ಮರದ ದೆಸೆಯಿಂದ |
| 6. | ಷಷ್ಠಿ | ಅ | ಮರ + ಅ = ಮರದ |
| 7. | ಸಪ್ತಮಿ | ಅಲ್ಲಿ | ಮರ + ಅಲ್ಲಿ = ಮರದಲ್ಲಿ |
| 8. | ಸಂಬೋಧನ | ಏ, ಇರ | ಹುಡುಗನ + ಏ = ಹುಡುಗನೇ |

●●●

## 2. ನಾಮಪದ

ನಾಮ ಎಂದರೆ ಹೆಸರು, ನಾಮಪದ ಎಂದರೆ ಹೆಸರನ್ನು ಹೇಳುವ ಪದ. ವ್ಯಕ್ತಿ, ವಸ್ತು, ಪ್ರಾಣಿ ಹಾಗೂ ಸ್ಥಳಗಳ ಹೆಸರನ್ನು ತಿಳಿಸುವ ಪದವು **ನಾಮಪದ.**

ಉದಾ:

| ವ್ಯಕ್ತಿ | ವಸ್ತು | ಪ್ರಾಣಿ | ಸ್ಥಳ |
|---|---|---|---|
| ಅರ್ಜುನ | ಮನೆ | ಬೆಕ್ಕು | ಧಾರವಾಡ |
| ಪುಷ್ಪಾ | ಪೆಟ್ಟಿಗೆ | ನಾಯಿ | ಬೆಂಗಳೂರು |
| ಜ್ಯೋತಿ | ಪುಸ್ತಕ | ಹುಲಿ | ಮಂಗಳೂರು |

**ನಾಮಪ್ರಕೃತಿ:** ನಾಮಪದದ ಮೂಲರೂಪವನ್ನು **ನಾಮಪ್ರಕೃತಿ** ಎನ್ನುತ್ತಾರೆ.

ಉದಾ:

| ನಾಮಪ್ರಕೃತಿ | + | ವಿಭಕ್ತಿ ಪ್ರತ್ಯ | = | ನಾಮಪದ |
|---|---|---|---|---|
| ಮನೆ | + | ಅ | = | ಮನೆಯ |

## ಕ್ರಿಯಾಪದ

ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ಕೊಡುವ ಪದಗಳು ಕ್ರಿಯಾಪದ ಎನಿಸುತ್ತವೆ. ಭಾಷೆಯಲ್ಲಿ ಕ್ರಿಯಾಪದವು ತುಂಬಾ ಮುಖ್ಯವಾದುದು. ಅದು ಕರ್ತೃವಿನ ಕಾರ್ಯವನ್ನು ಹೇಳುತ್ತದೆ. ಕನ್ನಡದಲ್ಲಿ ಕಾಲ ಪ್ರತ್ಯಯವನ್ನು ಹಚ್ಚಿದಾಗ ಕರ್ತೃವಿನ ಲಿಂಗ-ವಚನಗಳಿಗೆ ಅನುಗುಣವಾಗಿ ಕ್ರಿಯಾಪದ ವರ್ತಿಸುತ್ತದೆ.

**ಉದಾಹರಣೆ:**

1. ಭೂಮಿಕಾ ಆಟವನ್ನು ಆಡುತ್ತಾಳೆ.
2. ತೇಜಸ್ ಕ್ರೀಡಾಂಗಣಕ್ಕೆ ಹೋಗುತ್ತಾನೆ.
3. ಆಯೆಷಾ ಕಾಗದವನ್ನು ಬರೆಯುವಳು.
4. ರಾಬರ್ಟ್ ನಿನ್ನೆ ಊರಿಗೆ ಹೋದನು.
5. ರೂಪ ಪುಸ್ತಕವನ್ನು ಕೊಟ್ಟಳು.
6. ವಿವೇಕ ನಾಳೆ ಬಂದಾನು

ಈ ಎಲ್ಲಾ ವಾಕ್ಯಗಳ ಕೊನೆಯ ಪದಗಳು ಸಂಪೂರ್ಣವಾದ ಅರ್ಥವನ್ನು ಕೊಡುವ ಕ್ರಿಯೆಯನ್ನು ತಿಳಿಸುವ ಪದಗಳಾಗಿವೆ. ಇವನ್ನು ಸಾಮಾನ್ಯವಾಗಿ ಕ್ರಿಯಾಪದಗಳು ಎನ್ನುತ್ತೇವೆ.

## ಧಾತು

ಕ್ರಿಯಾಪದದ ಮೂಲರೂಪವು ಧಾತು ಎನಿಸುವುದು.

ಇದು ಕ್ರಿಯಾರ್ಥ ಕೊಡುವ ಪ್ರತ್ಯಯ ರಹಿತ ಶಬ್ದವಾಗಿರುತ್ತದೆ.

ಉದಾಹರಣೆ: ಮಾಡು, ನೋಡು, ಹೋಗು.

ಧಾತು ಯಾವಾಗಲೂ ದ್ವಿತೀಯ ಪುರುಷ ಏಕ ವಚನದಲ್ಲಿರುತ್ತದೆ.

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| ಮಾಡುತ್ತಾನೆ | ಮಾಡುತ್ತಾಳೆ | ಮಾಡುತ್ತದೆ |
| ಮಾಡಿದನು | ಮಾಡಿದಳು | ಮಾಡಿತು |
| ಮಾಡುವನು | ಮಾಡುವಳು | ಮಾಡುವುದು |
| ಮಾಡಲಿ | ಮಾಡಲಿ | ಮಾಡಲಿ |
| ಮಾಡಾನು | ಮಾಡಾಳು | ಮಾಡೀತು |
| ಮಾಡನು | ಮಾಡಳು | ಮಾಡದು |

ಮೂರೂ ಲಿಂಗಗಳಲ್ಲಿ ಉದಾಹರಣೆಯಾಗಿ ನೀಡಿರುವ ಈ ಎಲ್ಲಾ ಪದಗಳು ಕ್ರಿಯಾಪದಗಳಾಗಿವೆ. ಈ ಎಲ್ಲಾ ಕ್ರಿಯಾಪದಗಳಿಗೂ 'ಮಾಡು' ಎಂಬ ಶಬ್ದ ಮೂಲವಾಗಿದೆ. ಇದು ಕ್ರಿಯೆಯ ಅರ್ಥವನ್ನು ಕೊಡುವ ಮೂಲಪದವಾಗಿದೆ. ಇದನ್ನು 'ಧಾತು' ಎನ್ನುತ್ತೇವೆ.

ಧಾತುವಿನಲ್ಲಿ 2 ವಿಧಗಳಿವೆ. 1) ಮೂಲ ಧಾತು 2) ಸಾಧಿತು ಧಾತು

### 1. ಮೂಲ ಧಾತು

ಸ್ವತಂತ್ರವಾದ ಧಾತುಗಳು 'ಮೂಲಧಾತು' ಎನಿಸುತ್ತವೆ. ಇವು ದಿನ ನಿತ್ಯದ ಬಳಕೆಯಲ್ಲಿ ಹೇರಳವಾಗಿ ಸಿಗುತ್ತವೆ.
ಉದಾಹರಣೆ:

| | | |
|---|---|---|
| ನೋಡು | ಏಳು | ಆರಸು |
| ಮಾಡು | ನಿಲ್ಲು | ಬಳಸು |
| ಆಡು | ಬಾಗು | ಹುಡುಕು |
| ಬೇಡು | ಹೋಗು | ಬೆಳಗು |

### 2. ಸಾಧಿತ ಧಾತು

ಪ್ರತ್ಯಯಗಳನ್ನು ಸೇರಿಸಿ ಪಡೆಯುವ ಧಾತುಗಳು 'ಸಾಧಿತು ಧಾತು'ಗಳು ಎನಿಸುವುವು.

ಕನ್ನಡ ನಾಮ ಪ್ರಕೃತಿ ಮತ್ತು ಸಂಸ್ಕೃತ ನಾಮ ಪ್ರಕೃತಿ ಮತ್ತು ಅನುಕರಣ ಶಬ್ದಗಳಿಗೆ 'ಇಸು' ಪ್ರತ್ಯಯ ಸೇರಿಸಿದಾಗ ಸಾಧಿತ ಧಾತುಗಳಾಗುವುವು.

ಉದಾಹರಣೆ 1 : ನಾಮ ಪ್ರಕೃತಿಗೆ 'ಇಸು' ಸೇರಿಸಿದಾಗ

| | ಕ್ರ. ಸಂ. | ನಾಮ ಪ್ರಕೃತಿ | ಇಸು ಪ್ರತ್ಯಯ | ಧಾತು | ಕ್ರಿಯಾಪದ |
|---|---|---|---|---|---|
| ಕನ್ನಡ | 1 | ಕನ್ನಡ | ಇಸು | ಕನ್ನಡಿಸು | ಕನ್ನಡಿಸದನು |
| | 2 | ಅಬ್ಬರ | ಇಸು | ಅಬ್ಬರಿಸು | ಅಬ್ಬರಿಸದನು |
| ಸಂಸ್ಕೃತ | 3 | ಸಾಧನೆ | ಇಸು | ಸಾಧಿಸು | ಸಾಧಿಸುತ್ತಾನೆ |
| | | ಸ್ಥಾಪನೆ | ಇಸು | ಸ್ಥಾಪಿಸು | ಸ್ಥಾಪಿಸುತ್ತಾನೆ |

ಉದಾಹರಣೆ 2 : ಅನುಕರಣ ಶಬ್ದಕ್ಕೆ 'ಇಸು' ಸೇರಿಸಿದಾಗ

| ಕ್ರ. ಸಂ. | ಅನುಕರಣ ಶಬ್ದ | ಪತ್ಯಯ | ಧಾತು | ಕ್ರಿಯಾಪದ |
|---|---|---|---|---|
| 1 | ಚಟಚಟ | ಇಸು | ಚಟಚಟಿಸು | ಚಟಚಟಿಸಿತು |
| 2 | ಫಳಫಳ | ಇಸು | ಫಳಫಳಿಸು | ಫಳಫಳಿಸಿತು |
| 3 | ಧಗಧಗ | ಇಸು | ಧಗಧಗಿಸು | ಧಗಧಗಿಸಿತು |
| 4 | ಪಟಪಟ | ಇಸು | ಪಟಪಟಿಸು | ಪಟಪಟಿಸಿತು |

ಕ್ರಿಯೆಯನ್ನನುಸರಿಸಿ ಧಾತುವಿನಲ್ಲಿ ಎರಡು ವಿಭಾಗಗಳು ಇವೆ,

### 1. ಸಕರ್ಮಕ ಧಾತು

ಕರ್ಮಪದವನ್ನು ಹೊಂದಿರುವ ಧಾತು 'ಸಕರ್ಮಕ ಧಾತು' ಎನಿಸುವುದು.

ಉದಾಹರಣೆ

| ಕ್ರ. ಸಂ. | ಕರ್ತೃಪದ | ಕರ್ಮಪದ | ಕ್ರಿಯಾಪದ | ಧಾತು |
|---|---|---|---|---|
| 1 | ನಿಹಾರಿಕಾ | ಹಾಡನ್ನು | ಹಾಡಿದನು | ಹಾಡು |
| 2 | ಇಂದುಶೇಖರ್ | ದೂರದರ್ಶನವನ್ನು | ನೋಡಿದನು | ನೋಡು |
| 3 | ಮಕ್ಕಳು | ಪಾಠವನ್ನು | ಓದಿದರು | ಓದು |
| 4 | ಹಳ್ಳಿಗಳು | ಹಬ್ಬವನ್ನು | ಮಾಡಿದರು | ಮಾಡು |
| 5 | ಮೇರಿಯು | ಕವಿತೆಯನ್ನು | ಕೇಳಿದಳು | ಕೇಳು |

ಇಲ್ಲಿನ ವಾಕ್ಯಗಳಲ್ಲಿ ಕರ್ಮಪದ ಇರುವುದನ್ನು ಗಮನಿಸಿ.

### 2. ಅಕರ್ಮಕ ಧಾತು

ಕರ್ಮಪದವನ್ನು ಹೊಂದಿರದ ಧಾತು 'ಅಕರ್ಮಕ ಧಾತು' ಎನಿಸುವುದು

ಉದಾಹರಣೆ

| ಕ್ರ. ಸಂ. | ಕರ್ತೃಪದ | ಕ್ರಿಯಾಪದ | ಧಾತು |
|---|---|---|---|
| 1 | ಆನಂದ | ಓಡಿದನು | ಓಡು |
| 2 | ಅರವಿಂದ | ಮಲಗಿದನು | ಮಲಗು |
| 3 | ಮಗು | ಸೊರಗಿತು | ಸೊರಗು |
| 4 | ಮರಗಳು | ಬೆಳೆದವು | ಬೆಳೆ |
| 5 | ನಕ್ಷತ್ರಗಳು | ಹೊಳೆದವು | ಹೊಳೆ |

ಈ ವಾಕ್ಯಗಳಲ್ಲಿ ಕರ್ಮಪದವೇ ಇಲ್ಲ. ಹೀಗಾಗಿ ಇದು ಅಕರ್ಮಕ ದಾತು ಎನಿಸುವುದು.

### ಆ. ವಿಧ್ಯರ್ಥಕ ಕ್ರಿಯಾಪದ

ಆಶೀರ್ವಾದ ಆಜ್ಞೆ, ಹಾರೈಕೆ ಮತ್ತು ಫ್ರಾರ್ಥನಾ ಸ್ವರೂಪವನ್ನು ವ್ಯಕ್ತಪಡಿಸುವುದಕ್ಕೆ ವಿಧ್ಯರ್ಥಕ ಪ್ರತ್ಯಯಗಳು ಸೇರಿದಾಗ ಉಂಟಾಗುವ ಕ್ರಿಯಾಪದ ವಿಧ್ಯರ್ಥಕ ಎನಿಸುವುದು.

ಉದಾಹರಣೆ: **ಆಶೀರ್ವಾದ**

1. ಸಾವಿತ್ರಿಗೆ ಶುಭವಾಗಲಿ (ಆಗು + ಅಲಿ = ಆಗಲಿ)
2. ನಿನಗೆ ಕನ್ನಡ ತಾಯಿಯು ಒಳ್ಳೆಯದು ಮಾಡಲಿ (ಮಾಡು + ಅಲಿ = ಮಾಡಲಿ)

**ಆಜ್ಞೆ**

1. ವಿದ್ಯಾರ್ಥಿಗಳು ಎದ್ದು ನಿಲ್ಲಲಿ. (ನಿಲ್ಲು + ಅಲಿ = ನಿಲ್ಲಲಿ)
2. ಗಲಾಟೆ ಮಾಡುವ ವಿದ್ಯಾರ್ಥಿಗಳು ಹೊರಗೆ ಹೋಗಲಿ (ಹೋಗು + ಅಲಿ = ಹೋಗಲಿ)
3. ವಿದ್ಯಾರ್ಥಿಗಳು ಕೆಟ್ಟ ಮತ್ತು ಆಡಕೂಡದು
4. ನೀನು ಈ ಕಾರ್ಯವನ್ನು ಮಾಡು.
5. ನೀನು ನಾಳೆ ಬೆಂಗಳೂರಿಗೆ ಹೋಗಬೇಕು.

**ಪ್ರಾರ್ಥನೆ**

1. ನೀವು ದಯಮಾಡಿ ಬನ್ನಿ.
2. ಈ ಕಾಫಿ ಕುಡಿಯಿರಿ.

**ಆ. ನಿಷೇಧಾರ್ಥಕ**

ಕ್ರಿಯೆ ನಡೆಯಲಿಲ್ಲ ಎಂಬ ಅರ್ಥ ತೋರುವ ಧಾತುಗಳಿಗೆ ಆಖ್ಯಾತ ಪ್ರತ್ಯಯ ಸೇರಿದಾಗ ಉಂಟಾಗುವ ಕ್ರಿಯಾಪದ ನಿಷೇಧಾತ್ಮಕ ಎನಿಸುವುದು.

ಉದಾಹರಣೆ

1. ವೀಣಾ ಊಟವನ್ನು ಮಾಡಳು.
2. ತೇಜಸ್ ಶಾಲೆಗೆ ಬಾರನು.
3. ಮಕ್ಕಳು ಊರಿಗೆ ಹೋಗರು.
4. ತನುಶ್ರೀ ಪಾತ್ರವನ್ನು ಮಾಡಳು.
5. ವಿದ್ಯಾರ್ಥಿಗಳು ಜಗಳವನ್ನು ಆಡರು
6. ಅವನು ಕೆಲಸವನ್ನು ಮಾಡಲಾರ

**ಇ. ಸಂಭಾವನಾರ್ಥ**

ಕ್ರಿಯೆ ನಡೆಯುವಿಕೆಯಲ್ಲಿ ಸಂದೇಹ, ಊಹೆ ತೋರುವ ಧಾತುಗಳಿಗೆ ಆಖ್ಯಾತ ಪ್ರತ್ಯಯ ಸೇರಿದಾಗ ಉಂಟಾಗುವ ಕ್ರಿಯಾಪದವು ಸಂಭಾವನಾರ್ಥ ಎನಿಸುವುದು.

## ● ಸರ್ವನಾಮ ●

ನಾಮಪದಕ್ಕೆ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮ ಎಂದು ಹೆಸರು. ಇದರಲ್ಲಿ 4 ವಿಧಗಳುಂಟು.

**1 ಪುರುಷವಾಚಕ ಸರ್ವನಾಮ**

| ಕ್ರ. ಸಂ. | ಪುರುಷ | ಲಿಂಗ | ಏಕವಚನ | ಬಹುವಚನ |
|---|---|---|---|---|
| 1 | ಪ್ರಥಮ | ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | ಅವನ<br>ಅವಳು<br>ಅದು | ಅವರು<br>ಅವರು<br>ಅವು |
| 2 | ಮಧ್ಯಮ | | ನೀನು | ನೀವು |
| 3 | ಉತ್ತಮ | | ನಾನು | ನಾವು |

**2. ಪ್ರಶ್ನಾರ್ಥಕ ಸರ್ವನಾಮ**

ಪ್ರಶ್ನೆಗಳನ್ನು ಕೇಳುವುದರಿಂದ **ಪ್ರಶ್ನಾರ್ಥಕ ಸರ್ವನಾಮ** ಎನಿಸುವವು.

ಉದಾ: ಯಾರು ಅವಳು?

ಯಾವ ಊರು ನಿನ್ನದು?

ಏನು ಬೇಕು ನಿನಗೆ?

**3. ಆತ್ಮಾರ್ಥಕ ಸರ್ವನಾಮ**

'ತಾವು-ತಾನು' ಎಂಬ ರೂಪಗಳು **ಆತ್ಮಾರ್ಥಕ ಸರ್ವನಾಮ** ಎನಿಸುವವು.

ಉದಾ: ಅವನು ತನ್ನ ಪಾಡಿಗೆ **ತಾನು** ಹೋದನು.

ಅವರು ತಮ್ಮ ಪಾಡಿಗೆ **ತಾವು** ಬಂದರು.

**4. ನಿರ್ದೇಶಾತ್ಮ ಸರ್ವನಾಮ**

ನಾಮ ಪದಗಳಿಗೆ ವಿಶೇಷಣವಾಗಿ ಕೆಲಸ ಮಾಡುವ ಸರ್ವನಾಮಗಳು **ನಿರ್ದೇಶಾತ್ಮಕ ಸರ್ವನಾಮ** ಎನಿಸುವವು.

ಉದಾ: ತೇಜಸ್ವಿಯವರ ಮನೆಯ ಹೆಸರು ಪಂಚವಟಿ. ಆ ಮನೆ ಮೂಡಿಗೆರೆಯಲ್ಲಿದೆ. ಬೇಂದ್ರೆಯವರಿದ್ದ ಮನೆಯ ಬೀದಿಯ ಹೆಸರು ಸಾಧನಕೇರಿ. ಈ ಬೀದಿ ಧಾರವಾಡದಲ್ಲಿದೆ.

## ಭಾವನಾಮ

ವಸ್ತು ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳು ಭಾವನಾಮಗಳು.

ಉದಾ:

| | | |
|---|---|---|
| ಬಿಳಿಯದರ ಭಾವ | - | ಬಿಳುಪು |
| ಕರಿಯದರ ಭಾವ | - | ಕಪ್ಪು |
| ಹಿರಿಯದರ ಭಾವ | - | ಹಿರಿದು |
| ನೋಡುವುದರ ಭಾವ | - | ನೋಟ |
| ಓಡುವುದರ ಭಾವ | - | ಓಟ |
| ಉಣ್ಣುವುದರ ಭಾವ | - | ಊಟ |

●●●

# 3. ವಾಕ್ಯ ಸಂಯೋಜನೆ

ವಾಕ್ಯ ಎಂದರೆ ಅರ್ಥ ವತ್ತಾದ ಪದಸಮೂಹ, ಮುಖ್ಯವಾಗಿ ಕರ್ತೃ-ಕರ್ಮ-ಕ್ರಿಯಾಪದಗಳು ಒಂದು ಕ್ರಮದಲ್ಲಿರುತ್ತದೆ. ಜೊತೆಗೆ ನಾಮ ಮತ್ತು ಕ್ರಿಯಾಪದಗಳಿಗೆ ಪೂರಕವಾಗಿ ವಿಶೇಷಣಗಳು ಸೇರುವುದುಂಟು. ಇವುಗಳು ಪರಸ್ಪರ ಸಂಬಂಧವನ್ನು ಗಮನದಲ್ಲಿಟ್ಟುಕೊಂಡು ಕ್ರಮಬದ್ಧವಾಗಿ ಪದಗಳನ್ನು ಜೋಡಿಸುವುದೇ ವಾಕ್ಯ ರಚನೆ.

| ಉದಾ: | ಕರ್ತೃ | ಕಾರ್ಯ | ಕ್ರಿಯಾಪದ |
|---|---|---|---|
| | ↓ | ↓ | ↓ |
| 1 | ರಾಮನು | ಶಾಲೆಗೆ | ಹೋಗುತ್ತಾನೆ |
| | ↓ | ↓ | ↓ |
| | ರಾಮ | ಶಾಲೆ | ಹೋಗು |
| | ↓ | ↓ | ↓ |
| | ನಾಮ ಪ್ರಕೃತಿ | | ಧಾತು |

| 2 | ಶೂರನಾದ | ರಾಮನು | ರಾವಣನನ್ನು | ಕೊಂದನು |
|---|---|---|---|---|
| | ↓ | ↓ | ↓ | ↓ |
| | ನಾಮ ವಿಶೇಷಣ | ಕರ್ತೃ | ಕರ್ಮಪದ | ಕ್ರಿಯಾಪದ |

## ವಿಶೇಷಣ ಮತ್ತು ಕ್ರಿಯಾವಿಶೇಷಣಗಳು

ವಿಶೇಷಣ:- ವಸ್ತುಗಳ ಅಥವಾ ವ್ಯಕ್ತಿಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ಶಬ್ದಗಳಿಗೆ ''ವಿಶೇಷಣ'' ಗಳೆನ್ನುವರು.

ಉದಾ:- 1) ಚಿಕ್ಕ ನಾಯಿಮರಿ ಓಡಾಡುತ್ತಿದೆ

2) ಅವನು ಒಳ್ಳೆಯ ಹುಡುಗ

ಈ ಮೇಲಿನ ವಾಕ್ಯಗಳಲ್ಲಿ ಬರುವ ಚಿಕ್ಕ ಒಳ್ಳೆಯ ಇವು ಕ್ರಮವಾಗಿ ನಾಯಿಮರಿ, ಹುಡುಗ ಎಂಬ ನಾಮಪದಗಳ ಗುಣವಿಶೇಷ ಹೇಳುವುದರಿಂದ ಇವು ನಾಮ ವಿಶೇಷಗಳೆನಿಸುವವು. ಹಾಗೆಯೇ, ಕ್ರಿಯಾಪದಗಳಿಗೆ ಸ್ಥಳ, ರೀತಿ, ಕಾಲ ಮುಂತಾದವುಗಳನ್ನು ಸೂಚಿಸಲು ಉಪಯೋಗಿಸುವ ಪದಗಳಿಗೆ 'ಕ್ರಿಯಾ ವಿಶೇಷಣಗಳು' ಎನ್ನುವರು

ಉದಾ:- 1) ನಾನು ಹಿಂದಿನ ಕಾಲದಲ್ಲಿ ತುಸು ಹೆಚ್ಚು ಕಡಿಮೆ ಹಾಗೆಯೇ ಇದ್ದೆ.

2) ನಾನು ಹಾಸಿಗೆಯ ಮೇಲೆ ಸುಮ್ಮನೆ ಬಿದ್ದಿರುವೆ

ಈ ಮೇಲಿನ ವಾಕ್ಯಗಳಲ್ಲಿ ಗೆರೆ ಹೊಡೆದ ಶಬ್ದಗಳು ಕ್ರಿಯಾಪದಗಳಿಗೆ ವಿಶೇಷಣಗಳಾಗಿ ಬಂದಿರುವುದರಿಂದ ಕ್ರಿಯಾ ವಿಶೇಷಣಗಳೆನಿಸುವವು

'ಎಲ್ಲಾ ಕಡೆಗೂ','ಅಲ್ಲಿ ಇಲ್ಲಿ' ಇವು ಸ್ಥಳವನ್ನು ಸೂಚಿಸುವುದರಿಂದ ಸ್ಥಳವಾಚಕ ಕ್ರಿಯಾವಿಶೇಷಣ ಎನ್ನುವರು.

''ಸುಮ್ಮನೆ'' ರೀತಿಯನ್ನು ಸೂಚಿಸುವುದರಿಂದ ರೀತಿವಾಚಕ ಕ್ರಿಯಾವಿಶೇಷಣ.

'ಹಿಂದಿ ಕಾಲ' ಇದು ಕಾಲವನ್ನೂ ಸೂಚಿಸುವುದರಿಂದ ಇದು ಕಾಲವಾಚಕ ಕ್ರಿಯಾ ವಿಶೇಷಣ.

# 4. ಕೃದಂತ, ತದ್ಧಿತಾಂತಗಳು

ನಮ್ಮ ಮಾತುಗಳಲ್ಲಿ **ಮಾಡಿದ, ಹೋಗುವ, ಬರೆಯುವ** ಮುಂತಾದ ಪದಗಳನ್ನು ಬಳಸುತ್ತೇವೆ. ಇಲ್ಲಿ **ಮಾಡಿದ** ಎಂಬ ಪದವನ್ನು ಬಿಡಿಸಿದಾಗ **ಮಾಡು+ದ+ಅ** ಹಾಗೆಯೇ **'ಹೋಗುವ'** ಪದದಲ್ಲಿ **ಹೋಗು+ವ+ಅ, 'ಬರೆಯುವ'** ಪದದಲ್ಲಿ **ಬರೆ+ಉವ+ಅ** ಎಂಬ ಭಾಗಗಳನ್ನು ನೋಡಬಹುದು ಇಲ್ಲಿ ಮೊದಲನೆಯದು 'ಧಾತು' ಎಂತಲೂ ಎರಡನೆಯದು ಮೂರನೆಯದು **ಪ್ರತ್ಯಯ**ಗಳೆಂತಲೂ ಕರೆಯಲ್ಪಡುತ್ತವೆ. ಧಾತುಗಳಿಗೆ ಈ ಪ್ರತ್ಯಯಗಳು ಸೇರದ ರೂಪವನ್ನು **ನಾಮಪ್ರಕೃತಿ**ಗಳೆಂದು ಕರೆಯುತ್ತಾರೆ. ಇವುಗಳನ್ನು **ಕೃದಂತನಾಮಪ್ರಕೃತಿ**ಗಳೆಂದು ಕರೆಯಲಾಗುವುದು. **ಈ ಕೃದಂತ ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಅವುಗಳು ಕೃದಂತನಾಮ ಪದಗಳೆನಿಸುತ್ತವೆ.** ಈ ಉದಾಹರಣೆಗಳ ಕೊನೆಯಲ್ಲಿರುವ **'ಅ'** ಎಂಬುದೇ **ಕೃತ್‌ಪ್ರತ್ಯಯ.**

**ಸೂತ್ರ: ಧಾತುಗಳಿಗೆ ಕೃತ್‌ಪತ್ಯಯಗಳು ಸೇರಿ ಕೃದಂತಗಳೆನಿಸುತ್ತವೆ. ಇದಕ್ಕೆ ಕೃದಂತನಾಮಗಳೆಂದೂ ಹೆಸರೂ ಇದೆ.**

ಕೃದಂತಗಳಲ್ಲಿ, **ಕೃದಂತನಾಮ, ಕೃದಂತಭಾವನಾಮ, ಕೃದಂತಾವ್ಯಯ**ಗಳೆಂದು ಮೂರು ವಿಧಗಳಿವೆ.

| | **ಕೃದಂತನಾಮ** | **ಕೃದಂತಭಾವನಾಮ** | **ಕೃದಂತಾವ್ಯಯ** |
|---|---|---|---|
| 1. | ಮಾಡಿದ | ಮಾಟ | ಮಾಡಿ |
| 2. | ತಿನ್ನುವ | ತಿನ್ನುವಿಕೆ | ತಿಂದು |
| 3. | ನಡೆಯುವ | ನಡೆತ | ನಡೆಯುತ್ತ |
| 4. | ಓಡಿದ | ಓಟ | ಓಡಿ |

**ಕೃದಂತನಾಮಗಳು:-** ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್‌ಪ್ರತ್ಯಯ ಬರುವುದು. ಧಾತುವಿಗೂ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ಕಾಲಸೂಚಕ ಪ್ರತ್ಯಯಗಳು ಸೇರಿಕೊಳ್ಳುತ್ತವೆ. ಇವುಗಳನ್ನೇ ಕೃದಂತನಾಮಗಳೆನ್ನುವರು.

**ಉದಾ:**

**ವರ್ತಮಾನಕೃದಂತಕ್ಕೆ :**

ಓಡು+ವ+ಅ = ಓಡುವ

ಬಾಳು+ವ+ಅ = ಬಾಳುವ

ಬರೆ + ಉವ + ಅ = ಬರೆಯುವ

**ಭೂತಕಾಲಕ್ಕೆ :**

ಓಡು+ದ+ಅ = ಓಡಿದ

ಬಾಳು+ದ+ಅ = ಬಾಳಿದ

ಬರೆ+ದ+ಅ = ಬರೆದ

**ನಿಷೇಧ ಕೃದಂತಕ್ಕೆ :**

ಓಡು+ಅದ+ಅ = ಓಡಿದ

ಬಾಳು+ಅದ+ಅ = ಬಾಳದ

ಬರೆ+ಅದ+ಅ = ಬರೆಯದ

ಇವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಲಿಂಗಗಳಿನುಗುಣವಾಗಿ ಆಗುವ ಬದಲಾವಣೆಗಳನ್ನು ಗಮನಿಸಿ.

ಓಡುವ+ಅವನು+ಉ = ಓಡುವವನು

ಓಡುವ+ಅವನು+ಇಂದ = ಓಡುವವನಿಂದ

ಓಡುವ+ಅವಳು+ಅಲ್ಲಿ = ಓಡುವವಳಲ್ಲಿ

ಓಡುವ+ಉದು+ಅನ್ನು = ಓಡುವುದನ್ನು

## ತದ್ಧಿತಾಂತಗಳು

ಈ ವಾಕ್ಯಗಳನ್ನು ಗಮನಿಸಿ.

1. ಮೋಸವನ್ನು ಮಾಡುವವನು ಇದ್ದಾನೆ.
2. ಕನ್ನಡವನ್ನು ಬಲ್ಲವನು ಬಂದನು.

ಮೊದಲ ವಾಕ್ಯದಲ್ಲಿ ಇರುವ ಮೋಸವನ್ನು ಎಂಬ ಪದದ ಮುಂದೆ ಮಾಡುವವನು ಎಂಬ ಅರ್ಥದಲ್ಲಿ ಗಾರ ಎಂಬ ಪತ್ಯಯವನ್ನು ಸೇರಿಸಿ ಮೋಸಗಾರ ಎಂಬ ಪದವನ್ನು ಮಾಡಬಹುದು.

ಅಂದರೆ **ಮೋಸವನ್ನು** + (ಮಾಡುವವನು) + **ಗಾರ** = **ಮೋಸಗಾರ** ಎಂಬ ರೀತಿಯಲ್ಲಿ ಪದರಚನೆಯಾಗುತ್ತದೆ. ಒಂದು ಪ್ರಕೃತಿ ಪದಕ್ಕೆ ಎರಡು ಪ್ರತ್ಯಯವನ್ನು ಸೇರಿಸುವ ಕ್ರಮವಿಲ್ಲ. ಹಾಗಾಗಿ ಮೋಸ ಎಂಬ ಪ್ರಕೃತಿ ಪದದ ಜೊತೆಗೆ ಇದ್ದ **ಅನ್ನು** ಎಂಬ ಪ್ರತ್ಯಯವನ್ನು ತೆಗೆದು **ಗಾರ** ಎಂಬ ತದ್ಧಿತ ಪ್ರತ್ಯಯವನ್ನು ಮಾತ್ರ ಉಳಿಸಿಕೊಂಡು **ಮೋಸಗಾರ** ಎಂಬ ತದ್ಧಿತಾಂತ ಪದರಚನೆ ಮಾಡಲಾಗುವುದು.

ಎರಡನೆಯ ವಾಕ್ಯದಲ್ಲಿ ಕೂಡಾ ಇದೇ ರೀತಿಯ ಪ್ರಕ್ರಿಯೆ ನಡೆದು **ಕನ್ನಡವನ್ನು** (ಪ್ರಕೃತಿಪದ)+**ಇಗ** (ತದ್ಧಿತ ಪ್ರತ್ಯಯ) = ಕನ್ನಡಿಗ ಎಂಬ ತದ್ಧಿತಾಂತ ಪದರಚನೆಯಾಗಿದೆ.

**ತದ್ಧಿತಾಂತ: ನಾಮಪದಗಳ ಮೇಲೆ ಬೇರೆಬೇರೆ ಅರ್ಥಗಳಲ್ಲಿ ಗಾರ, ಕಾರ, ಇಗ, ಆಡಿಗ, ವಂತ, ಇಕ ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳಾಗುತ್ತವೆ.**

ಹೀಗೆ ರಚನೆಯಾಗುವ ತದ್ಧಿತ ಪ್ರತ್ಯಯಗಳಲ್ಲಿ **ತದ್ಧಿತಾಂತನಾಮ, ತದ್ಧಿತಾಂತಭಾವನಾಮ** ಮತ್ತು **ತದ್ಧಿತಾಂತ ಅವ್ಯಯ**ಗಳೆಂದು **ಮೂರು** ವಿಭಾಗಗಳಿವೆ.

**ತದ್ಧಿತಾಂತ ನಾಮಗಳು:** ನಾಮಪದಗಳಿಗೆ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಪದಗಳೇ **ತದ್ಧಿತಾಂತನಾಮಗಳು.**

**ಉದಾ:- (ಪುಲ್ಲಿಂಗರೂಪದಲ್ಲಿ)**

| | | | | |
|---|---|---|---|---|
| ಬಳೆಯನ್ನು | + | ಮಾರುವವನು | = | ಬಳೆಗಾರ |
| ಕೋಲನ್ನು | + | ಹಿಡಿಯುವವನು | = | ಕೋಲುಕಾರ |
| ಕನ್ನಡವನ್ನು | + | ಬಲ್ಲವನು | = | ಕನ್ನಡಿಗೆ |
| ಸಿರಿಯನ್ನು | + | ಉಳ್ಳವನು | = | ಸಿರಿವಂತ |

**ಉದಾ:- (ಸ್ತ್ರೀಲಿಂಗರೂಪದಲ್ಲಿ)**

| | | | | |
|---|---|---|---|---|
| ಬಳೆಯನ್ನು | + | ಮಾರುವವಳು | = | ಬಳೆಗಾರ್ತಿ |
| ಕೋಲನ್ನು | + | ಹಿಡಿಯುವವಳು | = | ಕೋಲುಕಾರ್ತಿ |
| ಕನ್ನಡವನ್ನು | + | ಬಲ್ಲವಳು | = | ಕನ್ನಡಿತಿ |
| ಸಿರಿಯನ್ನು | + | ಉಳ್ಳವಳು | = | ಸಿರಿವಂತೆ |

ಹೀಗೆ-

ಇತಿ, ಇತ್ತಿ, ಗಿತ್ತಿ, ತಿ, ಇತ್ಯಾದಿ ಸ್ತ್ರೀಲಿಂಗ ರೂಪದ ತದ್ಧಿತ ಪ್ರತ್ಯಯಗಳು ಸೇರಿ ಸ್ತ್ರೀಲಿಂಗದ ತದ್ಧಿತಾಂತಗಳಾಗುತ್ತವೆ.

**ತದ್ಧಿತಾಂತ ಭಾವನಾಮಗಳು:**

ಈ ವಾಕ್ಯಗಳನ್ನು ಗಮನಿಸಿ.

- ಬಡತನ, ಸಿರಿತನಗಳು ಶಾಶ್ವತವಲ್ಲ.
- ನಮಗೆ ಅದೊಂದು ಹಿರಿಮೆ.

ಈ ವಾಕ್ಯಗಳಲ್ಲಿರುವ **ಬಡತನ, ಸಿರಿತನ, ಹಿರಿಮೆ** ಎಂಬ ಪದಗಳನ್ನು ಗಮನಿಸಿದಾಗ ಬಡವನ ಭಾವ **ಬಡತನ** ಸಿರಿವಂತನ ಭಾವ-**ಸಿರಿತನ,** ಹಿರಿದರ ಭಾವ - ಹಿರಿಮೆ ಎಂಬುದು ತಿಳಿಯುತ್ತದೆ. ಇಲ್ಲಿರುವ **ತನ, ಮೆ** ಎಂಬ ಪದಗಳ ಭಾವಾರ್ಥದಲ್ಲಿ ಪ್ರಯೋಗವಾಗಿವೆ. ಹೀಗೆ...

**ಸಾಮಾನ್ಯವಾಗಿ ಷಷ್ಠೀ ವಿಭಕ್ತಿ ನಾಮಪದಗಳ ಮುಂದೆ ಭಾವಾರ್ಥದಲ್ಲಿ - ತನ, - ಇಕೆ, -ಪು, -ಮೆ ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಭಾವನಾಮಗಳೆನಿಸುವುವು.**

**ಉದಾ:-**

| | | |
|---|---|---|
| ಜಾಣನ (ಭಾವ) ತನ | - | ಜಾಣತನ |
| ಚೆಲುವಿನ (ಭಾವ) ಇಕೆ | - | ಚೆಲುವಿಕೆ |
| ಕರಿದರ (ಭಾವ) ಪು | - | ಕಪ್ಪು |
| ಪಿರಿದರ (ಭಾವ) ಮೆ | - | ಪೆರ್ಮೆ |

| | | |
|---|---|---|
| **ಸಂಖ್ಯಾವಾಚಕ** | - | ಹನ್ನೆರಡು, ಐವತ್ತು, ಎಂಬತ್ತು |
| **ಸಂಖ್ಯೇಯವಾಚಕ** | - | ಹನ್ನೆರಡನೆಯ, ಎಂಬತ್ತನೆಯ, ಮೂವರು |
| **ಭಾವನಾಮ** | - | ಕೆಂಪು, ಹಿರಿಮೆ, ನೋಟ, ಆಟ, ಮಾಟ |
| **ಪರಿಮಾಣವಾಚಕ** | - | ಅಷ್ಟು, ಎಷ್ಟು, ಹಲವು, ಅನಿತು, ಇನಿತು |
| **ದಿಗ್ವಾಚಕ** | - | ಮೂಡಣ, ತೆಂಕಣ, ಪಡುವಣ, ಈಶಾನ್ಯ, ಆಗ್ನೇಯ |

**ಸರ್ವನಾಮಗಳು:**

ಸರ್ವನಾಮಗಳನ್ನು ಪುರುಷಾರ್ಥಕ, ಪ್ರಶ್ನಾರ್ಥಕ, ಆತ್ಮಾರ್ಥಕಗಳೆಂದು ವಿಂಗಡಿಸಲಾಗಿದೆ. **ಪುರುಷಾರ್ಥಕ**ಗಳನ್ನು ಉತ್ತಮ, ಮಧ್ಯಮ ಅನ್ಯ (ಪ್ರಥಮ) ಪುರುಷಗಳೆಂದು ವಿಭಾಗಿಸಿದೆ.

**ಉತ್ತಮ ಪುರುಷ** – ನಾನು, ನಾವು

**ಮಧ್ಯಮ ಪುರುಷ** – ನೀನು, ನೀವು

**ಅನ್ಯ ಪುರುಷ (ಪ್ರಥಮ ಪುರುಷ)** ಅವನು, ಇವನು, ಅವರು, ಇವರು,
ಅವಳು, ಇವಳು, ಅವರು, ಇವರು,
ಅದು, ಇದು, ಅವು, ಇವು

**ಪ್ರಶ್ನಾರ್ಥಕ** – ಯಾರು?, ಏನು?, ಯಾವುದು?

**ಆತ್ಮಾರ್ಥಕ** – ತಾನು, ತಾವು, ತನ್ನ, ತಮ್ಮ

●●●

# 5. ತತ್ಸಮ - ತದ್ಭವ

ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ ಅಲ್ಪಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು, ಬದಲಾವಣೆಗೆ ಒಳ್ಳಪಟ್ಟ ಪದಗಳು, ಇವೆ.

**ತತ್ಸಮ:-**

ತತ್ ಎಂದರೆ ಅದಕ್ಕೆ, ಸಮ ಎಂದರೆ ಸಮಾನ ಎಂದರ್ಥ. ಹಾಗಾಗಿ ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದರ್ಥ.

**ತದ್ಭವ:-**

ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸಲ್ಪ ಅಥವಾ ಪೂರ್ಣ ಬದಲಾವಣೆ, ಹೊಂದಿರುವ ಪದಗಳೇ ತದ್ಭವಗಳು 'ತತ್' ಎಂದರೆ 'ಅದರಿಂದ' ಅಂದರೆ 'ಸಂಸ್ಕೃತದಿಂದ; 'ಭವ' ಎಂದರೆ ಹುಟ್ಟಿದ ಅಂದರೆ ಸಂಸ್ಕೃತದಿಂದ ಹುಟ್ಟಿದ'' ಎಂದರ್ಥ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ಪ್ರಯಾಣ | ಪಯಣ | ಅಟವಿ | ಅಡವಿ |
| ಪುಸ್ತಕ | ಹೊತ್ತಿಗೆ | ಆಶಾ | ಆಸೆ |
| ಆಕಾರ | ಆಗಸ | ಆಶ್ಚರ್ಯ | ಅಚ್ಚರಿ |
| ಪ್ರಾಣ | ಹರಣ | ಉದ್ಯೋಗ | ಉಜ್ಜುಗ |

**ಉಪಸರ್ಗಯುಕ್ತ ಪದಗಳು**

ಉಪಸರ್ಗಯುಕ್ತ ಪದಗಳು ಹೆಚ್ಚಾಗಿ ಸಂಸ್ಕೃತ ಶಬ್ದಗಳಾಗಿವೆ. ಬೇರೆಯೆ ಅರ್ಥ ಪಡೆಯಲು ಶಬ್ದದ ಮೊದಲು ಸು, ಪರಿ, ಆ , ವಿ, ಅನು, ಸಂ, ದುರ್, ಪ್ರ ಇತ್ಯಾದಿ ವಿಶಿಷ್ಟ ಶಬ್ದ ರೂಪಗಳು ಸೇರುವುದುಂಟು; ಇಂಥ ರೂಪಗಳಿಗೆ 'ಉಪಸರ್ಗ' ಎಂದು ಕರೆಯುವರು.

ಈ ಉಪಸರ್ಗಗಳು ಸೇರಿ ಆದ ಶಬ್ದಗಳು ಉಪಸರ್ಗಯುಕ್ತ ಶಬ್ದಗಳು ಎಂದು ಕರೆಯುವರು

ಉದಾ:-

| | | |
|---|---|---|
| ಸು | + | ವ್ಯವಸ್ಥೆ, ಚಿತ್ರ, ಯೋಗ, ಮತಿ, ಫಲ |
| ಪರಿ | + | ಶೋಧನೆ |
| ಪರ | + | ಧರ್ಮ |
| ಸಹ | + | ಚರ |
| ಸ್ವ | + | ದೇಶ, ಧರ್ಮ |
| ಅ | + | ಪ್ರೀಯ, ಸಾಧ್ಯ, ನಾಥ, ಸಂಖ್ಯ, ಮರ, ಚಲ |
| ವಿ | + | ವಾದ, ಭಕ್ತಿ, ಚಲ, ಜ್ಞಾನ, ಭೂತಿ, ನಮ್ರ, ದೇಶ, ರೂಪ, ಲಕ್ಷಣ, ಚಿತ್ರ |
| ಅನು | + | ವಾದ |
| ಅಭಿ | + | ವೃದ್ಧಿ |
| ನಿ | + | ದರ್ಶನ |
| ಪ್ರ | + | ಯತ್ನ |
| ಆ | + | ಕಾಂಕ್ಷೆ, ಸ್ವಸ್ಥೆ (ಅ + ಸ್ವಸ್ಥ = ಅಸ್ವಸ್ಥ) |
| ಸತ್ | + | ಭಕ್ತಿ (ಸತ್ + ಭಕ್ತಿ = ಸದ್ಭಕ್ತಿ) ಮಾನ (ಸತ್ + ಮಾನ = ಸನ್ಮಾನ) ನಿವೇಶ (ಸತ್ + ನಿವೇಶ = ಸನ್ನಿವೇಶ) |
| ದುರ್ | + | ಗುಣ (ದುರ್ + ಗುಣ=ದುರಗುಣ) ಮತಿ (ದುರ್ + ಮತಿ = ದುರ್ಮತಿ) |
| ನಿರ್ | + | ನಿರ್ + ಅಂಕುಶ (ನಿರ್ + ಅಂಕುಶ = ನಿರಂಕುಶ) ಆಸೆ (ನಿರ್ + ಆಸೆ = ನಿರಾಶೆ) ಉತ್ಸಾಹ (ನಿರ್+ಉತ್ಸಾಹ = ನಿರುತ್ಸಾಹ) ವಿಕಾರ (ನಿರ್+ವಿಕಾರ = ನಿರ್ವಿಕಾರ) |

## 6. ಪಡೆನುಡಿಗಳು

ಹಲವು ವಾಕ್ಯಾಂಶಗಳು ತಮ್ಮ ಸಾಮಾನ್ಯ ಅರ್ಥವನ್ನು ಬಿಟ್ಟು ವಿಶೇಷ ಅರ್ಥವನ್ನು ಪ್ರಕಟಿಸುತ್ತವೆ. ಇಂತಹ ವಾಕ್ಯಾಂಶಗಳಿಗೆ 'ಪಡೆನುಡಿ' ಎನ್ನುವರು. ಪಡೆನುಡಿಗಳು ಭಾಷೆಗೆ ಪ್ರೌಢತೆಯನ್ನು ಕೊಡುತ್ತವೆ. ಪಡೆನುಡಿಗಳನ್ನು ಬಳಸುವುದರಿಂದ ಭಾಷಾಜ್ಞಾನ, ಶಬ್ದಸಂಪತ್ತು ಹೆಚ್ಚುವುದಲ್ಲದೆ ರಂಜಕತೆಯೂ ಕೂಡ ವೃದ್ಧಿಸುತ್ತದೆ.

ಪಡೆನುಡಿಗಳು, ಅವುಗಳ, ಅರ್ಥ ಹಾಗೂ ವಾಕ್ಯಗಳಲ್ಲಿ ಅವುಗಳ ಪ್ರಯೋಗ.

1. ಕಾಲಿಗೆ ಬುದ್ಧಿ ಹೇಳು = ಓಡಿ ಹೋಗು

   ಪೋಲೀಸರನ್ನು ಕಂಡ ಕೂಡಲೇ ಕಳ್ಳರು ಕಾಲಿಗೆ ಬುದ್ಧಿ ಹೇಳುವರು.

2. ಕೈಕಟ್ಟಿ ಕೊಡು = ಚಿಂತಿಸು, ವ್ಯರ್ಥ ಕೂಡು

   ಪರೀಕ್ಷೆಯಲ್ಲಿ ಫೇಲಾದ ಬಸವನು ಕೈಕಟ್ಟಿ ಕುಳಿತುಕೊಂಡಿದ್ದನು.

3. ಬೆಕ್ಕಸಬೆರಗಾಗು = ಗಾಬರಿಯಾಗು, ಆಶ್ಚರ್ಯಚಕಿತನಾಗು.

   ಸಿಡಿಮದ್ದಿನ ಭೀಕರ ಶಬ್ದ ಕೇಳಿ ಗೌರಿಯು ಬೆಕ್ಕಸಬೆರಗಾದಳು.

4. ಟೊಪ್ಪಿಗೆ ಹಾಕು = ಮೋಸ ಮಾಡು

   ಇಂದಿನ ಸಮಾಜದಲ್ಲಿ ಟೊಪ್ಪಿಗೆ ಹಾಕುವವರು ಹೆಚ್ಚುತ್ತಿದ್ದಾರೆ.

5. ಹುಬ್ಬುಗಂಟಕ್ಕು = ಸಿಟ್ಟಗೆ ಬರು

   ಮನೆಗೆಲಸವನ್ನು ಮಾಡಿಕೊಂಡು ಬರದಿದ್ದರೆ ಶಿಕ್ಷಕರು ಹುಬ್ಬುಗಂಟಿಕ್ಕುತ್ತಾರೆ.

# 7. ಸಂಧಿಗಳು

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಕೂಡುವುದಕ್ಕೆ **ಸಂಧಿ** ಎಂದು ಹೆಸರು.

1. ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಬಂದರೆ ಸ್ವರಸಂಧಿ ಎನಿಸುವುದು.
2. ಸಂಧಿಯಾಗುವಾಗ ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಬಂದರೆ **ವ್ಯಂಜನ ಸಂಧಿ** ಎನಿಸುವುದು.

| | | | | | |
|---|---|---|---|---|---|
| **1.** | **ಸ್ವರಸಂಧಿ** | = | ಸ್ವರ | + | ಸ್ವರ |
| **2.** | **ವ್ಯಂಜನ ಸಂಧಿ** | = | ಸ್ವರ | + | ವ್ಯಂಜನ |
| | | | ವ್ಯಂಜನ | + | ಸ್ವರ |

## ಕನ್ನಡ ಸಂಧಿಗಳು

ಕನ್ನಡಸಂಧಿಯಲ್ಲಿ **ಲೋಪ - ಆಗಮ - ಆದೇಶ** ಎಂದು ಮೂರು ವಿಧಗಳುಂಟು

### 1. ಲೋಪ ಸಂಧಿ:

ಸಂಧಿ ಕಾರ್ಯ ನಡೆದಾಗ ಒಂದು ಅಕ್ಷರವು ಬಿಟ್ಟು ಹೋದರೆ 'ಲೋಪ ಸಂಧಿ' ಎನಿಸುವುದು.

ಉದಾ:

| | | | | |
|---|---|---|---|---|
| ನಾವು | + | ಎಲ್ಲಾ | = | ನಾವೆಲ್ಲಾ ('ಉ' ಕಾರ ಲೋಪ) |
| ಬೇರೆ | + | ಒಂದು | = | ಬೇರೊಂದು ('ಎ' ಕಾರ ಲೋಪ) |
| ಮಾತು | + | ಇಲ್ಲ | = | ಮಾತಿಲ್ಲ ('ಉ' ಕಾರ ಲೋಪ) |
| ಮಾಡು | + | ಇಸು | = | ಮಾಡಿಸು ('ಉ' ಕಾರ ಲೋಪ) |

ಸಂಧಿ ಕಾರ್ಯ ಮಾಡಿದಾಗ ಅರ್ಥಕ್ಕೆ ಹಾನಿ ಬರಬಾರದು.

### 2. ಆಗಮ ಸಂಧಿ:

ಸಂಧಿ ಕಾರ್ಯ ಮಾಡಿದಾಗ ಒಂದು ಅಕ್ಷರವು ಹೊಸದಾಗಿ ಬಂದು ಸೇರಿರುವುದನ್ನು **ಆಗಮ ಸಂಧಿ** ಎನ್ನುವರು.

1. ಸಂಧಿಕಾರ್ಯ ಮಾಡಿದಾಗ 'ಯ'ಕಾರವು ಆಗಮವಾದರೆ ಅದು 'ಯ' ಕಾರಾಗಮ.

ಉದಾ:

| | | | | |
|---|---|---|---|---|
| ಕೆರೆ | + | ಅಲ್ಲಿ | = | ಕೆರೆಯಲ್ಲಿ |
| ಗಾಳಿ | + | ಅನ್ನು | = | ಗಾಳಿಯನ್ನು |
| ಮಳೆ | + | ಇಂದ | = | ಮಳೆಯಿಂದ |
| ಮೇ | + | ಇಸು | = | ಮೇಯಿಸು |

2. ಸಂಧಿಕಾರ್ಯ ಮಾಡಿದಾಗ 'ವ'ಕಾರವು ಆಗಮವಾದರೆ ಅದು 'ವ' ಕಾರಾಗಮ.

| | | | | |
|---|---|---|---|---|
| ಹಸು | + | ಅನ್ನು | = | ಹಸುವನ್ನು |
| ಗುರು | + | ಇಗೆ | = | ಗುರುವಿಗೆ |
| ಹೂ | + | ಇಂದ | = | ಹೂವಿಂದ |
| ಆ | + | ಓಲೆ | = | ಆವೋಲೆ |

### 3. ಆದೇಶ ಸಂಧಿ:

ಸಂಧಿಕಾರ್ಯ ನಡೆದಾಗ ಒಂದು ಅಕ್ಷರವು ಹೋಗಿ, ಮತ್ತೊಂದು ಅಕ್ಷರ ಬಂದರೆ ಅದು **ಆದೇಶಸಂಧಿ** ಎನಿಸುವುದು.

ಸಾಮಾನ್ಯವಾಗಿ ಕ ತ ಪ ವ್ಯಂಜನಗಳಿಗೆ ಗ ದ ಬ ವ್ಯಂಜನಗಳು ಅನುಕ್ರಮವಾಗಿ ಆದೇಶವಾಗುವವು.

ಉದಾ:

| | | | | |
|---|---|---|---|---|
| ಹಳ | + | ಕನ್ನಡ | = | ಹಳಗನ್ನಡ ('ಕ' ಕಾರಕ್ಕೆ 'ಗ' ಕಾರಾದೇಶ) |
| ಬೆಟ್ಟ | + | ತಾವರೆ | = | ಬೆಟ್ಟದಾವರೆ ('ತ' ಕಾರಕ್ಕೆ 'ದ' ಕಾರಾದೇಶ) |
| ಕಣ್ | + | ಪನಿ | = | ಕಂಬನಿ ('ಪ' ಕಾರಕ್ಕೆ 'ಬ' ಕಾರಾದೇಶ) |

## ಪ್ರಕೃತಿಭಾವ

ಸ್ವರದ ಮುಂದೆ ಸ್ವರವು ಬಂದರೂ ಸಂಧಿಕಾರ್ಯವಾಗದೆ ಹಾಗೆಯೆ ಇದ್ದರೆ ಪ್ರಕೃತಿಭಾವ.

ಉದಾ:

| | | | | |
|---|---|---|---|---|
| ಅಣ್ಣಾ | + | ಇತ್ತ ಬಾ | = | ಅಣ್ಣಾ, ಇತ್ತ ಬಾ |
| ಅಕ್ಕಾ | + | ಇಲ್ಲಿ ನೋಡು | = | ಅಕ್ಕಾ, ಇಲ್ಲಿ ನೋಡು |
| ಅಬ್ಬಾ | + | ಅದು ಹುಲಿಯೆ | = | ಅಬ್ಬಾ, ಅದು ಹುಲಿಯೆ |

## ಸಂಸ್ಕೃತ ಸಂಧಿಗಳು

### 1. ಸವರ್ಣದೀರ್ಘ ಸಂಧಿ:

ಒಂದೇ ಜಾತಿಯ ವರ್ಣಗಳು ಪರಸ್ಪರ ಪರವಾದಾಗ ಅದೇ ವರ್ಣವು ದೀರ್ಘವಾದರೆ ಅದು **ಸವರ್ಣದೀರ್ಘಸಂಧಿ** ಎನಿಸುವುದು.

ಉದಾ:

| | | | | |
|---|---|---|---|---|
| ದೇವ | + | ಆಲಯ | = | ದೇವಾಲಯ (ಅ + ಆ = ಆ) |
| ದೇವ | + | ಅಸುರ | = | ದೇವಾಸುರ (ಅ + ಅ = ಆ) |
| ರವಿ | + | ಇಂದ್ರ | = | ರವೀಂದ್ರ (ಇ + ಇ = ಈ) |
| ಗುರು | + | ಉಪದೇಶ | = | ಗುರೂಪದೇಶ (ಉ + ಉ = ಊ) |

### 2. ಗುಣಸಂಧಿ:

ಅ ಆ ಕಾರಗಳ ಮುಂದೆ ಇ ಈ ಕಾರವು ಬಂದಾಗ 'ಏ' ಕಾರವೂ ಉ ಊ ಕಾರವು ಬಂದಾಗ 'ಓ' ಕಾರವೂ ಋ ಕಾರವು ಬಂದಾಗ 'ಅರ್' ಕಾರವೂ ಆದೇಶವಾಗಿ ಬಂದರೆ **ಗುಣಸಂಧಿ** ಎನಿಸುವುದು.

ಉದಾ:

| | | | | |
|---|---|---|---|---|
| ದೇವ | + | ಈಶ | = | ದೇವೇಶ (ಅ + ಈ = ಏ) |
| ಸೂರ್ಯ | + | ಉದಯ | = | ಸೂರ್ಯೋದಯ (ಅ + ಉ = ಓ) |
| ಮಹ | + | ಋಷಿ | = | ಮಹರ್ಷಿ (ಅ + ಋ = ಅರ್) |

### 3. ವೃದ್ಧಿ ಸಂಧಿ:

ಅ ಆಕಾರಗಳ ಮುಂದೆ ಏ ಐ ಕಾರವು ಬಂದಾಗ ಐ ಕಾರವೂ ಓ ಔ ಕಾರವು ಬಂದಾಗ ಔ ಆದೇಶವಾಗಿ ಬಂದರೆ **ವೃದ್ಧಿ ಸಂಧಿ** ಎನಿಸುವುದು.

ಉದಾ:

| | | | | | |
|---|---|---|---|---|---|
| ಏಕ | + | ಏಕ | = | ಏಕೈಕ | (ಅ + ಏ = ಐ) |
| ವನ | + | ಓಷಧ | = | ವನೌಷಧ | (ಅ + ಓ = ಔ) |
| ಶಿವ | + | ಐಕ್ಯ | = | ಶಿವೈಕ್ಯ | (ಅ + ಐ = ಐ) |
| ಮಹಾ | + | ಔನ್ನತ್ಯ | = | ಮಹೌನ್ನತ್ಯ | (ಅ + ಔ = ಔ) |

### 4. ಯಣ್ ಸಂಧಿ:

ಸ್ವರದ ಮುಂದೆ ಸ್ವರ ಪರವಾದಾಗ ಯ ವ ರ ಎಂಬ ಅಕ್ಷರಗಳು ಆದೇಶವಾದಲ್ಲಿ **ಯಣ್ ಸಂಧಿ** ಎನಿಸುವುದು.

ಉದಾ:

| | | | | | |
|---|---|---|---|---|---|
| ಇತಿ | + | ಆದಿ | = | ಇತ್ಯಾದಿ | (ಇ + ಆ = ಯ) |
| ಗತಿ | + | ಅಂತರ | = | ಗತ್ಯಂತರ | (ಇ + ಅ = ಯ) |
| ಅಧಿ | + | ಆತ್ಮ | = | ಅಧ್ಯಾತ್ಮ | (ಇ + ಆ = ಯ) |
| ಮನು | + | ಅಂತರ | = | ಮನ್ವಂತರ | (ಉ + ಅ = ವ) |
| ಪಿತೃ | + | ಆರ್ಜಿತ | = | ಪಿತ್ರಾರ್ಜಿತ | (ಋ + ಆ = ರ) |

### 5. ಶ್ಚುತ್ವ ಸಂಧಿ:

ಪೂರ್ವಪದದ ಕೊನೆಯಲ್ಲಿ ಸಕಾರವಾಗಲೀ ತವರ್ಗವಾಗಲೀ ಇದ್ದು, ಉತ್ತರ ಪದದ ಮೊದಲಲ್ಲಿ ಕ್ರಮವಾಗಿ ಶಕಾರವಾಗಲೀ ಚವರ್ಗವಾಗಲೀ ಬಂದರೆ ಶ ಕಾರ, ಚಕಾರಗಳು ಆದೇಶವಾಗಿ ಬರುತ್ತವೆ. ಅವುಗಳನ್ನು **ಶ್ಚುತ್ವ ಸಂಧಿ** ಎನ್ನುವರು.

| | | | | |
|---|---|---|---|---|
| ಮನಸ್ | + | ಶುದ್ಧಿ | = | ಮನಶ್ಶುದ್ಧಿ |
| ಯಶಸ್ | + | ಚಂದ್ರ | = | ಯಶಶ್ಚಂದ್ರ |

### 6. ಜಶ್ತ್ವ ಸಂಧಿ:

ಪೂರ್ವಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಿಗೆ ಯಾವ ವರ್ಣ ಎದುರಾದರೂ ಅದೇ ವರ್ಗದ ಮೂರನೇ ಅಕ್ಷರ ಆದೇಶವಾಗಿ ಬರಲು **ಜಶ್ತ್ವ ಸಂಧಿ** ಎನಿಸುವುದು.

| | | | | |
|---|---|---|---|---|
| ವಾಕ್ | + | ಈಶ | = | ವಾಗೀಶ (ಕ > ಗ) |
| ಸತ್ | + | ಆನಂದ | = | ಸದಾನಂದ (ತ > ದ) |
| ಷಟ್ | + | ಆನನ | = | ಷಡಾನನ (ಟ > ಡ) |
| ಚಿತ್ | + | ಆನಂದ | = | ಚಿದಾನಂದ (ತ್ > ದ) |

### 7. ಅನುನಾಸಿಕ ಸಂಧಿ:

ಪೂರ್ವಪದದ ಕೊನೆಯಲ್ಲಿ ಆಯಾ ವರ್ಗದ ಪ್ರಥಮಾಕ್ಷರಗಳು ಇದ್ದು, ಅವುಗಳಿಗೆ ಅನುನಾಸಿಕ ಪರವಾದರೆ ಅದು **ಅನುನಾಸಿಕ ಸಂಧಿ** ಎನಿಸುವುದು.

| | | | | |
|---|---|---|---|---|
| ವಾಕ್ | + | ಮಯ | = | ವಾಙ್ಮಯ (ಕ + ಮ = ಙ) |
| ಸತ್ | + | ಮಾನ | = | ಸನ್ಮಾನ (ತ + ಮಾ = ನ) |
| ಚಿತ್ | + | ಮಯ | = | ಚಿನ್ಮಯ (ತ + ಮ = ನ) |
| ತತ್ | + | ಮಯ | = | ತನ್ಮಯ (ತ + ಮ = ನ) |

## 8. ಸಮಾಸಗಳು

ಎರಡು ಅಥವಾ ಹಲವು ಪದಗಳು ಅರ್ಥಾನುಸಾರವಾಗಿ ಸೇರಿ ಒಂದು ಪದವಾಗುವದಕ್ಕೆ ಸಮಾಸ ಎಂದು ಹೆಸರು. ಸಮಾಸ ಪದವನ್ನು ಬಿಡಿಸಿ ಹೇಳುವದಕ್ಕೆ ವಿಗ್ರಹವಾಕ್ಯ ಎನ್ನುವರು

ಉದಾ: ಅರಮನೆ : ಅರಸನ + ಮನೆ = ಅರಮನೆ

ವಿಗ್ರಹವಾಕ್ಯದ ಮೊದಲನೆಯ ಪದವನ್ನು ಪೂರ್ವಪದವೆಂದು ಎರಡನೆ ಪದವನ್ನು ಉತ್ತರಪದವೆಂದು ಕರೆಯುವರು.

ಸಮಾಸದಲ್ಲಿ ಎಂಟು ವಿಧಗಳನ್ನಾಗಿ ವಿಂಗಡಿಸಲಾಗಿದೆ.

1. ತತ್ಪುರುಷ ಸಮಾಸ
2. ಕರ್ಮಧಾರಯ ಸಮಾಸ
3. ದ್ವಿಗು ಸಮಾಸ
4. ಕ್ರಿಯಾ ಸಮಾಸ
5. ಗಮಕ ಸಮಾಸ
6. ಅಂಶಿ ಸಮಾಸ
7. ದ್ವಂದ್ವ ಸಮಾಸ
8. ಬಹುವ್ರೀಹಿ ಸಮಾಸ

## 1. ಕ್ರಿಯಾ ಸಮಾಸ:

ಪೂರ್ವಪದದಲ್ಲಿ ದ್ವಿತೀಯಾ ವಿಭಕ್ತಿಯ ನಾಮ ಪದವಿದ್ದು ಉತ್ತರ ಪದದಲ್ಲಿ ಕ್ರಿಯಾಪದ ಅಥವಾ ಕೃದಂತವಿದ್ದು ಸಮಾಸವಾದರೆ ಅದನ್ನು ಕ್ರಿಯಾಸಮಾಸವನ್ನುತ್ತೇವೆ.

| | | | | | |
|---|---|---|---|---|---|
| ಉದಾ: | ಕೈಯನ್ನು | + | ಮುಗಿ | = | ಕೈಮುಗಿ |
| | ತಲೆಯನ್ನು | + | ಬಾಗು | = | ತಲೆಬಾಗು |
| | ಕನಸನ್ನು | + | ಕಾಣು | = | ಕನಸುಕಾಣು |
| | ಮಾತನ್ನು | + | ಆಡು | = | ಮಾತಾಡು |

## 2. ದ್ವಿಗು ಸಮಾಸ:

ಪೂರ್ವ ಪದವು ಸಂಖ್ಯಾವಾಚಕ ವಾಗಿದ್ದು ಉತ್ತರಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ.

| | | | | | |
|---|---|---|---|---|---|
| ಉದಾ: | ಒಂದು | + | ಕಟ್ಟು | = | ಒಗ್ಗಟ್ಟು |
| | ಎರಡು | + | ಮಡಿ | = | ಇಮ್ಮಡಿ |
| | ಮುರು | + | ಮಡಿ | = | ಮುಮ್ಮಡಿ |
| | ಪಂಚಗಳಾದ | + | ಇಂದ್ರಿಯಗಳು | = | ಪಂಚೇಂದ್ರಿಯಗಳು |
| | ಸಪ್ತಗಳಾದ | + | ಸ್ವರಗಳು | = | ಸಪ್ತಸ್ವರಗಳು |
| | ದಶಗಳಾದ | + | ಮುಖಗಳು | = | ದಶಮುಖಗಳು |

## 3. ಗಮಕ ಸಮಾಸ :

ಪೂರ್ವ ಪದವು ಸರ್ವನಾಮ ಕೃದಂತಗಳಲ್ಲಿ ಒಂದಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಕೂಡಿ ಆಗುವ ಸಮಾಸವನ್ನು ಗಮಕ ಸಮಾಸ ಎಂದು ಕರೆಯುವರು.

| | | | | | |
|---|---|---|---|---|---|
| ಉದಾ: | ಅವನು | + | ಹುಡುಗ | = | ಆ ಹುಡುಗ |
| | ಅವಳು | + | ಹೆಂಗಸು | = | ಆಹೆಂಗಸು |
| | ಅದು | + | ಕಲ್ಲು | = | ಆ ಕಲ್ಲು |
| | ಇದು | + | ಶಾಲೆ | = | ಈ ಶಾಲೆ |
| | ಇವಳು | + | ಮುದುಕಿ | = | ಈ ಮುದುಕಿ |

## 4. ಬಹುವ್ರೀಹಿ ಸಮಾಸ:

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ ಅರ್ಥವು ಪ್ರಧಾನವಾಗಿ ಬರುವ ಸಮಾಸಕ್ಕೆ 'ಬಹುವ್ರೀಹಿ' ಸಮಾಸ ಎನ್ನುವರು.

ಉದಾ:

1) ಚಕ್ರವು ಪಾಣಿಯಲ್ಲಿ ಯಾರಿಗುಂಟೋ ಅವನು = ಚಕ್ರಪಾಣಿ

2) ಹಣೆಯಲ್ಲಿ ಕಣ್ಣುಯಾರಿಗುಂಟೋ ಅವನು = ಹಣೆಗಣ್ಣ

3) ಚಂದ್ರನಂತೆ ಯಾವಳು ಮುಖವುಳ್ಳವಳೋ ಅವಳು = ಚಂದ್ರಮುಖಿ

4) ಖಡ್ಗವು ಪಾಣಿಯಲ್ಲಿ ಯಾರಿಗುಂಟೋ ಅವನು = ಖಡ್ಗಪಾಣಿ

# 9. ಛಂದಸ್ಸು

ಶುದ್ಧ ಹಾಗೂ ಅರ್ಥಪೂರ್ಣವಾಗಿ ಮಾತನಾಡಲು, ಬರೆಯಲು ವ್ಯಾಕರಣ ಶಾಸ್ತ್ರವು ಹೇಗೆ ಆಗತ್ಯವೋ ಹಾಗೆಯೇ ಪದ್ಯರಚನೆ ಮಾಡಲೂ ಕೆಲವು ನಿಯಮಗಳಿರುತ್ತವೆ. ಇಂತಹ **ಪದ್ಯರಚನಾ ನಿಯಮವನ್ನು ಛಂದಸ್ಸು** ಎಂದು ಕರೆಯಲಾಗಿದೆ. ಸುಮಾರು ಕ್ರಿ. ಶ. 990ರಲ್ಲಿ ಇದ್ದ **ಒಂದನೆಯ ನಾಗವರ್ಮ** ಎಂಬವನು **ಛಂದೋಂಬುಧಿ** ಎಂಬ ಗ್ರಂಥದ ಮೂಲಕ ಈ ಶಾಸ್ತ್ರವನ್ನು ನೀಡಿದ್ದಾನೆ. ಹಳಗನ್ನಡದ ಮತ್ತು ನಡುಗನ್ನಡದ ಪದ್ಯಕಾವ್ಯಗಳು ಈ ಶಾಸ್ತ್ರವನ್ನು ಅನುಸರಿಸಿಯೇ ಬರೆಯಲ್ಪಟ್ಟವು.

ಛಂದಶ್ಯಾಸ್ತ್ರವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ ಅವುಗಳನ್ನು **ಪ್ರಾಸ, ಯತಿ, ಗಣ**ಗಳೆಂದು ಕರೆಯಲಾಗಿದೆ.

**ಪ್ರಾಸ :** ಪದ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು **ಆದಿಪ್ರಾಸ** ವೆಂತಲೂ ಪ್ರತಿ ಪಾದದ ಕೊನೆಯಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು **ಅಂತ್ಯಪ್ರಾಸ**ವೆಂತಲೂ ಕರೆಯುತ್ತಾರೆ. ಕೆಲವೊಮ್ಮೆ ಅಪರೂಪಕ್ಕೆ ಸಾಲಿನ ಮಧ್ಯದಲ್ಲಿ ಪ್ರಾಸಾಕ್ಷರಗಳು ಬರುವುದುಂಟು ಅದನ್ನು **ಒಳಪ್ರಾಸ** ಅಥವಾ **ಮಧ್ಯಪ್ರಾಸ** ಎಂದು ಕರೆಯಲಾಗಿದೆ.

ಪ್ರಾಸಾಕ್ಷರದ ಹಿಂದಿನ ಸ್ವರವು **ಹ್ರಸ್ವ**ವಾಗಿದ್ದರೆ ಅದನ್ನು **ಸಿಂಹಪ್ರಾಸ** ಎಂತಲೂ ಹಿಂದಿನ ಸ್ವರವು ದೀರ್ಘವಾಗಿದ್ದರೆ ಅದನ್ನು **ಗಜಪ್ರಾಸ** ಎಂತಲೂ ಹಿಂದೆ **ಅನುಸ್ವಾರ**ವಿದ್ದರೆ **ವೃಷಭಪ್ರಾಸ** ಎಂತಲೂ ಹಿಂದೆ ವಿಸರ್ಗವಿದ್ದರೆ **ಅಜಪ್ರಾಸ** ಎಂತಲೂ ಬೇರೆಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ **ಶರಭಪ್ರಾಸ** ಎಂತಲೂ ಒಂದೇಜಾತಿಯ ಎರಡು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ **ಹಯಪ್ರಾಸ** ಎಂತಲೂ ಕರೆಯಲ್ಪಡುವ ಆರು ವಿಧದ ಪ್ರಾಸಗಳನ್ನು ಕಾಣಬಹುದು.

ಯತಿ: ಕಾವ್ಯವನ್ನು ಓದುವಾಗ ಉಸಿರು ತೆಗೆದುಕೊಳ್ಳುವ ಸಲುವಾಗಿ ನಿಲ್ಲಿಸುವ ಸ್ಥಳವನ್ನು ಯತಿ ಎಂದು ಕರೆಯಲಾಗಿದೆ. ಹಾಗೆಂದ ಮಾತ್ರಕ್ಕೆ ನಮಗೆ ಇಷ್ಟ ಬಂದಲ್ಲಿ ನಿಲ್ಲಿಸುವ ಸ್ವಾತಂತ್ರ್ಯವಿಲ್ಲ. ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪ ಬಾರದಂತೆ ನಿಲ್ಲಿಸಬೇಕಾದ ಅನಿವಾರ್ಯತೆಯಿದೆ. ಹೀಗೆ-

**ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು 'ಯತಿ' ಎಂದು ಗುರುತಿಸಲಾಗಿದೆ.** ಕೆಲವು ಕವಿಗಳು ಯತಿಯ ಸ್ಥಾನವನ್ನು ಕೆಲವು ಸಂಕೇತಗಳೊಂದಿಗೆ ತಮ್ಮ ಕಾವ್ಯಗಳಲ್ಲಿ ಗುರುತಿಸಿದ್ದು ಕಂಡುಬರುತ್ತದೆ. ಕನ್ನಡ ಕಾವ್ಯಗಳಲ್ಲಿ ಯತಿಯ ಬಳಕೆ ಅತ್ಯಂತ ಕಡಿಮೆಯಾಗಿದ್ದು ಸಂಸ್ಕೃತ ಕಾವ್ಯಗಳಲ್ಲಿ ಬಹಳಷ್ಟು ಇರುವುದನ್ನು ಗಮನಿಸಬಹುದು.

**ಗಣ: 'ಗಣ'** ಎಂದರೆ **'ಗುಂಪು'** ಅಥವಾ **'ಸಮೂಹ'** ಎಂದರ್ಥ, ಛಂದಶ್ಯಾಸ್ತ್ರದಲ್ಲಿ **'ಗಣ'** ಎಂದರೆ ಪದ್ಯದ ಪ್ರತಿ ಸಾಲಿನಲ್ಲೂ ವಿಭಾಗಿಸಲ್ಪಡುವ **ಮಾತ್ರೆ** ಅಥವಾ **ಅಕ್ಷರ** ಅಥವಾ **ಅಂಶಗಳ** ಗುಂಪು ಎಂದರ್ಥ.

ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣವನ್ನು **ಮಾತ್ರಾಗಣ** ಎಂತಲೂ ಅಕ್ಷರಗಳ ಲೇಕ್ಕಾಚಾರಗಳೊಂದಿಗೆ ವಿಭಾಗಿಸಲ್ಪಡುವ ಗಣವನ್ನು **ಅಕ್ಷರಗಣ** ಎಂತಲೂ ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು **ಅಂಶಗಣ** ಎಂತಲೂ ಕರೆಯಲಾಗಿದೆ.

**➜ ಮಾತ್ರೆ :-** ಛಂದಶ್ಯಾಸ್ತ್ರದಲ್ಲಿ ಮಾತ್ರೆ, ಎಂದರೆ ಕಾಲವನ್ನು ಅಳೆಯುವ ಮಾನ. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ ಒಂದು ಮಾತ್ರಾಕಾಲ, ಮಾತ್ರೆಗಳಲ್ಲಿ ಲಘು ಮತ್ತು ಗುರು ಎಂಬ ಎರಡು ವಿಧಗಳಲ್ಲಿ ಲಘುವನ್ನು ''U'' ಎಂತಲೂ ಗುರುವನ್ನು ''–'' ಎಂತರಲೂ ಗುರುತಿಸಲಾಗುವುದು.

**➜ ಲಘು ಎಂದರೇನು ?**

ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಹುದಾದ ಅಕ್ಷರವೇ ಲಘು.

**➜ ಲಘುಗಳಾಗುವ ಅಕ್ಷರಗಳು :-**

1➜ ಹ್ರಸ್ವ ಸ್ವರಗಳಿಗೆ ಲಘು ಹಾಕಬೇಕು

| | | | | | | |
|---|---|---|---|---|---|---|
| ಉದಾ:- | U | U | U | U | U | U |
| | ಅ | ಇ | ಉ | ಋ | ಎ | ಒ |

2➜ ಹ್ರಸ್ವ ಸ್ವರಗಳಿಂದ ಕೂಡಿದ ಅಕ್ಷರಗಳಿಗೆ ಲಘು ಹಾಕಬೇಕು.

| | | | | | |
|---|---|---|---|---|---|
| ಉದಾ:- | U | U | U | U | U |
| | ಕ | ಕಿ | ಕು | ಕೆ | ಕೊ |

### ↑ ಗುರು ಎಂದರೇನು ?

ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಗುರು.

### ↑ ಗುರುಗಳಾಗುವ ಅಕ್ಷರಗಳು :-

1↑ ದೀರ್ಘ ಸ್ವರಗಳಿಗೆ ಗುರು ಹಾಕಬೇಕು

ಉದಾ:-

| – | – | – | – | – | – | – |
|---|---|---|---|---|---|---|
| ಆ | ಈ | ಊ | ಏ | ಐ | ಔ | ಐ |

2↑ ದೀರ್ಘ ಸ್ವರಗಳಿಂದ ಕೂಡಿದ ಗುಣಿತಾಕ್ಷರಗಳಿಗೆ ಗುರು ಹಾಕಬೇಕು.

ಉದಾ:-

| – | – | – | – | – |
|---|---|---|---|---|
| ಕಾ | ಕೀ | ಕು | ಕೆ | ಕೊ |

3↑ ಅನುಸ್ವಾರ ಮತ್ತು ವಿಸರ್ಗದಿಂದ ಕೂಡಿದ ಅಕ್ಷರಗಳಿಗೆ ಗುರು ಹಾಕಬೇಕು

ಉದಾ:-

| – | – | – | – | – | – |
|---|---|---|---|---|---|
| ಕಂ | ಸಂ | ದುಃ | ಮಃ | ಅಂ | ಅಃ |

4↑ ಒತ್ತಕ್ಷರದ ಹಿಂದಿನ ಅಕ್ಷರಗಳಿಗೆ ಗುರು ಹಾಕಬೇಕು

ಉದಾ:-

| – U | – U | – U | – U | – U | – U |
|---|---|---|---|---|---|
| ಅಕ್ಕ | ಅಪ್ಪ | ಅಣ್ಣ | ರತ್ನ | ಕತ್ತು | ಕರ್ಣ |

5↑ ವ್ಯಂಜನಾಕ್ಷರದ ಹಿಂದಿನ ಅಕ್ಷರಕ್ಕೆ ಗುರು ಹಾಕಬೇಕು.

ಉದಾ:-

| – | – | – | – | U – |
|---|---|---|---|---|
| ಕಾಲ್ | ಪೋಲ್ | ಆನ್ | ಬೆನ್ | ಪ್ರಸನ್ |

6↑ ಹಲವಾರು ಕಾರಣವಿದ್ದರೂ ಒಂದೇ ಗುರು ಹಾಕಬೇಕು

ಉದಾ:-

| – U | – U | – U | – U |
|---|---|---|---|
| ಶಾಂತಿ | ಚಂದ್ರ | ಶಾಸ್ತ್ರ | ಸಂಕ್ಷಿಪ್ತ |

7↑ ಷಟ್ಪದಿಯ ಮೂರು ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘು ವಾಗಿದ್ದರೂ ಗುರು ಹಾಕಬೇಕು.

ಕನ್ನಡದಲ್ಲಿ ಮಾತ್ರಾಗಣ ಅಕ್ಷರ ಗಣ ಮತ್ತು ಅಂಶಗಣ ಎಂಬ ಮೂರು ರೀತಿಯ ಗಣಗಳನ್ನು ಉಪಯೋಗಿ ಪದ್ಯರಚನೆ ಮಾಡಲಾಗಿದೆ.

### ↑ ಮಾತ್ರಾಗಣ :-

**• ಕಂದಪದ್ಯ •**

ಕನ್ನಡ ಚಂಪೂಕೃತಿಗಳಲ್ಲಿ ಕಂದಪದ್ಯದ ಬಳಕೆಯನ್ನು ಕಾಣಬಹುದು. ಕಂದಪದ್ಯವೂ ಮಾತ್ರಾಗಣಕ್ಕೆ ಸಂಬಂಧಪಟ್ಟ ಪದ್ಯಜಾತಿ.

**ಲಕ್ಷಣ :**

1) ಕಂದ ಮಾತ್ರಾಗಣಗಳಿಂದ ಕೂಡಿದ ಪದ್ಯ.
2) ಪ್ರತಿ ಪದ್ಯದಲ್ಲಿ ನಾಲ್ಕು ಪಾದಗಳಿವೆ
3) ಮೊದಲಿನ ಎರಡು ಪಾದಗಳು ನಂತರದ ಎರಡು ಪಾದಗಳಿಗೆ ಸಮಾನ (ಅರ್ಧ ಸಮವೃತ್ತ)
4) ಒಂದು ಮತ್ತು ಮೂರನೆಯ ಪಾದಗಳು ಸಮಾನವಾಗಿದ್ದು ನಾಲ್ಕು ಮಾತ್ರೆಗಳ ಮೂರು ಗಣಗಳಿಂದ ಕೂಡಿರುವುದು
5) ಎರಡನೆಯ ಮತ್ತು ನಾಲ್ಕನೆಯ ಪಾದಗಳು ಸಮಾನವಾಗಿದ್ದು ನಾಲ್ಕು ಮಾತ್ರೆಗಳ ಐದು ಗಣಗಳಿಂದ ಕೂಡಿರುವುದು.

ಉದಾ:-

| | | |
|---|---|---|
| 4 | 4 | 4 |
| — — | UU — | UU — |
| ಕಂದಂ | ಕವಿಕೋ | ಕಿಲಮಾ |

| | | | | |
|---|---|---|---|---|
| 4 | 4 | 4 | 4 | 4 |
| — — | — UU | U — U | U U — | UU — |
| ಕಂದಂ | ಕೋಮಲ | ವಿಕಾಸಿ | ಕೃತಿಕ | ಲ್ಪಲತಾ |

| | | |
|---|---|---|
| 4 | 4 | 4 |
| — — | UUUU | UU — |
| ಕಂದಂ | ವಿಸ್ಮಯರ | ರಸದು |

| | | | | |
|---|---|---|---|---|
| 4 | 4 | 4 | 4 | 4 |
| — — | UU— | U — U | —UU | — — |
| ಕ್ಕಂದಂ | ಚಿಕದೇ | ವರಾಯ | ಚಂದನ | ಚಂದಂ |

– ತಿರುಮಲಾರ್ಯನ ಅಪ್ರತಿಮ ವೀರಚರಿತಂ

## ◆ ಷಟ್ಪದಿಗಳು ◆

ಆರು ಪಾದಗಳುಳ್ಳ ಕಾವ್ಯ ಪ್ರಕಾರವೇ ಷಟ್ಪದಿ. ಮೊದಲ ಮೂರು ಪಾದಗಳನ್ನು ಪೂರ್ವಾರ್ಧವೆಂದೂ ನಂತರದ ಮೂರು ಪಾದಗಳನ್ನು ಉತ್ತರಾರ್ಧವೆಂದೂ ಹೇಳುವರು. ಷಟ್ಪದಿಗಳಲ್ಲಿ ಒಂದು, ಎರಡು, ನಾಲ್ಕು ಐದನೆಯ ಪಾದಗಳ ಮಾತ್ರಾಗಣಗಳು ಸಮಾನವಾಗಿರುತ್ತವೆ. ಮೂರು ಮತ್ತು ಆರನೆಯ ಪಾದಗಳ ಮಾತ್ರಾ ಗಣಗಳು ಸಮಾನವಾಗಿರುತ್ತವೆ. ಷಟ್ಪದಿಗಳಲ್ಲಿ ಆರು ಪ್ರಕಾರಗಳನ್ನು ಗುರುತಿಸಬಹುದು.

1) **ಶರ ಷಟ್ಪದಿ**
2) **ಕುಸುಮ ಷಟ್ಪದಿ**
3) **ಭೋಗ ಷಟ್ಪದಿ**
4) **ಭಾಮಿನಿ ಷಟ್ಪದಿ**
5) **ಪರಿವರ್ಧಿನಿ ಷಟ್ಪದಿ**
6) **ವಾರ್ಧಕ ಷಟ್ಪದಿ**

(ಇವುಗಳಲ್ಲಿ ಶರ ಷಟ್ಪದಿ ಹಾಗೂ ಕುಸುಮ ಷಟ್ಪದಿಗಳನ್ನು ಅಭ್ಯಾಸ ಕ್ರಮದಲ್ಲಿ ಸೇರಿಸಲಾಗಿದೆ ಅವುಗಳ ಬಗ್ಗೆ ಅಭ್ಯಸಿಸೋಣ)

## 1. ಶರ ಷಟ್ಪದಿ :-

**ಲಕ್ಷಣಗಳು:**

1) ಮಾತ್ರಾ ಗಣಗಳಿಂದ ಕೂಡಿದ ಪದ್ಯ
2) ಪ್ರತಿ ಪದ್ಯದಲ್ಲಿ ಆರು ಸಾಲುಗಳಿರುತ್ತವೆ
3) ಮೊದಲಿನ ಮೂರು ನಂತರದ ಮೂರು ಸಾಲುಗಳು ಸಮಾನ

4) ಒಂದು ಎರಡು ನಾಲ್ಕು ಐದನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಎರಡು ಗಣಗಳಿಂದ ಕೂಡಿರುವುದು

5) ಮೂರು ಮತ್ತು ಆರನೆಯ ಪಾದಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳು ಬಂದು ಮೇಲೊಂದು ಗುರುವಿಂದ ಕೂಡಿರುತ್ತದೆ.

6) ಆದಿ ಪ್ರಾಸವಿರುತ್ತದೆ

**ಉದಾ:-**

| | | | |
|---|---|---|---|
| 4 | 4 | | |
| —UU | UUUU | | |
| ಈಶನ | ಕರುಣೆಯ | | |
| 4 | 4 | | |
| —UU | UUUU | | |
| ನಾಶಿಸು | ವಿನಯದಿ | | |
| 4 | 4 | 4 | |
| —UU | UU | —UU | — |
| ದಾಸನ | ಹಾಗೆಯೆ | ನೀ ಮನ | ವೇ |
| 4 | 4 | | |
| —UU | UUUU | | |
| ಕ್ಲೇಶವ | ವಿಧವಿಧ | | |
| 4 | 4 | | |
| —UU | UUUUU | | |
| ಪಾಶವ | ಹರಿದುವಿ | | |
| 4 | 4 | | |
| —UU | —UU | UUUU | — |
| ಲಾಸದಿ | ಸತ್ಯವ | ತಿಳಿಮನ | ವೇ |

4 | 4

4 | 4

4 | 4 | 4 (ಗುರು)

4 | 4

4 | 4

4 | 4 | 4 (ಗುರು)

## 2. ಕುಸುಮ ಷಟ್ಪದಿ :-

**ಲಕ್ಷಣಗಳು:**

1) ಮಾತ್ರಾ ಗಣಗಳಿಂದ ಕೂಡಿದ ಪದ್ಯ
2) ಪ್ರತಿ ಪದ್ಯದಲ್ಲಿ ಆರು ಸಾಲುಗಳಿರುತ್ತವೆ
3) ಮೊದಲಿನ ಮೂರು ನಂತರದ ಮೂರು ಸಾಲುಗಳುಗಳಿಗೆ ಸಮಾನ
4) ಒಂದು ಎರಡು ನಾಲ್ಕು ಐದನೆಯ ಸಾಲುಗಳು ಸಮಾನಾಗಿದ್ದು ಐದು ಮಾತ್ರೆಯ ಎರಡುಗಣಗಳಿಂದ ಕೂಡಿರುವುದು.
5) ಮೂರು ಮತ್ತು ಆರನೆಯ ಪಾದಗಳು ಸಮನಾಗಿದ್ದು ಐದು ಮಾತ್ರೆಯ ಮೂರು ಗಣಗಳು ಬಂದು ಮೇಲೊಂದು ಗುರುವಿಂದ ಕೂಡಿರುತ್ತದೆ.
6) ಆದಿ ಪ್ರಸ್ತಾವಿರುತ್ತದೆ

**ಉದಾ:-**

| | |
|---|---|
| 5 | 5 |
| UUUUU | UUUUU |
| ಅವರವರ | ದರುಶನಕೆ |

| | |
|---|---|
| 5 | 5 |
| UUUUU | —UUU |
| ಅವರವರ | ವೇಷದಲಿ |

| | | | |
|---|---|---|---|
| 5 | 5 | 5 | |
| UUUUU | — U UU | — — U | — |
| ಅವರವರಿ | ಗೆಲ್ಲ ಗುರು | ನೀ ನೊಬ್ಬ | ನೇ |

| | |
|---|---|
| 5 | 5 |
| UUUUU | — —U |
| ಅವರವರ | ಭಾವಕ್ಕೆ |

| | |
|---|---|
| 5 | 5 |
| UUUUU | —U— |
| ಅವರವರ | ಪೂಜೆಗಂ |

| | | | |
|---|---|---|---|
| 5 | 5 | 5 | |
| UUUUU | — U UU | — — U | — |
| ಅವರವರಿ | ಗೆಲ್ಲ ಶಿವ | ನೀ ನೊಬ್ಬ | ನೇ |

5 | 5

5 | 5

5 | 5 | 5 (ಗುರು)

5 | 5

5 | 5

5 | 5 | 5 (ಗುರು)

# 10. ಅಲಂಕಾರ

ಮನುಷ್ಯ ತನ್ನ ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ವೈವಿದ್ಯಪೂರ್ಣ ಬಟ್ಟೆ, ಆಭರಣ ಇತ್ಯಾದಿ ಸೌಂದರ್ಯ ಸಾಧನಗಳನ್ನು ಬಳಸುತ್ತಾನೆ. ಹೀಗೆ ಅಲಂಕಾರ ಮಾಡಿಕೊಂಡ ವ್ಯಕ್ತಿ ಇತರರಿಂದ ಆಕರ್ಷಿಸಲ್ಪಡುತ್ತಾನೆ. ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅಲಂಕಾರ ಮಾಡಿಕೊಂಡಂತೆ ಮನುಷ್ಯ ತನ್ನ ಮಾತೂ ಇತರರಿಗೆ ಇಂಪಾಗಿ ಕೇಳುವಂತೆ ಮಾಡುವ ಸಲುವಾಗಿ ಚಮತ್ಕಾರದಿಂದ ಮಾತನಾಡುತ್ತಾನೆ. ಹಾಗಾಗಿ – **ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ.** ಅಲಂಕಾರದಲ್ಲಿ **ಶಬ್ದಾಲಂಕಾರ** ಮತ್ತು **ಅರ್ಥಾಲಂಕಾರ** ಎಂದು ಎರಡು ವಿಧಗಳಿವೆ.

**ಶಬ್ದಾಲಂಕಾರ** : **ಶಬ್ದಗಳ ಜೋಡಣೆಯ ಚಮತ್ಕಾರದಿಂದ ಸೌಂದರ್ಯ ಹೆಚ್ಚಿದರೆ ಅದನ್ನು ಶಬ್ದಾಲಂಕಾರ ಎನ್ನುತ್ತಾರೆ.** ಇದರಲ್ಲಿ **ಅನುಪ್ರಾಸ, ಯಮಕ ಮತ್ತು ಚಿತ್ರ ಕವಿತ್ವ** ಎಂದು ಪ್ರಧಾನವಾಗಿ **ಮೂರು** ವಿಧಗಳಿವೆ. **ಅನುಪ್ರಾಸವನ್ನು ವೃತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂದ ವಿಭಾಗಿಸಲಾಗಿದೆ.

**ಅರ್ಥಾಲಂಕಾರ** : **ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎನ್ನುತ್ತಾರೆ.** ಇದರಲ್ಲಿ ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಇವುಗಳಲ್ಲಿ ಬರುವ **ಉಪಮೇಯ ಉಪಮಾನ**ಗಳ ಸಹಾಯದಿಂದ ಅದು ಯಾವ ಅಲಂಕಾರ ಎಂದು ನಿರ್ಧರಿಸಲಾಗುವುದು.

**ಉಪಮೇಯ** : ಉಪಮೆಯವನ್ನು **ವರ್ಣ್ಯ** ಎಂತಲೂ ಕರೆಯುವರು. **ಅಲಂಕಾರಿಕ ವಾಕ್ಯದಲ್ಲಿ ಯಾವ ವಸ್ತುವನ್ನು ಕುರಿತು ವರ್ಣಿಸಲಾಗುತ್ತದೆಯೋ, ಅದೇ ವರ್ಣ್ಯ** ಅಥವಾ **ಉಪಮೇಯ**

**ಉಪಮಾನ** : ಉಪಮಾನವನ್ನು **ಅವರ್ಣ್ಯ** ಎಂತಲೂ ಕರೆಯುವರು. ಯಾವ ವಸ್ತುವನ್ನು **ಆಧರಿಸಿ ಅಥವಾ ಮಾನವಾಗಿಟ್ಟುಕೊಂಡು ವರ್ಣಿಸಲಾಗುತ್ತದೆಯೋ ಅದೇ ಅವರ್ಣ್ಯ** ಅಥವಾ **ಉಪಮಾನ.**

**ಉಪಮಾಲಂಕಾರ** : **ಉಪಮಾ** ಎಂದರೆ ಹೋಲಿಕೆ ಎಂದರ್ಥ ಯಾವ ಅಲಂಆರದಲ್ಲಿ ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುತ್ತದೆಯೋ ಆ ಅಲಂಕಾರವೇ **ಉಪಮಾಲಂಕಾರ.**

**ಉದಾ: ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.** ಇಲ್ಲಿ ಮನೋರಮೆಯ ಹಣೆ ಅರ್ಧಚಂದ್ರಾಕೃತಿಯಲ್ಲಿದೆ ಎಂದು ಹೇಳುವ ಬದಲಿಗೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು, ಎಂದು ಹೇಳಲಾಗಿದೆ.

- ★ ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ **ಮನೋರಮೆಯ ಹಣೆ** ಎಂಬುದು **ಉಪಮೇಯವಾಯ್ತು.**
- ★ ಬಾಲಚಂದ್ರನನ್ನು ಆಧಾರವಾಗಿಟ್ಟುಕೊಂಡು ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ **ಬಾಲಚಂದ್ರ** ಎಂಬುದು **ಉಪಮಾನವಾಯ್ತು**
- ★ ಉಪಮೇಯಕ್ಕೂ ಉಪಾಮನಕ್ಕೂ ಹೋಲಿಕೆಯನ್ನು ಹೇಳುವಂತಹ **ಅಂತೆ, ವೋಲ್, ವೊಲ್,** ಮುಂತಾದ ಪದಗಳೇ **ವಾಚಕ ಪದಗಳು.** ಇಲ್ಲಿ **ಅಂತೆ,** ಎಂಬುದು **ವಾಚಕ** ಪದ.
- ★ ಉಪಮೇಯಕ್ಕೂ ಉಪಾಮನಕ್ಕೂ ಸಮಾನವಾಗಿ ಹೊಂದಿಕೆಯಾಗುವ ಕ್ರಿಯಾಪದವೇ ಸಮಾನಧರ್ಮ. ಇಲ್ಲಿ ಆಕರ್ಷಣಿಯವಾಗಿತ್ತು ಎಂಬುದು ಸಮಾನಧರ್ಮ.
- ★ ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳಿರುವುದರಿಂದ ಇದು

## ● ಉಪಮಾಲಂಕಾರ ●

ಉಪಮಾಲಂಕಾರದಲ್ಲಿ ಪೂರ್ಣೋಪಮಾಲಂಕಾರ, ಲುಪ್ತೋಪಮಾಲಂಕಾರ ಎಂಬ ಎರಡು ವಿಧಗಳಿವೆ.

**ಪೂರ್ಣೋಪಮಾಲಂಕಾರ** : ಯಾವ ಉಪಮಾಲಂಕಾರದಲ್ಲಿ **ಉಪಮೇಯ, ಉಪಮಾನ, ವಾಚಕ ಪದ, ಸಮಾನಧರ್ಮ** ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದೇ **ಪೂರ್ಣೋಪಮಾಲಂಕಾರ**

**ಉದಾ: ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರ್ವರು ಬಾಲಕರು ಬಿದ್ದರು.**

**ಉಪಮೇಯ** : ಭರತಕುಲದ ನೂರ್ವೆವರು ಬಾಲಕರು

**ಉಪಮಾನ** : ಬಿರುಗಾಳಿಗೆ ತುತ್ತಾದ ಮರಗಿಡಗಳು

**ವಾಚಕಪದ** : ಅಂತೆ

**ಸಮಾನಧರ್ಮ** : ಬೀಳುವುದು

**ಅಲಂಕಾರ** : ಉಪಮಾಲಂಕಾರ (ಪೂರ್ಣೋಪಮಾಲಂಕಾರ)

**ಸಮನ್ವಯ** : **ಉಪಮೇಯ**ವಾದ ಭರತಕುಲದ ನೂರ್ವೆವರು ಬಾಲಕರು ಬಿದ್ದುರುವುದನ್ನು ಉಪಮಾನ ವಾದ ಬಿರುಗಾಳಿಗೆ ತುತ್ತಾದ ಮರಗಿಡಗಳಿಗೆ ಹೋಲಿಸಿರುವುದರಿಂದ ಇದು **ಉಪಮಾಲಂಕಾರ.**

ಈ ಅಲಂಕಾರದಲ್ಲಿ **ಉಪಮೇಯ, ಉಪಮಾನ, ವಾಚಕಪದ, ಸಮಾನಧರ್ಮ** ಎಂಬ ನಾಲ್ಕು ಅಂಶಗಳಿರುವುದರಿಂದ ಇದು **ಪೂರ್ಣೋಪಮಾಲಂಕಾರವೂ** ಹೌದು.

**ಲುಪ್ತೋಪಮಾಲಂಕಾರ:** ಇದು ಉಪಮಾಲಂಕಾರ ಇನ್ನೊಂದು ಪ್ರಭೇದ. ಪೋಣರ್ೋಪಮಾಲಂಕಾರವಾಗಬೇಕಾದೆ ಇರಬೇಕಾದ ನಾಲ್ಕು ಅಂಶಗಳಲ್ಲಿ ಯಾವುದಾದರೂ ಅಂಶ ಇಲ್ಲವಾದರೆ ಅದು ಲುಪ್ತೋಪಮಾಲಂಕಾರವಾಗುತ್ತದೆ. ಯಾವ ಅಂಶ ಲುಪ್ತವಾಗಿದೆಯೋ ಅದೇ ಹೆಸರಿನಿಂದ ಆ ಅಲಂಕಾರವನ್ನು ಕರೆಯಲಾಗುತ್ತದೆ. ಅಂದರೆ ಉಪಮೇಯ ಇಲ್ಲವಾದರೆ ಅದು **ಉಪಮೇಯ ಲುಪ್ತೋಮಾಲಂಕಾರ.** ಹಾಗೆಯೇ **ಉಪಮಾನಲುಪ್ತೋಮಾಲಂಕಾರ, ವಾಚಕಲುಪ್ತೋಮಾಲಂಕಾರ. ಧರ್ಮಲುಪ್ತೋಮಾಲಂಕಾರ, ವಾಚಕದರ್ಮಲುಪ್ತೋಮಾಲಂಕಾರ** ಇತ್ಯಾದಿ **ಲುಪ್ತೋಮಾಲಂಕಾರ**ಗಳಿವೆ.

**ರೂಪಕಾಲಂಕಾರ:** ಉಪಮೆಯವನ್ನು ಉಪಮಾನವನ್ನಾಗಿ ರೂಪಿಸಿಕೊಳ್ಳುವುದೆ (ಅಭೇದತೆಯನ್ನು ಹೇಳುವುದು) ರೂಪಕಾಲಂಕಾರ. ಅಂದರೆ ಇಲ್ಲಿ ಉಪಮೆಯಕ್ಕೂ ಉಪಮಾನಕ್ಕೂ ಯಾವುದೇ ರೀತಿಯ ವ್ಯತ್ಯಾಸವಿಲ್ಲ ಎಂದು ವರ್ಣಿಸುವುದು.

ಉದಾ: ಸೀತೆಯ ಮುಖಕಮಲ ಅರಳಿತು

ಇಲ್ಲಿ ಸೀತೆಗೆ ಸಂತೋಷವಾಗಿದೆ ಎಂದರ್ಥ

ಉಪಮೇಯ ÷ ಸೀತೆಯ ಮುಖ

ಉಪಮಾನ ÷ ಕಮಲ

ಅಲಂಕಾರ ÷ ರೂಪಕಾಲಂಕಾರ

ಸಮನ್ವಯ ÷ ಇಲ್ಲಿ ಉಪಮೇಯವಾದ ಸೀತೆಯ ಮುಖಕ್ಕೂ ಉಪಾಮಾನವಾದ ಕಮಲಕ್ಕೂ ಯಾವ ವ್ಯತ್ಯಾಸವಿಲ್ಲ; ಎರಡೂ ಒಂದೇ ಎಂದು ರೂಪಿಸಿರುವುದರಿಂದ ಇದು ರೂಪಕಾಲಂಕಾರ.

# 1. ಪತ್ರಲೇಖನ

## ಲೇಖನ ಕೌಶಲ್ಯ ವಿಭಾಗ

ನಾವು ದಿನನಿತ್ಯ ಅನೇಕರೊಂದಿಗೆ ವಿವಿಧ ರೀತಿಯಲ್ಲಿ ವ್ಯವಹರಿಸುತ್ತೇವೆ. ಇಂತಹ ವ್ಯವಹಾರದ ಮಾಧ್ಯಮಗಳಲ್ಲಿ ಪತ್ರಲೇಖನವೂ ಒಂದು. ಪತ್ರಗಳನ್ನು ಮುಖ್ಯವಾಗಿ ಖಾಸಗಿ ಪತ್ರಗಳು, ವ್ಯಾವಹಾರಿಕ ಪತ್ರಗಳು ಮತ್ತು ವೃತ್ತಪತ್ರಿಕೆಗಳಿಗೆ ಬರೆಯುವ ಪತ್ರಗಳೆಂದು ಮೂರು ಗುಂಪುಗಳಾಗಿ ವಿಂಗಡಿಸಿಬಹುದು.

ಬಂಧುಮಿತ್ರರು ಪರಸ್ಪರ ಬರೆಯುವ ಪತ್ರಗಳನ್ನು ಖಾಸಗಿ ಪತ್ರಗಳೆಂದು ಕರೆಯಬಹುದು. ಇಂತಹ ಪತ್ರಗಳಲ್ಲಿ ಔಪಚಾರಿಕತೆಯ ಅಂಶ ಕಡಿಮೆಯಾಗಿರುತ್ತದೆ. ಬೇರೆ ಬೇರೆ ಕಾರಣಗಳಿಗಾಗಿ ವ್ಯಕ್ತಿಯು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗ ಬರೆಯುವ ಮತ್ತು ಅವುಗಳಿಂದ ಉತ್ತರವಾಗಿ ಪಡೆಯುವ ಪತ್ರಗಳನ್ನು ವ್ಯಾವಹಾರಿಕ ಪತ್ರಗಳೆಂದು ಕರೆಯಬಹುದು. ಸಂಬಂಧಪಟ್ಟ, ಅಧಿಕಾರಿಗಳಿಗೆ ಮಾತ್ರವಲ್ಲದೆ ಎಲ್ಲ ಸಾರ್ವಜನಿಕರ ಗಮನಕ್ಕೂ ಬರಬೇಕೆಂಬ ಉದ್ದೇಶದಿಂದ ವೃತ್ತಪತ್ರಿಕೆಗಳಿಗೆ ಬರೆಯುವ ಪತ್ರಗಳು ಮೂರನೆಯ ಗುಂಪಿಗೆ ಸೇರುತ್ತವೆ.

ಈ ಮೂರೂ ಬಗೆಯ ಪತ್ರಗಳನ್ನು ಬರೆಯುವಾಗ ಕೆಲವು ನಿರ್ದಿಷ್ಟ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಪತ್ರವನ್ನು ಬರೆಯುತ್ತಿರುವುದು ಹಿರಿಯರಿಗೋ, ಕಿರಿಯರಿಗೋ ಅಥವಾ ಸಮಾನರಿಗೋ ಎಂಬ ಸಂಗತಿಯನ್ನು ಅವಲಂಬಿಸಿ ಖಾಸಗಿ ಪತ್ರದ ಸಂಬೋಧನೆ ಮುಕ್ತಾಯ ಮುಂತಾದ ಅಂಶಗಳು ಬದಲಾಗುತ್ತವೆ. ಖಾಸಗಿ ಪತ್ರದಲ್ಲಿ ಪತ್ರದ ವಿಷಯ ಉಲ್ಲೇಖ ಮತ್ತು ಒಳವಿಳಾಸಗಳನ್ನು ಕಟ್ಟುನಿಟ್ಟಾಗಿ ಬರೆಯುವ ಆಗತ್ಯ ಇಲ್ಲ. ಆದರೆ ವ್ಯಾವಹಾರಿಕ ಪತ್ರಗಳು ಇವುಗಳನ್ನು ಅನಿವಾರ್ಯವಾಗಿ ಒಳಗೊಳ್ಳುತ್ತವೆ. ಕಛೇರಿಗಳಲ್ಲಿ ದಾಖಲಿಸಲು ಆಗತ್ಯವಾದ ಹಲವು ವಿವರಗಳು ವ್ಯಾವಹಾರಿಕ ಪತ್ರದಲ್ಲಿ ಇರಬೇಕು. ಇವು ಆದಷ್ಟೂ ಸಂಕ್ಷಿಪ್ತವಾಗಿ, ನೇರವಾಗಿ ಇರುವುದು ಸೂಕ್ತ. ವೃತ್ತಪತ್ರಿಕೆಗಳಿಗೆ ಪತ್ರ ಬರೆಯುವಾಗ ಅದರ ಸಂಪಾದಕರನ್ನು ಸಂಬೋಧಿಸಬೇಕು. ಇಂಥ ಪತ್ರಗಳು ಓದುಗರ ಗಮನ ಸೆಳೆಯುವಂತೆ ಆಕರ್ಷಕವಾದ ಶೈಲಿಯಲ್ಲಿ ರಚಿತವಾಗಿರುತ್ತವೆ.

ಇನ್ನು ಮುಂದೆ ಈ ಎಲ್ಲ ಪತ್ರಗಳಲ್ಲಿ ಇರಬಹುದಾದ ಕೆಲವು ಸಮಾನ ಸಂಗತಿಗಳನ್ನು ವಿವರಿಸಲಾಗಿದೆ. ಬೇರೆ ಬೇರೆ ಬಗೆಯ ಪತ್ರಗಳ ಅಗತ್ಯಗಳಿಗೆ ಅನುಗುಣವಾಗಿ ಈ ಸಂಗತಿಗಳನ್ನು ಬಳಸಬಹುದು.

ಪತ್ರದಲ್ಲಿ ಬರೆಯುವ ಎಲ್ಲಾ ಅಂಶಗಳು (ಸ್ಥೂಲವಾಗಿ) ಗೊತ್ತಾದ ಜಾಗದಲ್ಲಿ ಇರಬೇಕು. ಆಗ ಪತ್ರವನ್ನೂ ಓದುವವರಿಗೆ ಕಾಗದ ಬರೆದಿರುವವರು ಯಾರು? ಬರೆದದ್ದು ಎಂದು? ಯಾರಿಗೆ ಈ ಕಾಗದ ಬಂದಿದೆ? ಇದರ ಮುಖ್ಯ ವಿಷಯ ಏನು? ಇವೆಲ್ಲ ಬೇಗ ಗೊತ್ತಾಗಿ ಪತ್ರ ಸುಲಭವಾಗಿ ಅರ್ಥವಾಗುತ್ತದೆ. ಉದಾಹರಣೆಗಾಗಿ ಮಾದರಿ ಪತ್ರಗಳನ್ನು ಚೆನ್ನಾಗಿ ಗಮನಿಸಿರಿ. ಯಾವ ಯಾವ ಅಂಶಗಳು ಎಲ್ಲೆಲ್ಲಿ ಹೇಗೆ ಬಂದಿವೆ ಎಂಬುದನ್ನು ಗುರುತುಮಾಡಿಕೊಳ್ಳಿರಿ.

ಇದು ಮನವಿ ಪತ್ರವನ್ನು ಬರೆದಿರುವವರ ವಿಳಾಸ. ಲಕೋಟೆಯನ್ನು ಒಡೆದು ಪತ್ರವನ್ನು ಕೈಗೆ ತೆಗೆದುಕೊಳ್ಳುತ್ತಿದ್ದಂತೆಯೇ ಈ ಪತ್ರ ಯಾರಿಂದ ಬಂದಿದೆ ಎಂಬುದನ್ನು ತಿಳಿಯುವುದು ಅವಶ್ಯ. ಮುಂದೆ ಉತ್ತರ ಕೊಡಲು ಪತ್ರ ವ್ಯವಹಾರ ಮಾಡುವ ಆವಶ್ಯಕತೆ ಇದ್ದಲ್ಲಿ ಕಚೇರಿಯವರಿಗೆ ಈ ವಿಳಾಸ ಅಗತ್ಯವಾಗುತ್ತದೆ. ಅವರು ಈ ವಿಳಾಸಕ್ಕೆ ಕಾಗದ ಬರೆಯುತ್ತಾರೆ. ಈ ವಿಳಾಸವನ್ನು ಪತ್ರದ ಪ್ರಾರಂಭದಲ್ಲಿ ಎಡಗಡೆ ಬರೆಯಬೇಕು. ಇದರಿಂದ ಉತ್ತರ ಬರೆಯುವವರಿಗೆ ಕಷ್ಟವಾಗುತ್ತದೆ. ಅವರು ಫೈಲಿನ ಎಲ್ಲಾ ಹಾಳೆಗಳನ್ನು ಮತ್ತೊಮ್ಮೆ ಬಿಡಿಸಿ ವಿಳಾಸ ಪತ್ತೆ ಮಾಡಿ ಮತ್ತೆ ಎಲ್ಲಾ ಪತ್ರಗಳನು ಜೋಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ವಿಳಾಸವನ್ನು ಎಡಗಡೆಯೇ ಬರೆಯುವುದು ಸೂಕ್ತ.

15ನೇ ಜೂನ್ 1000

ಇದು ಪತ್ರ ಬರೆದ ದಿನಾಂಕ ಪತ್ರವನ್ನು ಎಂದು ಬರೆದದ್ದು ಎಂಬದನ್ನು ತಿಳಿಯುವುದು ವ್ಯವಹಾರದಲ್ಲಿ ಬಹಳ ಮುಖ್ಯ.

ಮುಂದೆ ಈ ವಿಷಯದಲ್ಲಿ ಪತ್ರ ವ್ಯವಹಾರಗಳು ನಡೆದಾಗ ಈ ಹಿಂದೆ ಯಾವ ಯಾವ ದಿನಗಳಲ್ಲಿ ಪತ್ರ ಬರೆದಿತ್ತು ಎಂಬುದನ್ನು ತಿಳಿಸಬೇಕಾಗುತ್ತದೆ. ಅಲ್ಲದೆ ಪತ್ರಗಳನ್ನು ಅನುಕ್ರಮವಾಗಿ ಫೈಲಿಗೆ ಜೋಡಿಸಿಕೊಳ್ಳಲೂ ದಿನಾಂಕ ಬಹಳ ಮುಖ್ಯ. ಕೆಲವರು ಇದರ ಹಿಂದೆ 'ದಿನಾಂಕ' ಇಲ್ಲವೆ 'ತಾರೀಖು' ಎಂಬ ಪದವನ್ನು ಬರೆಯುತ್ತಾರೆ. ಅಥವಾ ಸಂಕ್ಷಿಪ್ತವಾಗಿ ತಾ. ಇಲ್ಲವೆ ದಿ. ಎಂದು ಬರೆಯುತ್ತಾರೆ. ಅದನ್ನು ಬರೆಯದೆ ಇದ್ದರೂ ತಪ್ಪಲ್ಲ. ಈ ದಿನಾಂಕಗಳನ್ನು ಬಗೆ ಬಗೆಯಾಗಿ ಬರೆಯುತ್ತಾರೆ.

**ಉದಾ: 15.06.2018, 15.06.2018, 15.06.2018, ಜೂನ 15.06.2018, 15ನೇ ಜೂನ್, 2018 ಜೂನ್ 2018, 2018 ಜೂನ 15 – ಈ ರೀತಿ ಬರೆಯುತ್ತಾರೆ. ಈ ಪತ್ರದಲ್ಲಿ ಕೊಟ್ಟಿರುವಂತೆ ದಿನಾಂಕವನ್ನು ಬರೆಯುವುದು ಹೆಚ್ಚು ಸೂಕ್ತ.**

ಇದನ್ನು ಒಳವಿಳಾಸ ಎನ್ನುತ್ತಾರೆ. ನಾವು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸ ಇದು. ಲಕೋಟೆಯ ಮೇಲೆ ಸ್ಟಾಂಪ್ ಹಚ್ಚಿ ವಿಳಾಸವನ್ನು ಬರೆಯುವುದರಿಂದ ಈ ಒಳವಿಳಾಸವನ್ನು ಈ ಪತ್ರದಲ್ಲೂ ಬರೆಯಬೇಕೆ? ಎಂಬ ಪ್ರಶ್ನೆ ಉಂಟಾಗುತ್ತದೆ. ಯಾವುದೇ ಕಚೇರಿಗೂ ಲಕೋಟೆಗಳು ಬಂದಾಗ ಅವುಗಳನ್ನು ಒಡೆದು ಲಕೋಟೆಯನ್ನು ಕಸದ ಬುಟ್ಟಿಗೆ ಹಾಕುತ್ತಾರೆ. ಆದ್ದರಿಂದ ಪತ್ರದಲ್ಲಿ ಒಳವಿಳಾಸ ಬೇಕು. ಈ ಒಳವಿಳಾಸವಿಲ್ಲದಿದ್ದರೆ ಈ ಕಚೇರಿಯ ಯಾವ ಅಧಿಕಾರಿಗೆ ಈ ಪತ್ರ ಸಂಬಂಧಪಟ್ಟದ್ದು ಎಂಬುದು ಗೊತ್ತಾಗುವುದಿಲ್ಲ. ಇದನ್ನು ಪತ್ರದ ಪ್ರಾರಂಭದ ಎಡಭಾಗದಲ್ಲಿ ಮೇಲೆ ಸ್ವಲ್ಪ ಜಾಗಬಿಟ್ಟು ಬರೆಯಬೇಕು. ಮೇಲೆ ಜಾಗ ಬಿಡುವುದರಿಂದ ಪತ್ರಕ್ಕೆ ಸಂಬಂಧಪಟ್ಟ ಫೈಲ್ ಸಂಖ್ಯೆ ಮೊದಲಾದವನ್ನು ಕಚೇರಿಯ ವಿಷಯ ನಿರ್ವಾಹಕರು ಬರೆದುಕೊಳ್ಳಲು ಅನುಕೂಲವಾಗುತ್ತದೆ.

### ಮಾನ್ಯರೆ

ಇದನ್ನು ಗೌರವ ಸಂಬೋಧನೆ ಎನ್ನುತ್ತೇವೆ. ಒಬ್ಬರು ಇನ್ನೊಬ್ಬರನ್ನು ಸಂಧಿಸಿದಾಗ ವಂದನೆ ಮಾಡುವಂತೆ ಪತ್ರ ಆರಂಭಿಸುವಾಗ ವಿಳಾಸದಾರರಿಗೆ ಸಲ್ಲಿಸುವ ಮರ್ಯಾದೆಯೇ ಗೌರವ ಸಂಬೋಧನೆ. ಬ್ರಿಟಿಷ್ ಮತ್ತು ಮುಸಲ್ಮಾನರ ಆಡಳಿತದ ಕಾಲದಲ್ಲಿ 'ಸ್ವಾಮಿ', 'ಖಾವಂದರು' ಮೊದಲಾದ ಶಬ್ದಗಳನ್ನು ಬಳಸುತ್ತಿದ್ದರು. ಈಗ 'ಮಾನ್ಯರೆ' ಎಂಬ ಪದವನ್ನು ಬಳಸಲಾಗುತ್ತಿದೆ.

### ವಿಷಯ

ಪತ್ರದಲ್ಲಿ ಇರುವ ವಿಷಯದ ಉದ್ದೇಶವನ್ನು ಒಂದೆರಡು ಸಾಲುಗಳಲ್ಲಿ ಪತ್ರವನ್ನು ವಿವರವಾಗಿ ಬರೆಯುವುದಕ್ಕೆ ಮುಂಚೆ ಹೇಳಬೇಕು. ವಿಷಯ ಬರೆಯುದಿದ್ದರೆ ಪತ್ರವನು ಪೂರ್ತಿ ಓದಬೇಕಾಗುತ್ತದೆ. ಆದರೆ ಒಂದು ಕಚೇರಿಗೆ ಬರುವ ನೂರಾರು ಪತ್ರಗಳನ್ನು ಒಬ್ಬನೆ ಓದುವುದು ಕಷ್ಟವಾಗುತ್ತದೆ. ವಿಷಯ ಬರೆದಿದ್ದರೆ ಪತ್ರಗಳನ್ನು ಸುಲಭವಾಗಿ ವಿಂಗಡಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ತಲುಪಿಸಿ ಕ್ರಮಕೈಗೊಳ್ಳಲು ಅನುಕೂಲವಾಗುತ್ತದೆ.

### ಒಡಲು

ಇದರಲ್ಲಿ ನಾವು ಬರೆಯಬೇಕಾದ ವಿಷಯವನ್ನು ಸಂಪೂರ್ಣವಾಗಿ ಸಾಧ್ಯವಿದ್ದಷ್ಟು ಸಂಕ್ಷಿಪ್ತವಾಗಿ, ಸ್ಪಷ್ಟವಾಗಿ, ಸರಳವಾಗಿ ಬರೆಯಬೇಕು. ಒಂದೇ ಪತ್ರದಲ್ಲಿ ಅನೇಕ ವಿಷಯಗಳನ್ನು ತಿಳಿಸಬೇಕಾಗಿದ್ದರೆ ಒಂದೊಂದು ವಿಷಯಕ್ಕೆ ಒಂದೊಂದು ಕಂಡಿಕೆ (ಪರಿಚ್ಛೇದ) ಮಾಡಬೇಕು. ಆದರೆ ಸಂಸ್ಥೆ ಮತ್ತು ಸರ್ಕಾರಿ ಕಚೇರಿಗಳಿಗೆ ಬರೆಯುವ ಪತ್ರಗಳಲ್ಲಿ ಬೇರೆ ಬೇರೆ ವಿಷಯಗಳಿಗೆ ಬೇರೆ ಬೇರೆ ಪತ್ರಗಳನ್ನು ಬರೆಯುವುದು ಸೂಕ್ತ ಈ ಒಡಲಿನ ವಿವರ ಮುಗಿದ ಮೇಲೆ 'ವಂದನಗಳೊತನೆ' ಅಥವಾ 'ನಮಸ್ಕಾರಗಳೊಡನೆ' ಎಂಬ ಮಾತನ್ನು ಸೇರಿಸುವುದು ಸೌಜನ್ಯ.

### ತಮ್ಮ ವಿಶ್ವಾಸಿ

ಹೇಳಬೇಕಾದ ವಿಷಯವನ್ನು ಹೇಳಿದ ಅನಂತರ ಪತ್ರವನ್ನು ಅಭಿವಂದನೆಯೊಡನೆ ಮುಗಿಸಬೇಕು. ಪತ್ರದ ಒಡಲಿನಲ್ಲಿ 'ತಮ್ಮ' ಪದ ಬಳಸಿದ್ದರೆ 'ತಮ್ಮ ವಿಶ್ವಾಸಿ' ಎಂದೂ ನಿಮ್ಮ 'ಎಂಬ ಪದವನ್ನು ಬಳಸಿದ್ದರೆ 'ನಿಮ್ಮ ವಿಶ್ವಾಸಿ' ಎಂದು ಬರೆಯಬೇಕು.

### ಸಹಿ

ಅಭಿವಂದನೆಯಾದ ಮೇಲೆ ಪತ್ರ ಬರೆದವರು ತಮ್ಮ ಸಹಿ ಹಾಕಬೇಕು. ಸಹಿ ಇಲ್ಲದ ಪತ್ರಕ್ಕೆ ಬೇಲೆ ಇಲ್ಲ ಮತ್ತು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಸಹಿಯ ಕೆಳಗಡೆ ಸಹಿ ಮಾಡಿದವರ ಹೆಸರನ್ನು ಬರೆಯುವುದುಂಟು ಆದರೆ ಈ ರೀತಿ ಹೆಸರು ಬರೆಯುವುದು ಐಚ್ಛಿಕ. ಸಹಿ ಅಸ್ಪಷ್ಟವಾಗಿದ್ದರೆ ಇದು ಬೇಕಾಗುತ್ತದೆ.

## ಮಾದರಿ -1

ಶೈಕ್ಷಣಿಕ ಪ್ರವಾಸಕ್ಕಾಗಿ ಹಣ ಕಳುಹಿಸುವಂತೆ ಕೋರಿ ತಾಯಿಯವರಿಗೆ ಪತ್ರ ಬರೆಯಿರಿ.

ಇಂದ,
ನವೀನ ಕುಮಾರ
ನೂತನ ಕನ್ನಡ ವಿದ್ಯಾಲಯ
ನವರಸಪುರ
ತಾ/ಜಿ:- ವಿಜಯಪುರ
ದಿನಾಂಕ.

ಇವರಿಗೆ,
ಶ್ರೀಮತಿ ಕಮಲಾಬಾಯಿ.
ಅಂಚೆ/ವಸತಿ - ಆಲಮಟ್ಟಿ
ತಾ. ಬಸವನ ಬಗೇವಾಡಿ
ಜಿ. ವಿಜಯಪುರ

ಪೂಜ್ಯ ಮಾತೋಶ್ರೀವರಿಗೆ ತಮ್ಮ ಮಗನಾದ ನವೀನಕುಮಾರನು ಮಾಡುವ ದೀರ್ಘದಂಡ ನಮಸ್ಕಾರಗಳು. ಮನೆಯಲ್ಲಿ ದೇವರ ದಯದಿಂದ ತಾವೆಲ್ಲರೂ ಸೌಖ್ಯವಾಗಿರುವಿರೆಂದು ಭಾವಿಸುತ್ತೆನೆ. ನಾನು ಕೂಡಾ ನನ್ನ-ಅಭ್ಯಾಸದೊಂದಿಗೆ ಆರಾಮವಾಗಿದ್ದೆನೆ.

ಈಗ ನಮ್ಮ ಶಾಲೆಯಲ್ಲಿ ಪ್ರೇಕ್ಷಣೀಯನ್ನು ಸ್ಥಳಗಳನ್ನು ನೋಡಲು ಶೈಕ್ಷಣಿಕ ಪ್ರವಾಸವನ್ನು ಹಮಿಕೊಂಡಿದ್ದಾರೆ. ನಾವು ನೋಡಲು ಬಾಲ್ಯದಿಂದಲೂ ಕನಸನ್ನು ಕಾಣತ್ತಿದ್ದೆ. ವರ್ಗದ ಗುರುಗಳ ನನಗೆ ಬರಲು ಆಗ್ರಹ ಪಡಿಸುತ್ತಿದ್ದಾರೆ. ನನಗೆ ಪ್ರವಾಸಕ್ಕಾಗಿ 2200 ರುಪಾಯಿಗಳು ಬೇಕಾಗಿವೆ. ಕಳುಹಿಸಿ ಕೊಡುವಿರೆಂದು ನಂಬಿದ್ದೇನೆ.

ಮನೆಯಲ್ಲಿ ಎಲ್ಲಿ ಹಿರಿಯರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ತಮ್ಮೆಲ್ಲರ ಯೋಗಕ್ಷೇಮದ ಬಗ್ಗೆ ಪತ್ರ ಬರೆಯಿರಿ.

ಸ್ಥಳ -ನವರಸಪುರ

ಇಂತಿ ತಮ್ಮ ಪ್ರೀತಿಯ ಮಗ
(ನವೀನಕುಮಾರ)

## ಮಾದರಿ -2

ನಿಮ್ಮೂರ ಜಾತ್ರೆಗೆ ಬರುವಂತೆ ಕೋರಿ ನಿಮ್ಮಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

ಇಂದ,
ಶಿವಶಂಕರ
ನೂತನ ಕನ್ನಡ ವಿದ್ಯಾಲಯ
ಚಂದ್ರಗಿರಿ
ತಾ/ಜಿ:- ವಿಂದ್ಯಾಗಿರಿ

ಇವರಿಗೆ,
ವಿಜಯಕುಮಾರ
ಅಂಚೆ/ವಸತಿ - ಬಾಗಲಕೋಟ
ತಾ.ಜಿ. ಬಾಗಲಕೋಟ

ನಲುಮೆಯ ಸ್ನೇಹಿತನಾದ ಅ. ಬ. ಕ ನಿಗೆ ನಿನ್ನ ಗೆಳೆಯ ಮಾಡುವ ವಂದನೆಗಳು. ನಾನು ಚೆನ್ನಾಗಿದ್ದೇನೆ ನೀನು ಕೂಡಾ ಚೆನ್ನಾಗಿರುವೆಂದು ಭಾವಿಸುತ್ತೇನೆ.

ಎಪ್ರಿಲ್ ತಿಂಗಳ ಕೊನೆಯವಾರದಲ್ಲಿ ನಮ್ಮೂರ ಶ್ರೀ ಶಂಕರಲಿಂಗೇಶ್ವರ ಜಾತ್ರೆ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಆ ವೇಳೆಗೆ ವಾರ್ಷಿಕ ಪರೀಕ್ಷೆ ಮುಗಿದಿರುತ್ತವೆ. ಆದಕಾರಣ ನೀನು ಜಾತ್ರೆಗೆ ಬರಬೇಕೆಂದು ವಿನಂತಿಸುತ್ತೇನೆ.

ಮನೆಯಲ್ಲಿ ಎಲ್ಲ ಹಿರಿಯರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು. ತಮ್ಮೆಲ್ಲರ ಯೋಗಕ್ಷೇಮದ ಬಗ್ಗೆ ಪತ್ರ ಬರೆಯಿರಿ.

ಸ್ಥಳ -ಚಂದ್ರಗಿರಿ

ಇಂತಿ ನಿನ್ನ ಸ್ನೇಹಿತ
(ಶಿವಶಂಕರ)

## ಮಾದರಿ -3

ಸೈನಿಕ ನಗರದ ಮುಖ್ಯ ರಸ್ತೆಗೆ ಬೀದಿದೀಪ ಹಾಕಿಸುವಂತೆ ಕೋರಿ ಗ್ರಾಮ ಪಂಚಾಯಿತಿಗೆ ಅರ್ಜಿ ಬರೆಯಿರಿ.

ದಿನಾಂಕ - 19-09-2018
ಸ್ಥಳ - ಸೈನಿಕ ನಗರ

ಇವರಿಂದ,
ನಾಗರಿಕರು
ಸೈನಿಕನಗರ
ನವರಸಪುರ
ತಾ/ಜಿ:- ವಿಜಯಪುರ

ಇವರಿಗೆ,
ಅಧ್ಯಕ್ಷರು
ಗ್ರಾಮ ಪಂಚಾಯಿತಿ ಕಚೇರಿ
ನವರಸಪುರ
ತಾ/ಜಿ:- ವಿಜಯಪುರ

ಮಾನ್ಯರೇ:

**ವಿಷಯ: ಬೀದಿದೀಪ - ಅಳವಡಿಸುವಂತೆ ಕೋರಿ ಮನವಿ.**

ಸೈನಿಕ ನಗರದ ಮುಖ್ಯ ಬೀದಿಯಲ್ಲಿ ಬೀದಿ ದೀಪಗಳು ಇಲ್ಲದಿರುವುದರಿಂದ ಜನರಿಗೆ ಬಹಳಷ್ಟು ತೊಂದರೆಯಾಗಿದೆ ಆ ಕಾರಣದಿಂದ ರಾತ್ರಿ ಹೊತ್ತಿನಲ್ಲಿ ಸಂಚರಿಸಲು ಆಗುವದಿಲ್ಲ ಆದುದರಿಂದ ಗ್ರಾಮ ಪಂಚಾಯಿತಿಯ ವತಿಯಿಂದ ದಾರಿ ದೀಪ ಹಾಕಿಸಬೇಕಾಗಿ ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ

ಇಂತಿ ತಮ್ಮ ವಿಶ್ವಾಸಕರು
(ಸೈನಿಕ ನಗರದ ನಾಗರಿಕರರು)
1) .............................
2) .............................
3) .............................
4) .............................

### ಮಾದರಿ -4

## ಗ್ರಾಹಕರ ವೇದಿಕೆಗೆ

ದಿನಾಂಕ – 9-09-2018

ಸ್ಥಳ – ನವರಸಪುರ

ಇವರಿಂದ,

ಅರವಿಂದಕುಮಾರ

ಸೈನಿಕನಗರ

ನವರಸಪುರ

ವಿಜಯಪುರ

ಇವರಿಗೆ,

ಉಪ ನಿರ್ದೇಶಕರು

ಜಿಲ್ಲಾ ಗ್ರಾಹಕರವೇದಿಕೆ

ವಿಜಯಪುರ

ಮಾನ್ಯರೇ:

**ವಿಷಯ: ಕಳಪೆ ಗುಣಮಟ್ಟದ ಸಂಗಣಕ ಪೂರೈಸಿದ ಕುರಿತು.**

ನಾನು ಕಳೆದ ತಿಂಗಳ ಒಂದು ಹೊಸ ಸಂಗಣಕವನ್ನು ಸಿದ್ದೇಶ್ವರ ಇಲೆಕ್ಟ್ರಾನಿಕ್ ಅಂಗಡಿಯಲ್ಲಿ ಖರೀದಿಸಿದ್ದೆ. ಆದರೆ ಅದು ಹದಿನೈದು ದಿನಗಳಲ್ಲಿ ಕೆಟ್ಟು ಹೋಗಿದೆ. ಗ್ಯಾರಂಟಿ ಮತ್ತು ವಾರಂಟಿ ಇದ್ದರೂ ಅಂಗಡಿಯವರು ಬೇರೆ ಹೊಸ ಸಂಗಣಕ ಕೊಡಲು ಒಪ್ಪುತ್ತಿಲ್ಲ. ಕಾರಣ ತಾವು ನನ್ನ ದೂರನ್ನು ಅವಲೋಕಿಸಿ ಅಂಗಡಿಯವರ ಮೇಲೆ ಯೋಗ್ಯ ಕ್ರಮ ಜರುಗಿಸಿ ನನಗೆ ನ್ಯಾಯ ಕೊಡಿಸಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ತಮ್ಮಿಂದ ನನಗೆ ಯೋಗ್ಯ ನ್ಯಾಯ ದೊರೆಯುವುದೆಂಬ ವಿಶ್ವಾಸವಿದೆ.

ಧನ್ಯವಾದಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ

(ಅರವಿಂದಕುಮಾರ)

ಜೊತೆಗೆ – ರಸೀದಿ ಮತ್ತು ಗ್ಯಾರಂಟಿ ಕಾರ್ಡಗಳ ಪ್ರತಿ ಲಗತ್ತಿಸಿದ್ದೇನೆ

## 2. ಮಾದರಿ ಕಥಾ ಲೇಖನ :

1 ಕೆಳಗೆ ಕೊಟ್ಟಿರುವ ಅಂಶಗಳ ಸಹಾಯದಿಂದ ಕಥೆ ಪೂರ್ಣಗೊಳಿಸಿ ಯೋಗ್ಯ ತಲೆಬಹಳ ಕೊಡಿರಿ.

ಹಸವಿನಿಂದ ನರಳುತ್ತಿದ್ದ ನರಿ..........................ಮರದ ಮೇಲೆ ಕುಳಿತಿದ್ದ ಕಾಗೆಯ ಬಾಯಲ್ಲಿ ಮಾಂಸದ ತುಂಡು .............. ನಿನ್ನ ರೂಪು ಅಂದ, ನಿನ್ನ ಧ್ವನಿ ಚಂದ ಎಂದು ನರಿ............................ ಯನ್ನು ಹೊಗಳಿದ್ದು ಕಾಗೆ ಹಾಡಲು ಬಾಯ್ತೆರೆದದ್ದು.................... ಕೆಳಗೆ ಬಿದ್ದ ಮಾಂಸದ ತುಂಡು................................ ನರಿಯ ಸಂತೋಷ............................ ಕತೆಯಲ್ಲಿ ಅಡಗಿರುವ ನೀತಿ.

2 ಕೊಟ್ಟ ಕಥೆಯ ಮುಂದಿನ ಭಾಗವನ್ನು ಮಾತ್ರ ಬರೆಯಿರಿ.

ನಾಲ್ಕು ಜನ ಕಳ್ಳರು-ಕೂಡಿಕೊಂಡ ಒಬ್ಬ ಶ್ರಿಮಂತನ ಮನೆಗೆ ಕನ್ನಹಾಕಿ ಅಪಾರ ಬಂಗಾರ, ಬೆಳ್ಳಿ, ಹಣ, ದೋಚಿ ಹೋಗುವಾಗ ನಾಲ್ವರು ಹಸಿವಿನಿಂದ ಬಳಲಿದರು. ಅದರಲ್ಲಿ ಇಬ್ಬರು ಸಮೀಪದ ಊರಿಗೆ.................................................................
.....................................................................................................................
.....................................................................................................................
.....................................................................................................................
.....................................................................................................................

# 3. ಭಾಷಣ ಕಲೆ

## ಭಾಷಣದಲ್ಲಿ ಬರಬೇಕಾದ ಅಂಶಗಳು


ನಮ್ಮ ಭಾವನೆ, ಕಲ್ಪನೆ ಮತ್ತು ಅನುಭವಗಳನ್ನು ಮಾತುಗಾರಿಕೆ ಮತ್ತು ಬರವಣಿಗೆಯ ಮೂಲಕ ವ್ಯಕ್ತಪಡಿಸುತ್ತೇವೆ. ಮಾತು ಮತ್ತು ಬರಹ ಎಷ್ಟೆಷ್ಟು ಸಮರ್ಥವಾಗಿರುತ್ತದೋ ಅಷ್ಟರ ಮಟ್ಟಿಗೆ ಸಮರ್ಥವಾಗಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು.

ವಿದ್ಯಾರ್ಥಿಯ ವ್ಯಕ್ತಿತ್ವ ವೃದ್ಧಿಗೆ ಬರವಣಿಗೆ ಮತ್ತು ಭಾಷಣಗಳು ನೆರವಾಗುತ್ತವೆ. ನಮ್ಮ ನಿತ್ಯ ಜೀವನದಲ್ಲಿ ಅನೇಕರ ಭಾಷಣಗಳನ್ನು ಕೇಳಿರುತ್ತೇವೆ. ಕೆಲವರ ಭಾಷಣಗಳು ತಲೆನೋವು ತರುತ್ತವೆ. ಮತ್ತೆ ಕೆಲವರ ಭಾಷಣಗಳು ಬೋಧಪ್ರದವಾಗಿರುತ್ತವೆ; ಆಹ್ಲಾದವುಂಟು ಮಾಡುತ್ತವೆ. ಕೆಲವರು ವಿದ್ಯಾರ್ಥಿಗಳಿಗಂತೂ ಭಾಷಣವೆಂದರೆ ಕೈಕಾಲು ನಡುಕವುಂಟಾಗುತ್ತದೆ. ಸಭಾಕಂಪನದಿಂದ ತತ್ತರಿಸಿ ಹೋಗುತ್ತಾರೆ. ಅದರೆ ಸತತ ಪ್ರಯತ್ನದಿಂದ ಕೆಲವರಾದರೂ ಉತ್ತಮ ಭಾಷಣಕಾರರಾಗಲು ಸಾಧ್ಯ.

ಶಾಲಾ ಕಾಲೇಜುಗಳಲ್ಲಿ ನಡೆವ ಸಭೆ ಸಮಾರಂಭಗಳಲ್ಲಿ ವಿದ್ಯಾರ್ಥಿಗಳು ಭಾಷಣ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸಬೇಕು. ಅನುಭವೀ ಭಾಷಣಕಾರರ ಮಾತುಗಾರಿಕೆಯನ್ನು ಕೇಳಬೇಕು. ತಾವೂ ಹಾಗೂ ಭಾಷಣ ಮಾಡಲು ಸತತ ಪ್ರಯತ್ನ ಮಾಡಬೇಕು. ಹಾಗಾಗಲು ಕೆಲವು ಮುಖ್ಯ ಅಂಶಗಳನ್ನು ಅರಿತು ಆಚರಿಸಬೇಕು.

ಭಾಷಣಕಾರರಿಗೆ ಮೊದಲನೆಯ ಆಗತ್ಯವೆಂದರೆ ವಿಷಯ ಸಂಗ್ರಹಣೆ. ಭಾಷಣದ ವಿಷಯಕ್ಕೆ ಬೇಕಾಗುವ ವಿಚಾರಗಳನ್ನು ಅಧ್ಯಾಪಕರಿಂದಲೂ, ಬೇರೆ ಬೇರೆ ಗ್ರಂಥಗಳು ಪತ್ರಿಕೆಗಳಿಂದಲೂ ಸಂಗ್ರಹಿಸಬೇಕು. ವಿಷಯಗಳನ್ನು ಕ್ರೋಢಿಕರಿಸಿ ಚಿಕ್ಕ ಟಿಪ್ಪಣಿ ತಯಾರಿಸಿಕೊಳ್ಳಬೇಕು. ಹೇಗೆ ಪ್ರಾರಂಭಿಸಬೇಕು, ಮೊದಲು ಹೇಳಬೇಕಾದ್ದೇನು, ಯಾವ ಯಾವ ವಿಷಯಗಳನ್ನು ವಿವರಿಸಬೇಕು. ಹೇಗೆ ಮುಕ್ತಾಯಗೊಳಿಸಬೇಕು. ಈ ಬಗ್ಗೆ ಮನೆಯಲ್ಲೇ ಒಂದೆರಡು ಸಲ ಅಭ್ಯಾಸ ಮಾಡಿಕೊಳ್ಳಬೇಕು. ವಿಷಯಕ್ಕೆ ಸಂಬಂಧಿಸಿದ ಗಾದೆ ಮಾತುಗಳು, ಕವಿಗಳ ಮಾತುಗಳನ್ನು ಮಧ್ಯೆ ಮಧ್ಯೆ ವಿವರಿಸಬೇಕು. ಭಾಷೆ ಸಹಜವಾಗಿಯೂ ಸುಂದರವಾಗಿಯೂ ಇರಬೇಕು. ವಿಷಯ ಸಂಗ್ರಹ ಚೆನ್ನಾಗಿದ್ದರೆ ಭಾಷಣ ಮಾಡಲು ಭಯವಿರುವುದಿಲ್ಲ ಸಂದರ್ಭಕ್ಕೆ ಅನುಸಾರ ಧ್ವನಿಯಲ್ಲಿ ಏರಿಳಿತ ಇರಬೇಕು. ಭಾಷಣದ ಪ್ರಾರಂಭದಲ್ಲಿ ಸಭೆಯ ಅಧ್ಯಕ್ಷರನ್ನೂ, ಇನ್ನುಳಿದ ಮುಖ್ಯರನ್ನು ಗೌರವಯುತ ರೀತಿ ಸಂಬೋಧಿಸಬೇಕು. ಭಾಷಣಕ್ಕೆ ಕೊಟ್ಟಿರುವ ವೇಳೆಯನ್ನು ಮೀರಿ ಮಾತಾಡಬಾರದು. ಸ್ವಲ್ಪ ವೇಳೆ ಇರುವಾಗಲೇ ಮುಕ್ತಾಯಗೊಳಿಸುವುದು ಇನ್ನೂ ಉತ್ತಮ. ಸಭಿಕರಿಗೆ ಬೇಸರ ಬರದಂತ ಮಾತುಗಾರಿಕೆ ಆಕರ್ಷಕವಾಗಿರಬೇಕು. ಯಾವುದೇ ರೀತಿಯ ಅಶ್ಲೀಲ ಶಬ್ದಗಳನ್ನಾಗಲೀ ಅಹಂಕಾರದ ಮಾತುಗಳನ್ನಾಗಲೀ ಆಡಬಾರದು. ಇದೆಲ್ಲವೂ ಅಭ್ಯಾಸಬಲದಿಂದ ಬರತಕ್ಕ ವಿಷಯ. ಒಂದೆರಡು ಸಭೆಗಳಲ್ಲಿ ಮಾತಾಡಿದರೆ ಕ್ರಮೇಣ ಧೈರ್ಯ ಬರುತ್ತದೆ. ಬೇರೆ ಬೇರೆ ಉಜ್ವಲ ಭಾಷಣಕಾರರ ಭಾಷಣಗಳನ್ನು ಕೇಳುವುದೂ ಸಹಕಾರಿಯಾಗುತ್ತದೆ.


किशोर
कथा, कविता, कादंबरीका, एकांकिका,
दीर्घकथा, गंमतगाणी, ललित, छंद, चरित्र,
विज्ञान, देश-देशांतर, लोककथा
लोकप्रिय व अभिरुचिसंपन्न किशोर
मासिकातील चाळीस वर्षांतील
निवडक साहित्यांवर आधारित
'निवडक किशोर'चे १४ खंड
किंमत प्रत्येकी
₹१६३/-
(30% सूट)
वरील खंड पाठ्यपुस्तक मंडळाच्या सर्व भांडारांत विक्रीसाठी
उपलब्ध आहेत. १४ खंडांची एकूम किंमत ₹ १६००/-
किशोर
वरील खंडांच्या खरेदीसाठी मंडळाच्या पुढील विभागीय भांडारांशी संपर्क साधा.
पुणे (०२०- २५६५९४६५), मुंबई (गोरेगाव) (०२२-२८७७१८४२), औरंगाबाद (०२४०- २३३२१७१),
नागपूर (०७१२-२५२३०७८/ २५४७७१६), नाशिक (०२५३- २३९१५११), लातूर (०२३८२- २२०९३०),
कोल्हापूर (०२३०- २४६८५७६), अमरावती (०७२१-२५३०९६५), पनवेल (०२२- २७४६२६४५)




ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪

बालभारती इयत्ता आठवी (कन्नड)

₹ 49.00